
ಮಂಗಳವಾರ, ಏಪ್ರಿಲ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 115 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಸರಿ-ತಪ್ಪುಗಳ ಜಿಜ್ಞಾಸೆ, ಆತ್ಮವಿಶ್ವಾಸ, ವಿವೇಚನೆ, ಸ್ವಸಾಮರ್ಥ್ಯದ ಮೇಲಿನ ನಂಬಿಕೆ – ಇವುಗಳು ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕ.



ಆಳ-ಅಗಲ
ಅಕ್ಷಯಪಾತ್ರೆ ಐಪಿಎಲ್

ಷೇರುಪೇಟೆ ಕುಸಿತ: ಎರಡು ದಿನಗಳಲ್ಲಿ ₹6.47 ಲಕ್ಷ ಕೋಟಿ ನಷ್ಟ 10

ಅಕ್ರಮಕ್ಕೆ ಮೃತ ನೌಕರನ ಮೊಬೈಲ್ ಬಳಕೆ 5

ಸೆನ್ಸೆಕ್ಸ್	ನಿಫ್ಟಿ	₹/$
56,579	16,953	76.64

ಕೋವಿಡ್ ನಾಲ್ಕನೇ ಅಲೆ ಸಾಧ್ಯತೆ: ತಜ್ಞರು, ಅಧಿಕಾರಿಗಳ ಜತೆ ಬೊಮ್ಮಾಯಿ ಚರ್ಚೆ

ಮಾಸ್ಕ್ ಕಡ್ಡಾಯ, ಉಗುಳಿದರೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಾಲ್ಕನೇ ಅಲೆ ಬರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸುವುದೂ ಸೇರಿ ಕೆಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ತಾಂತ್ರಿಕ ಸಲಹಾ ಸಮಿತಿ ನಿರ್ಧರಿಸಿದೆ.

ದೆಹಲಿ, ಹರಿಯಾಣ ಮತ್ತು ತಮಿಳುನಾಡಿನಲ್ಲಿ ಕೋವಿಡ್ ಪ್ರಮಾಣ ಏರಿಕೆ ಆಗಿರುವ ಬೆನ್ನಲ್ಲೇ ಈ ಸಭೆ ನಡೆಯಿತು. ಸಭೆ ಮುಗಿದ ಕೂಡಲೇ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಅವರು ಈ ಕುರಿತ ಮಾರ್ಗಸೂಚಿಯನ್ನೂ ಹೊರಡಿಸಿದ್ದಾರೆ.

‘ರಾಜ್ಯದಲ್ಲಿ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿದರೆ ಎಷ್ಟು ದಂಡ ವಿಧಿಸಬೇಕು ಎಂಬ ಬಗ್ಗೆ ಸ್ಥಳೀಯ ಆಡಳಿತಗಳು ಕಾನೂನಿನ ಅನ್ವಯ ಪ್ರತ್ಯೇಕ ಆದೇಶ ಹೊರಡಿಸಬೇಕು’ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ?

- ಸಾರ್ವಜನಿಕ ಸ್ಥಳಗಳು, ಒಳಾಂಗಣ ಮತ್ತು ಪ್ರಯಾಣದ ಸಂದರ್ಭದಲ್ಲಿ ಮಾಸ್ಕ್ ಕಡ್ಡಾಯ.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿದರೆ ದಂಡ.
- ಸಾರ್ವಜನಿಕ ಪ್ರದೇಶಗಳಲ್ಲಿ ಎರಡು ಅಡಿ ಭೌತಿಕ ಅಂತರ ಕಾಯ್ದುಕೊಳ್ಳಬೇಕು



ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕಿನ ಪ್ರಮಾಣ ಹೆಚ್ಚಾಗಿದೆ. ಕೋವಿಡ್ ದೃಢ ಪ್ರಮಾಣ ಶೇ 1.9 ರಷ್ಟಿದೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಕೋವಿಡ್ ಹರಡದಂತೆ ವಿಶೇಷ ನಿಗಾ ಇಡಲು ತೀರ್ಮಾನಿಸಲಾಗಿದೆ. ಮೇಲ್ವಿಚಾರಣೆ ಮತ್ತು ಚಿಕಿತ್ಸೆ ನೀಡುವ ಸಂಬಂಧ ಮಾರ್ಗಸೂಚಿ ಹೊರಡಿಸಲಾಗುವುದು’ ಎಂದರು.

‘ವಿಶ್ವ ಆರೋಗ್ಯ ಸಂಸ್ಥೆಯ ಮಾಹಿತಿಯ ಪ್ರಕಾರ ಇನ್ನೂ ಕೋವಿಡ್ ಲಸಿಕೆ ತೆಗೆದುಕೊಳ್ಳದೇ ಇರುವವರು ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ. ಆಸ್ಪತ್ರೆಗೆ ಸೇರುತ್ತಿರುವವರಲ್ಲಿ ಇವರ ಸಂಖ್ಯೆಯೇ ಹೆಚ್ಚು. 60 ವರ್ಷ ಮೇಲ್ಪಟ್ಟವರಿಗೆ ಮೂರನೇ ಡೋಸ್ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಜನ ಮೂರನೇ ಡೋಸ್ ತೆಗೆದುಕೊಳ್ಳಲು ಬರುತ್ತಿಲ್ಲ. ನಾಲ್ಕನೇ ಅಲೆ ಬರುವ ತನಕ ಕಾಯುವುದು ಬೇಡ. ಆದಷ್ಟು ಬೇಗನೆ ತೆಗೆದುಕೊಂಡು ನಿಮ್ಮನ್ನು ನೀವು ರಕ್ಷಿಸಿಕೊಳ್ಳಿ’ ಎಂದು ಅವರು ಸಲಹೆ ನೀಡಿದರು.

ಮುಖ್ಯಾಂಶಗಳು

- ಮೂರು ದೇಶಗಳ ಪ್ರಯಾಣಿಕರ ಮೇಲೆ ನಿಗಾ
- ಬೆಂಗಳೂರಿನಲ್ಲಿ ಕೋವಿಡ್ ದೃಢ ಪ್ರಮಾಣ ಶೇ 1.9
- ನಾಲ್ಕನೇ ಅಲೆ ಸಾಧ್ಯತೆ ಬಗ್ಗೆ ಸರಣಿ ಸಭೆ

ವಿದೇಶಿಯರ ಮೇಲೆ ನಿಗಾ: ದಕ್ಷಿಣ ಕೊರಿಯಾ, ಥಾಯ್ಲೆಂಡ್, ಜಪಾನ್‌ನಿಂದ ಬರುವವರ ಮೇಲೆ ವಿಮಾನನಿಲ್ದಾಣಗಳಲ್ಲಿ ವಿಶೇಷ ನಿಗಾ ಇರಿಸಲಾಗುವುದು. ಅಲ್ಲಿಂದ ಬಂದವರು ಮನೆಯಲ್ಲಿ ಇದ್ದಾಗಲೂ ನಿಗಾ ಇಡಲಾಗುವುದು. ಅವರ ಜತೆ ಸಂಪರ್ಕ ಇಟ್ಟುಕೊಳ್ಳುವುದರ ಜತೆಗೆ ಟೆಲಿಮಾನಿಟರಿಂಗ್ ಮೂಲಕ ಅಗತ್ಯ ಸಲಹೆ ಸೂಚನೆ ನೀಡಲು ತೀರ್ಮಾನಿಸಲಾಗಿದೆ ಎಂದು ಡಾ.ಸುಧಾಕರ್ ತಿಳಿಸಿದರು.

ಈಗಿನ ಕೊರೊನಾ ತಳಿಯ ಬಗ್ಗೆ ಪ್ರಯೋಗಾಲಯದ ವರದಿಗಾಗಿ ಕಾಯುತ್ತಿದ್ದು ಯಾವ ತಳಿ ಎಂಬುದು ಆ ಬಳಿಕವೇ ಗೊತ್ತಾಗಲಿದೆ. ದೆಹಲಿ, ಮಹಾರಾಷ್ಟ್ರ, ಕೇರಳ ಮತ್ತು ತಮಿಳುನಾಡಿನಿಂದ ಬರುವ ಪ್ರಯಾಣಿಕರ ತಪಾಸಣೆ ಬಗ್ಗೆ ಏಪ್ರಿಲ್ 27ರ ಬಳಿಕ ಸಭೆ ನಡೆಸಲಾಗುತ್ತದೆ. ಪ್ರಧಾನಿಯವರು ಕೋವಿಡ್ ಕುರಿತ ಸಭೆಯನ್ನು ಮಾಡಿದ ಬಳಿಕ ಮತ್ತೊಂದು ಸಭೆ ನಡೆಸಲಾಗುವುದು. ಅಲ್ಲಿ ನೆರೆಯ ರಾಜ್ಯಗಳಿಂದ ಬರುವವರ ಮೇಲೆ ನಿಗಾ ಇಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಅವರು ಹೇಳಿದರು.

ಸಭೆಯಲ್ಲಿ ಕಂದಾಯ ಸಚಿವ ಆರ್. ಅಶೋಕ, ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರೂ ಹಾಜರಿದ್ದರು.

‘ನೈಸ್: ಹೆಚ್ಚುವರಿ ಭೂಮಿ ಹಿಂದಕ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ಕಂಪನಿಗೆ ನೀಡಿರುವ ಹೆಚ್ಚುವರಿ ಭೂಮಿಯನ್ನು ಹಿಂದಕ್ಕೆ ಪಡೆಯಲು ಸಚಿವ ಸಂಪುಟ ಉಪಸಮಿತಿ ಸಭೆ ಒಪ್ಪಿಗೆ ನೀಡಿದ್ದು, ಈ ಬಗ್ಗೆ ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಸೋಮವಾರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಅಕ್ಟೋಬರ್, ನವೆಂಬರ್ ವೇಳೆಗೆ ಹೆಚ್ಚುವರಿ ಭೂಮಿಯನ್ನು ವಾಪಸ್ ಪಡೆಯಲಾಗುವುದು ಎಂದರು.

ನೈಸ್ ರಸ್ತೆ ದೊಡ್ಡ ಸಮಸ್ಯೆ ಆಗಿದೆ. ಕಾಂಗ್ರೆಸ್ ಮತ್ತು ಜನತಾದಳ ಸರ್ಕಾರದಲ್ಲಿ ನೈಸ್ ರಸ್ತೆಗೆ ಬೇಕಾದ ಎಲ್ಲ ರೀತಿಯ ಅನುಮತಿ ನೀಡಲಾಗಿತ್ತು. ಈ ಯೋಜನೆಯಿಂದ ಬೆಂಗಳೂರಿನ ಜನರಿಗೆ ಅನುಕೂಲ ಆಗುವುದಕ್ಕಿಂತ ಹೊರೆಯಾಗಿದೆ. ರಸ್ತೆ ನಿರ್ಮಾಣದಲ್ಲಿ ಸಾಕಷ್ಟು ಉಲ್ಲಂಘನೆಗಳು ನಡೆದಿವೆ ಎಂದು ಅಶೋಕ ಹೇಳಿದರು.

2ನೇ ಪುಟ ನೋಡಿ

ಆರ್‌ಡಿಪಿಆರ್‌ಗೆ ₹ 269 ಕೋಟಿ ನಷ್ಟ: ಎಸಿಬಿಗೆ ಸಿಟಿ ಸಿವಿಲ್ ಕೋರ್ಟ್ ಸೂಚನೆ

ನಿವೃತ್ತ ಸಿಎಸ್ ವಿರುದ್ಧ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಕ್ರಮವಾಗಿ ಬ್ಯಾಂಕ್ ಖಾತೆಗಳನ್ನು ತೆರೆದು ರಾಜ್ಯದ ಬೊಕ್ಕಸಕ್ಕೆ ₹269 ಕೋಟಿ ನಷ್ಟ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಹಾಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಅಮಿತಾ ಪ್ರಸಾದ್ ಸೇರಿದಂತೆ ಒಟ್ಟು ಆರು ಜನ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ನಾಲ್ಕು ತಿಂಗಳಲ್ಲಿ ವರದಿ ಸಲ್ಲಿಸಿ’ ಎಂದು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಆದೇಶಿಸಿದೆ.

ದೂರು ದಾಖಲಿಸಿಕೊಳ್ಳದ ಎಸಿಬಿ

‘ಎಸಿಬಿಯ ಮಹಾನಿರ್ದೇಶಕರಿಗೆ 2019ರ ಡಿಸೆಂಬರ್ 26ರಂದು ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಫಿರ್ಯಾದುದಾರ ನಾರಾಯಣ ಸ್ವಾಮಿ ವಿಶೇಷ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಇದೀಗ ವಿಶೇಷ ನ್ಯಾಯಾಲಯದ (ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ದಾಖಲಾಗುವ ಪ್ರಕರಣದ ವಿಚಾರಣೆ) ನ್ಯಾಯಾಧೀಶ ಕೆ.ಲಕ್ಷ್ಮಿನಾರಾಯಣ ಭಟ್ ದೂರನ್ನು ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ್ದಾರೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆ -1988ರ ಕಲಂ 13(1), 13(2) ಮತ್ತು ಭಾರತೀಯ ದಂಡ ಸಂಹಿತೆಯ ಕಲಂ 465, 467, 468 ಮತ್ತು 471ರ ಅನುಸಾರ ತನಿಖೆಗೆ ನಿರ್ದೇಶಿಸಿದ್ದಾರೆ.

ಕೋಲಾರದ ಮಾಸ್ತಿ ಲೇಔಟ್‌ನ ಸಾಮಾಜಿಕ ಕಾರ್ಯಕರ್ತ ಎಸ್. ನಾರಾಯಣಸ್ವಾಮಿ ಸಲ್ಲಿಸಿರುವ ಖಾಸಗಿ ದೂರನ್ನು ಆಧರಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮಿನಾರಾಯಣ ಭಟ್ ಈ ಆದೇಶ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ (ಆರ್‌ಡಿಪಿಆರ್) ಪ್ರಧಾನ ಕಾರ್ಯದರ್ಶಿಗಳಾಗಿದ್ದ ಮೂವರು ಐಎಎಸ್ ಅಧಿಕಾರಿಗಳು, ಇಲಾಖೆ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಡಾ.ಬೋರೇಗೌಡ, ಗ್ರಾಮೀಣ ನೀರು ಸರಬರಾಜು ವಿಭಾಗದ ಉಪ ಕಾರ್ಯದರ್ಶಿಯಾಗಿದ್ದ ರಾಮಕೃಷ್ಣ, ಅಂದಿನ ಸಿಂಡಿಕೇಟ್ ಬ್ಯಾಂಕ್ (ಈಗ ಕೆನರಾ ಬ್ಯಾಂಕ್ ಜೊತೆ ವಿಲೀನವಾಗಿದೆ) ಮ್ಯಾನೇಜರ್ ಸೀಲಂ ಗಿರಿ ವಿರುದ್ಧ ರಾಜ್ಯ ಬೊಕ್ಕಸದ ₹ 3405.21 ಕೋಟಿ ಮೊತ್ತವನ್ನು ದುರ್ಬಳಕೆ ಮಾಡಿಕೊಂಡ ಆರೋಪ ಹೊರಿಸಲಾಗಿದೆ.

5ನೇ ಪುಟ ನೋಡಿ

ಅಂಗನವಾಡಿ ಸಿಬ್ಬಂದಿ ಗ್ರಾಚುಯಿಟಿಗೆ ಅರ್ಹರು: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಗ್ರಾಚುಯಿಟಿ ಕಾಯ್ದೆ 1972ರ ಅನ್ವಯ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅಂಗನವಾಡಿ ಕೇಂದ್ರಗಳು ಶಾಸನಬದ್ಧ ಕರ್ತವ್ಯ ನಿರ್ವಹಿಸುತ್ತಿವೆ ಮತ್ತು ಸರ್ಕಾರದ ಭಾಗವಾಗಿವೆ ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಅಭಯ್ ಎಸ್. ಓಕಾ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013ರ ಸೆಕ್ಷನ್ 11 ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯನ್ವಯವೂ ಅಂಗನವಾಡಿ ಕೇಂದ್ರಗಳು ಶಾಸನಬದ್ಧ ಕರ್ತವ್ಯ ನಿರ್ವಹಿಸುತ್ತಿವೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಪಾಕ್ ದೋಣಿಯಿಂದ ₹280 ಕೋಟಿ ಮೌಲ್ಯದ ಹೆರಾಯಿನ್ ವಶ

ಅಹಮದಾಬಾದ್ (ಪಿಟಿಐ): ಒಂಬತ್ತು ಜನರಿದ್ದ ಪಾಕಿಸ್ತಾನದ ದೋಣಿಯೊಂದನ್ನು ಗುಜರಾತ್ ತೀರದ ಸಮೀಪ ವಶಪಡಿಸಿಕೊಂಡಿರುವ ಕರಾವಳಿ ರಕ್ಷಣಾ ಪಡೆ ಮತ್ತು ಭಯೋತ್ಪಾದನಾ ನಿಗ್ರಹ ದಳವು, ₹280 ಕೋಟಿ ಮೌಲ್ಯದ ಹೆರಾಯಿನ್ ವಶಪಡಿಸಿಕೊಂಡಿದೆ ಎಂದು ರಕ್ಷಣಾ ಸಚಿವಾಲಯದ ವಕ್ತಾರರು ಸೋಮವಾರ ತಿಳಿಸಿದ್ದಾರೆ.

ಪಾಕಿಸ್ತಾನದ ದೋಣಿ ‘ಅಲ್ ಹಜ್’ ಭಾರತದ ಸಮುದ್ರ ಪ್ರದೇಶಕ್ಕೆ ಪ್ರವೇಶಿಸಿದಾಗ ಗಸ್ತು ಕಾರ್ಯಾಚರಣೆಯಲ್ಲಿದ್ದ ಕರಾವಳಿ ರಕ್ಷಣಾ ಪಡೆಯ ಹಡಗುಗಳು ಅದನ್ನು ವಶಕ್ಕೆ ಪಡೆದಿವೆ ಎಂದೂ ಹೇಳಿದ್ದಾರೆ.

1,439 ಕೋಟಿ ಮೌಲ್ಯದ ಹೆರಾಯಿನ್ ವಶ: ಕಳೆದ ವರ್ಷದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ನಡುವೆ ಇರಾನ್‌ನಿಂದ ಬಂದಿದ್ದ 17 ಕಂಟೈನರ್‌ಗಳ ಪೈಕಿ ಒಂದರಲ್ಲಿದ್ದ 1,439 ಕೋಟಿ ಮೌಲ್ಯದ 205.6 ಕೆ.ಜಿ. ಹೆರಾಯಿನ್ ಅನ್ನು ವಶಕ್ಕೆ ಪಡೆದಿದ್ದು, ಈ ಸಂಬಂಧ ಪಂಜಾಬ್‌ನ ಆಮದುದಾರನನ್ನು ಬಂಧಿಸಲಾಗಿದೆ ಎಂದು ಕಂದಾಯ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ಸೋಮವಾರ ತಿಳಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



64 ಜನರಿಗೆ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನ 64 ಪ್ರಕರಣಗಳು ಸೋಮವಾರ ಪತ್ತೆಯಾಗಿದೆ. ಬೆಂಗಳೂರಿನಲ್ಲಿ 63 ಪ್ರಕರಣಗಳು ಮತ್ತು ಮಂಗಳೂರಿನಲ್ಲಿ ಒಂದು ಪ್ರಕರಣ ದಾಖಲಾಗಿದೆ.

ಭಾನುವಾರ 8,263 ಜನರನ್ನು, ಸೋಮವಾರ 4,632 ಜನರನ್ನು ಪರೀಕ್ಷೆ ಮಾಡಲಾಗಿದೆ. ಏ.23ರಂದು 10,118 ಜನರನ್ನು ಪರೀಕ್ಷೆಗೆ ಒಳಪಡಿಸಿದಾಗ 139 ಜನರಲ್ಲಿ ಸೋಂಕು ದೃಢಪಟ್ಟಿತ್ತು. ಏ.22 ರಂದು 10,552 ಜನರಲ್ಲಿ ಪರೀಕ್ಷೆ ಮಾಡಲಾಗಿದ್ದು, 90 ಜನರಲ್ಲಿ ಸೋಂಕಿರುವುದು ಖಚಿತವಾಗಿತ್ತು. ಏ.21ರಂದು 9,714 ಜನರನ್ನು ಪರೀಕ್ಷೆಗೆ ಒಳಪಡಿಸಿದ್ದು, 100 ಜನರಲ್ಲಿ ಕೋವಿಡ್ ದೃಢಪಟ್ಟಿತ್ತು.

ಬಿಬಿಎಂಪಿ: 'ಬಿ– ಖಾತಾ'ವನ್ನು 'ಎ–ಖಾತಾ'ವನ್ನಾಗಿ ಪರಿವರ್ತಿಸುವ ಪ್ರಸ್ತಾವ

ಸುಧಾರಣಾ ವೆಚ್ಚ ಪಡೆದು ಖಾತಾ ನೀಡಲು ನಿರ್ಣಯ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಆಗದ 2007ಕ್ಕೂ ಹಿಂದಿನ ಕಂದಾಯ ಬಡಾವಣೆಗಳಲ್ಲಿನ ನಿವೇಶನಗಳಿಗೆ 2020ರ ಬಿಬಿಎಂಪಿ ಕಾಯ್ದೆಯಲ್ಲಿರುವ ಅವಕಾಶವನ್ನು ಬಳಸಿಕೊಂಡು ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು ಖಾತಾ/ ಆಸ್ತಿ ಗುರುತಿನ ಸಂಖ್ಯೆ (ಪಿಐಡಿ ನಂಬರ್) ನೀಡಬಹುದು ಹಾಗೂ ಆಸ್ತಿ ತೆರಿಗೆಯನ್ನೂ ಸಂಗ್ರಹಿಸಬಹುದು ಎಂದು ಉನ್ನತ ಮಟ್ಟದ ಸಭೆಯಲ್ಲಿ ನಿರ್ಣಯಕ್ಕೈಗೊಳ್ಳಲಾಗಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ಕೆಎಂಸಿ ಕಾಯ್ದೆಯ ಅಂಶ, ರಿಟ್ ಅರ್ಜಿಗೆ (ಸಂಖ್ಯೆ: 6734–6751/2013) ಸಂಬಂಧಿಸಿ ಹೈಕೋರ್ಟ್ ಆದೇಶ, ಬಿಬಿಎಂಪಿ ವ್ಯಾಪ್ತಿಯ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಕುರಿತ ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟ್ 2017ರ ಜುಲೈ 13ರಂದು ನೀಡಿರುವ ಮಧ್ಯಂತರ ಆದೇಶಗಳ ಬಗ್ಗೆ ಸಭೆಯಲ್ಲಿ ಪರಾಮರ್ಶೆ ನಡೆಸಲಾಗಿತ್ತು.

ಬಿ– ಖಾತಾ ಹೊಂದಿರುವ ನಿವೇಶನಗಳ ಮಾಲೀಕರಿಂದ ಆಸ್ತಿ ತೆರಿಗೆಯನ್ನು ಬಿಬಿಎಂಪಿ ವಸೂಲಿ ಮಾಡುತ್ತಿದೆ. ಆದರೆ, ಅದರಲ್ಲಿ ಕಟ್ಟಡ ನಿರ್ಮಿಸಲು ನಕ್ಷೆಗಳಿಗೆ ಮಂಜೂರಾತಿ ನೀಡುತ್ತಿಲ್ಲ. ಇಂತಹ ನಿವೇಶನದಲ್ಲಿ ಕಟ್ಟಿರುವ ಕಟ್ಟಡಗಳಿಗೆ ಪಿಐಡಿ ಸಂಖ್ಯೆಯನ್ನೂ ನೀಡುತ್ತಿಲ್ಲ. ಇಂತಹ ನಿವೇಶನಗಳಲ್ಲಿ ನಿರ್ಮಿಸಿರುವ ಎಲ್ಲ ಕಟ್ಟಡಗಳನ್ನು ಅನಧಿಕೃತ ಎಂದೇ ಪರಿಗಣಿಸಲಾಗುತ್ತಿದೆ. 'ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ನಡೆದ ಸಭೆಯ ನಿರ್ಣಯವನ್ನು ಈಗಿಂದಲೇ ಜಾರಿಗೊಳಿಸಲಾಗದು. ಈಗ ನಡೆದಿರುವುದು ಈ ಕುರಿತ ಚರ್ಚೆ ಮಾತ್ರ. ಇದರಲ್ಲಿರುವ ಅಂಶಗಳನ್ನು ಜಾರಿಗೊಳಿಸುವುದಕ್ಕೆ ಕೆಲವೊಂದು ಕಾನೂನು ತೊಡಕುಗಳೂ ಇವೆ. ಈ ನಿರ್ಣಯಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಸುತ್ತೋಲೆ ಹೊರಡಿಸಿದ ಬಳಿಕವಷ್ಟೇ ಇದನ್ನು ಜಾರಿಗೊಳಿಸಬಹುದು. ಆಗಲೂ ಪ್ರಾಯೋಗಿಕವಾಗಿ ಕೆಲವೊಂದು ಸಮಸ್ಯೆಗಳು ಎದುರಾಗುವ ಸಾಧ್ಯತೆಗಳೂ ಇವೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 6 ಲಕ್ಷಕ್ಕೂ ಅಧಿಕ ಸ್ವತ್ತುಗಳಿಗೆ ಬಿ–ಖಾತಾ ನೀಡಲಾಗಿದೆ. ಇವುಗಳಲ್ಲಿ ಬಹಳಷ್ಟು ಮಂದಿ ಬಿಬಿಎಂಪಿಯಿಂದ ಕಟ್ಟಡ ನಕ್ಷೆಗೆ ಅನುಮೋದನೆಯನ್ನೇ ಪಡೆಯದೆಯೇ ಕಟ್ಟಡ ನಿರ್ಮಿಸಿದ್ದಾರೆ.

₹1 ಸಾವಿರ ಕೋಟಿ ವರಮಾನ ನಿರೀಕ್ಷೆ

ಬಿ– ಖಾತಾವನ್ನು ಎ–ಖಾತಾವನ್ನಾಗಿ ಪರಿವರ್ತಿಸಲು ಕ್ರಮಕೈಗೊಳ್ಳಬೇಕು ಎಂದು ಬಿಬಿಎಂಪಿ ಕೌನ್ಸಿಲ್‌ನಲ್ಲಿ ಈ ಹಿಂದೆ ನಿರ್ಣಯಕೈಗೊಳ್ಳಲಾಗಿತ್ತು. ಆದರೆ, ಅದಕ್ಕೆ ಸಂಬಂಧಿಸಿದ ಕಾನೂನು ತೊಡಕು ನಿವಾರಿಸುವ ಪ್ರಯತ್ನಗಳು ಇದುವರೆಗೆ ಆಗಿರಲಿಲ್ಲ.

ಅಧಿಕೃತ ಹಾಗೂ ಅನಧಿಕೃತ ಕಟ್ಟಡಗಳಿಗೆ ಸಂಬಂಧಿಸಿದ ಗೊಂದಲ ಬಗೆಹರಿಸಲು 2020ರಲ್ಲಿ ಬಿಬಿಎಂಪಿ ಆಸ್ತಿ ತೆರಿಗೆ ನಿಯಮಗಳಿಗೆ ತಿದ್ದುಪಡಿ ತರುವ ಪ್ರಯತ್ನ ನಡೆದಿತ್ತಾದರೂ, ಅದರಿಂದ ಬಿ-ಖಾತಾಗಳಿಗೆ ಸಂಬಂಧಿಸಿದ ಗೊಂದಲಗಳನ್ನು ಸಂಪೂರ್ಣವಾಗಿ ನಿವಾರಿಸುವಷ್ಟು ಖಚಿತತೆ ಮೂಡಿರಲಿಲ್ಲ. 2020ರ ಬಿಬಿಎಂಪಿ ಕಾಯ್ದೆಯನ್ನು ಜಾರಿಗೊಳಿಸುವಾಗಲೂ ಬಿ-ಖಾತಾ ಸಮಸ್ಯೆಗೆ ಸಂಬಂಧಿಸಿದ ಗೊಂದಲ ಹಾಗೆಯೇ ಮುಂದುವರಿದಿತ್ತು.

ಬಿ– ಖಾತಾವನ್ನು ಕ್ರಮಬದ್ಧಗೊಳಿಸುವ ಬಗ್ಗೆ 2022–23ನೇ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಲ್ಲೇಖಿಸಿದ್ದರು.

2022–23ನೇ ಸಾಲಿನ ಬಿಬಿಎಂಪಿ ಬಜೆಟ್‌ನಲ್ಲೂ ಈ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದರಿಂದ ₹1 ಸಾವಿರ ಕೋಟಿ ವರಮಾನ ಸಂಗ್ರಹಿಸಬಹುದು ಎಂದು ನಿರೀಕ್ಷೆ ಮಾಡಲಾಗಿದೆ.

ಅನಧಿಕೃತ ನೀರು ಸಂಪರ್ಕ: ಸಕ್ರಮಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆದಿರುವವರು ಖುದ್ದಾಗಿ ಮಾಹಿತಿ ನೀಡಿ ಸಕ್ರಮಗೊಳಿಸಿಕೊಳ್ಳಬೇಕು ಎಂದು ಜಲಮಂಡಳಿ ಸೂಚಿಸಿದೆ.

ಅನಧಿಕೃತ ನೀರು ಮತ್ತು ಒಳಚರಂಡಿ ಸಂಪರ್ಕಗಳ ಬಗ್ಗೆ ತಪಾಸಣೆ ನಡೆಸಲಾಗುತ್ತಿದೆ. ತಪಾಸಣೆಯ ವೇಳೆಯಲ್ಲಿ ಮಂಡಳಿಯ ಪೂರ್ವ ಮತ್ತು ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಅವರು ಒಟ್ಟು 53,865 ಅನಧಿಕೃತ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ಪತ್ತೆ ಮಾಡಿದ್ದಾರೆ.

ಈ ರೀತಿ ಅನಧಿಕೃತ ಸಂಪರ್ಕ ಪಡೆದಿರುವುದು ಕಾನೂನು ಬಾಹಿರವಾಗಿದೆ. ಇವರ ವಿರುದ್ಧ ಮಂಡಳಿಯ ಕಾಯ್ದೆ 1964ರ ಸೆಕ್ಷನ್ -108 (ಎ) ಪ್ರಕಾರ ಕಾನೂನು ರೀತಿ ಕ್ರಮಕೈಗೊಳ್ಳಲಾಗಿದೆ.

ಅನಧಿಕೃತ ನೀರಿನ ಸಂಪರ್ಕ ಪಡೆದಿರುವುದನ್ನು ಪತ್ತೆ ಮಾಡಲು ಉಪವಿಭಾಗಗಳ ಮಟ್ಟದಲ್ಲಿ ತಂಡಗಳನ್ನು ರಚಿಸಲಾಗಿದೆ. ತಪಾಸಣೆಯ ವೇಳೆಯಲ್ಲಿ ಅನಧಿಕೃತ ನೀರು ಮತ್ತು ಒಳಚರಂಡಿ ಸಂಪರ್ಕಗಳು ಕಂಡುಬಂದಲ್ಲಿ ದಂಡ ವಿಧಿಸುವುದರ ಜೊತೆಗೆ ಸೆಕ್ಷನ್ -108(ಎ) ಪ್ರಕಾರ ಮೂರು ವರ್ಷ ಕಾರಾಗೃಹ ಶಿಕ್ಷೆ ಅಥವಾ ದಂಡ ಅಥವಾ ಕಾರಾಗೃಹ ಶಿಕ್ಷೆ ಮತ್ತು ದಂಡ ಎರಡನ್ನು ವಿಧಿಸುವ ಅವಕಾಶವಿದೆ. ಹೀಗಾಗಿ, ಕಾನೂನಿನ ಅನ್ವಯ ಕ್ರಮಕೈಗೊಳ್ಳಲಾಗುವುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸಾರ್ವಜನಿಕರು ಅನಧಿಕೃತ ಸಂಪರ್ಕಗಳನ್ನು ತೆಗೆದುಕೊಂಡಿರುವವರ ಮಾಹಿತಿಯನ್ನು ಮಂಡಳಿಯ 24x7 ಸಹಾಯವಾಣಿ- 1916ಗೆ ಕರೆಮಾಡಿ ಮಾಹಿತಿ ನೀಡಬಹುದು. ಜತೆಗೆ, ಉಪವಿಭಾಗದ ಕಚೇರಿಗಳಲ್ಲಿನ ದೂರು ಪೆಟ್ಟಿಗೆಯಲ್ಲಿ ಪತ್ರಗಳ ಮೂಲಕವೂ ಸಹ ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಮಂಡಳಿಯು ಮಾಹಿತಿದಾರರ ವಿವರಗಳನ್ನು ಗೋಪ್ಯವಾಗಿ ಇರಿಸಲಿದೆ. ನೀರಿನ ಸಂಪರ್ಕ ಹಾಗೂ ಅನಧಿಕೃತ ಸಂಪರ್ಕಗಳನ್ನು ಪಡೆದವರ ವಿರುದ್ಧ ಮಂಡಳಿಯು ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಲಿದೆ. ಆದ್ದರಿಂದ ಗ್ರಾಹಕರು ಇದಕ್ಕೆ ಅವಕಾಶ ನೀಡದೆ ಕೊಡದೆ, ಖುದ್ದಾಗಿ ಮಂಡಳಿಗೆ ಮಾಹಿತಿ ನೀಡಿ ಸಕ್ರಮಗೊಳಿಸಿಕೊಳ್ಳಬೇಕು ಎಂದು ಕೋರಿದ್ದಾರೆ.

ಭಯೋತ್ಪಾದನೆ ಎದುರಿಸುವ ಶಕ್ತಿ ಬೆಳೆಸಿಕೊಳ್ಳಬೇಕು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಪುಸ್ತಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಿ.ವಿ. ಗುರುಪ್ರಸಾದ್, ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ.ವೀರಣ್ಣ, ಪತ್ರಕರ್ತೆ ಆರ್‌ಪೂರ್ಣಿಮಾ, ಗೊ.ರು.ಚನ್ನಬಸಪ್ಪ, ರಂಗಕರ್ಮಿ ಕೆ.ವಿ.ನಾಗರಾಜಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಭಯೋತ್ಪಾದನೆ ಪಿಡುಗು ಜಾಗತಿಕವಾಗಿ ಹರಡಿದೆ. ಅದನ್ನು ಎದುರಿಸುವ ಶಕ್ತಿಯನ್ನು ಪ್ರತಿಯೊಬ್ಬ ನಾಗರಿಕನೂ ಪಡೆದುಕೊಳ್ಳಬೇಕು. ಆ ರೀತಿಯ ಶಕ್ತಿಯನ್ನು ಗೊ.ರು. ಚನ್ನಬಸಪ್ಪ ಅವರು ಬರೆದಿರುವ ಪುಸ್ತಕ ನೀಡುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಗೊ.ರು.ಚನ್ನಬಸಪ್ಪ ಅವರು ಕನ್ನಡಕ್ಕೆ ಅನುವಾದಿಸಿರುವ 'ಭಯೋತ್ಪಾದನೆ ಮತ್ತು ಭಯೋತ್ಪಾದಕ ಬೆದರಿಕೆಗೆ ಪ್ರತಿರೋಧ' ಎಂಬ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

'ಸಾಂಸ್ಕೃತಿಕ ರಾಯಭಾರಿ ರಂಜಿತ್‌ಕುಮಾರ್ ಪಚ್ನಂದ ಅವರು ರಚಿಸಿರುವ ಕೃತಿಯನ್ನು ಗೊ.ರು. ಚನ್ನಬಸಪ್ಪ ಅವರು ಅತ್ಯುತ್ತಮವಾಗಿ ಅನುವಾದ ಮಾಡಿದ್ದಾರೆ. ಪ್ರತಿರೋಧ ಇದ್ದಲ್ಲಿ ಸತ್ಯ ಹೊರಗೆ ಬಂದು ಜಯ ಸಿಗುತ್ತದೆ. ಅದಕ್ಕೆ ಈ ಪುಸ್ತಕ ಸ್ಫೂರ್ತಿ ತುಂಬುತ್ತದೆ' ಎಂದು ಅವರ ಹೇಳಿದರು.

'ಸಮಕಾಲೀನ, ಪ್ರಚಲಿತ, ಜ್ವಲಂತ ಸಮಸ್ಯೆಗೆ ಕನ್ನಡಿ ಹಿಡಿದು ಜಾಗೃತಿ ಮೂಡಿಸುವ ಕೆಲಸವನ್ನು ಗೊ.ರು. ಚನ್ನಬಸಪ್ಪ ಮಾಡಿದ್ದಾರೆ. ಮನುಷ್ಯನಿಗೆ ಜೀವ ಕೊಡುವ ಅಧಿಕಾರ ಇಲ್ಲವೆಂದ ಮೇಲೆ ಜೀವ ತೆಗೆಯುವ ಅಧಿಕಾರವೂ ಇರುವುದಿಲ್ಲ. ಆದರೆ, ಇದನ್ನು ಮೀರಿ ಧರ್ಮದ ಹೆಸರಿನಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಯುತ್ತಿದೆ. ಒಂದಷ್ಟು ಜನರನ್ನು ಕೊಲ್ಲುವ ಮೂಲಕ ಸ್ವರ್ಗ ಪ್ರಾಪ್ತಿಯಾಗುತ್ತದೆ ಎನ್ನುವ ಕಲ್ಪನೆಯಿಂದ ದುರಂತಗಳು ಸಂಭವಿಸುತ್ತವೆ' ಎಂದು ಹೇಳಿದರು.

'ಮೂಲಸೌಕರ್ಯ ಕೊರತೆಗೆ ಬಿಬಿಎಂಪಿ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂಲಸೌಕರ್ಯಗಳ ಕೊರತೆಗೆ ಬಿಬಿಎಂಪಿಯೇ ನೇರ ಕಾರಣ ಎಂದು ಉದ್ಯಮಿ ಟಿ.ವಿ. ಮೋಹನದಾಸ್ ಪೈ ದೂರಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಬೆಂಗಳೂರು ತಂತ್ರಜ್ಞಾನ ಶೃಂಗದ ಪೂರ್ವಭಾವಿ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಬಿಎಂಪಿ ಸದಸ್ಯರ ಪೈಕಿ ಶೇ 70 ರಷ್ಟು ಮಂದಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಸೇರಿದವರು. ಇವರಿಂದ ಅಭಿವೃದ್ಧಿ ನಿರೀಕ್ಷಿಸಲು ಸಾಧ್ಯವಿಲ್ಲ. ಬಿಬಿಎಂಪಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ನಾಗರಬಾವಿಯಲ್ಲಿ ಮನೆ ಕಟ್ಟಿಸಲು ಹೋದಾಗ ಲಂಚ ಕೇಳಿದ್ದರು' ಎಂದು ಹೇಳಿದರು.

ಬಿಬಿಎಂಪಿಯನ್ನು ಐದು ವಿಭಾಗಗಳಾಗಿ ವಿಂಗಡಿಸಬೇಕು. ಮೇಯರ್ ಅವಧಿಯನ್ನು ಹೆಚ್ಚಿಸಬೇಕು. 1 ವರ್ಷದ ಅವಧಿಯಲ್ಲಿ ಮೇಯರ್ ಏನೂ ಮಾಡಲು ಸಾಧ್ಯವಿಲ್ಲ. ನಗರದಲ್ಲಿ 1 ಕೋಟಿ 10 ಲಕ್ಷ ಜನ ಸಂಖ್ಯೆ ಇದ್ದು, ಇದರಲ್ಲಿ 25 ಲಕ್ಷ ಟೆಕ್ಕಿಗಳೇ ಇದ್ದಾರೆ ಎಂದರು.

ಎನ್‌ಇಎಸ್‌ಎಲ್ ಕಚೇರಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ



ಕಚೇರಿಯನ್ನು ಸಚಿವ ಆರ್‌ಅಶೋಕ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಆರ್‌ ಗಾಂಧಿ, ವ್ಯವಸ್ಥಾಪಕ ನಿರ್ದೇಶಕ ದೇಬಜ್ಯೋತಿ ಚೌಧರಿ ಇದ್ದಾರೆ.

ಬೆಂಗಳೂರು: ನಗರದಲ್ಲಿ ನ್ಯಾಷನಲ್ ಇ-ಗವರ್ನೆನ್ಸ್ ಸರ್ವೀಸಸ್ ಲಿಮಿಟೆಡ್‌ನ (ಎನ್‌ಇಎಸ್‌ಎಲ್) ಹೊಸ ಆಡಳಿತ ಕಚೇರಿ ಹಾಗೂ ಇ-ಉದ್ಭವಂ ಪ್ಲಾಟ್‌ಫಾರ್ಮ್ ಅನ್ನು ಕಂದಾಯ ಸಚಿವ ಆರ್.ಅಶೋಕ ಸೋಮವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 'ಪಿಂಚಣಿಗಳ ಡಿಜಿಟಲೀಕರಣ ಮಾಡಿದ್ದೇವೆ. ಇ-ಉದ್ಭವಂ ಒಂದು ವೆಬ್ ಆಧಾರಿತ ನಾಗರಿಕ ಕೇಂದ್ರಿತ ಸೇವೆಯಾಗಿದ್ದು, ಉದ್ಯೋಗ-ದಾತ-ಉದ್ಯೋಗಿ ಒಪ್ಪಂದಗಳು, ಮಾರಾಟಗಾರರ ಒಪ್ಪಂದಗಳಿಗೆ ಇದು ಅನುಕೂಲ' ಎಂದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ದೇಬಜ್ಯೋತಿ ಚೌಧರಿ, 'ಇ-ಉದ್ಭವಂನ ಪ್ರಾರಂಭದೊಂದಿಗೆ ಎಲ್ಲ ನಾಗರಿಕರು ದಾಖಲೆಗಳ ತಡೆರಹಿತ ಡಿಜಿಟಲ್ ಎಕ್ಸಿಕ್ಯೂಶನ್‌ನ ಪ್ರಯೋಜನ ಪಡೆಯಬಹುದು' ಎಂದರು.

ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತರಾದ ಬಿ.ಆರ್.ಮಮತಾ, ಸುಧಾಕರ ಶುಕ್ಲ, ಎನ್‌ಇಎಸ್‌ಎಲ್ ಅಧ್ಯಕ್ಷ ಆರ್. ಗಾಂಧಿ ಇದ್ದರು.

ಗ್ರಾ. ಪಂ. ಬಿಲ್ ಕಲೆಕ್ಟರ್ ಅಮಾನತು

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ನರಸೀಪುರ ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್ (ಕರ ವಸೂಲಿಗಾರ) ಕೆ.ಶ್ರೀನಿವಾಸಾಚಾರ್ ಅವರನ್ನು ಅಮಾನತು ಮಾಡಲಾಗಿದೆ.

ಕೆ.ಶ್ರೀನಿವಾಸಾಚಾರ್ ವಿರುದ್ಧ ಸಾರ್ವಜನಿಕರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ದೂರು ನೀಡಿದ್ದರು. ಹಣ ದುರುಪಯೋಗ, ಅಕ್ರಮ ಹಾಗೂ ಅನಧಿಕೃತ ಖಾತೆಗಳನ್ನು ಮಾಡಿರುವ ಹಾಗೂ ನಡಾವಳಿಗಳನ್ನು ತಿದ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿತ್ತು.

ಜಹಾಂಗೀರ್‌ಪುರಿ ಹಿಂಸಾಚಾರ: ಸತ್ಯಶೋಧನಾ ವರದಿ ಬಿಡುಗಡೆ

ನವದೆಹಲಿ (ಪಿಟಿಐ): ಜಹಾಂಗೀರ್‌ಪುರಿಯಲ್ಲಿ ನಡೆದ ಕೋಮು ಘರ್ಷಣೆಯ ಕುರಿತು ಸುಪ್ರೀಂ ಕೋರ್ಟ್ ವಕೀಲೆ ಮೋನಿಕಾ ಅರೋರಾ ನೇತೃತ್ವದ ಬುದ್ಧಿಜೀವಿಗಳು ಮತ್ತು ಶಿಕ್ಷಣ ತಜ್ಞರ ಗುಂಪು (ಜಿಐಎ) ಸೋಮವಾರ ಸತ್ಯಶೋಧನಾ ವರದಿ ಬಿಡುಗಡೆ ಮಾಡಿದೆ.

ಹಿಂಸಾಚಾರ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ ನಂತರ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ.

'ಏಪ್ರಿಲ್ 16 ರಂದು ಜಹಾಂಗೀರ್‌ಪುರಿಯ ಸಿ-ಬ್ಲಾಕ್ ಪ್ರದೇಶದಲ್ಲಿ ಹನುಮ ಜಯಂತಿ ಮೆರವಣಿಗೆಯು ಶಾಂತಿಯುತವಾಗಿ ನಡೆದಿತ್ತು. ಮೆರವಣಿಗೆಯು ಮಸೀದಿ ಸಮೀಪ ಹಾದು ಹೋಗುತ್ತಿದ್ದಾಗ, ಪ್ರಮುಖ ಆರೋಪಿ ಅನ್ಸಾರ್ ಜನರನ್ನು ಪ್ರಚೋದಿಸಿದ್ದರಿಂದ ಹಿಂಸಾಚಾರ ನಡೆಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ' ಎಂದು ಜಿಐಎ ಸದಸ್ಯೆ ಶ್ರುತಿ ಮಿಶ್ರಾ ಹೇಳಿದರು.

'ಅಂದು ಕಲ್ಲು ತೂರಾಟದಲ್ಲಿ ತೊಡಗಿದ್ದವರು ಸ್ಥಳದಲ್ಲಿದ್ದ ಪೊಲೀಸರನ್ನೂ ಸಹ ಬಿಡಲಿಲ್ಲ. ಅವರು ಹನುಮಾನ್ ವಿಗ್ರಹವನ್ನು ಧ್ವಂಸಗೊಳಿಸಲು ಪ್ರಯತ್ನಿಸಿದರು' ಎಂದು ಅವರು ಹೇಳಿದರು.

ನಗರದಲ್ಲಿ ಇಂದು

ತೇರಾಪಂಥ 10ನೇ ಜೈನ ಆಚಾರ್ಯ ಮಹಾ ಪ್ರಜ್ಞಾಜೀ ಅವರ ಪುಣ್ಯಸ್ಮರಣೆ: ಅತಿಥಿಗಳು–ಮದನ್ ಲಾಲ್ ಬರೋಚ, ಕನ್ಹಲಾಲ್ ಗಿರಿಯಾ, ಸುರೇಶಧಕ್, ಆಯೋಜನೆ ಮತ್ತು ಸ್ಥಳ ಆಚಾರ್ಯ ಶ್ರೀತುಳಸಿ ಮಹಾಪ್ರಜ್ಞಾ ಸೇವಾ ಕೇಂದ್ರದ ಚಾರಿಟಬಲ್ ಟ್ರಸ್ಟ್, ಕುಂಬಳಗೋಡು, ಮೈಸೂರು ರಸ್ತೆ, ಬೆಳಿಗ್ಗೆ 9.30

'ಪಠ್ಯಕ್ರಮ ವಿನ್ಯಾಸ ಮತ್ತು ವಿಷಯ ಅಭಿವೃದ್ಧಿ' ಕಾರ್ಯಾಗಾರ: ಭಾಗವಹಿಸುವವರು–ಪ್ರೊ.ಕೆ.ಆರ್. ವೇಣುಗೋಪಾಲ್, ಬಿ.ತಿಮ್ಮೇಗೌಡ, ಎಂ.ಕೊಟ್ರೇಶ್, ಅಶೋಕ್ ಡಿ.ಹಂಜಗಿ, ಪರಮೇಶ್ವರ್ ವಿ.ಪಂಡಿತ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ–ಸಮ್ಮೇಳನ ಸಭಾಂಗಣ, ಭೂಗೋಳಶಾಸ್ತ್ರ ವಿಭಾಗ, ವಿಶ್ವವಿದ್ಯಾಲಯದ ಆವರಣ, ಬೆಳಿಗ್ಗೆ 10.30

ರಾಜ್‌ಕುಮಾರ್ ಜನ್ಮದಿನ–ರಾಜ್ಯಮಟ್ಟದ ವಿಚಾರ ಸಂಕಿರಣ: ಉದ್ಘಾಟನೆ–ಪ್ರೊ.ಲಿಂಗರಾಜ ಗಾಂಧಿ, ಅಧ್ಯಕ್ಷತೆ–ಸ.ಚಿ.ರಮೇಶ್, ಆಯೋಜನೆ–ಕನ್ನಡ ವಿಶ್ವವಿದ್ಯಾಲಯ, ರಾಜ್‌ಕುಮಾರ್ ಅಧ್ಯಯನ ಕೇಂದ್ರ, ಸ್ಥಳ–ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣದ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 11

ಗ್ರಾಮೀಣ ಹಬ್ಬದ ಸಮಾರೋಪ: ಅತಿಥಿಗಳು–ಕೊಟ್ರೇಶ್, ಸಿಂಥಿಯಾ ಮಿನೆಜಸ್, ಸಿ.ಆರ್. ಮನೋಹರ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಸ್ಥಳ–ಕೆ.ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಮಧ್ಯಾಹ್ನ 2.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಮಹತಿ, ಮೈಸೂರು ಶ್ರೀಕಾಂತ್, ಅರ್ಜುನ್ ಕುಮಾರ್, ಸುನಾದ್ ಆನೂರ್, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ



ಮಹತಿ

ಭಜನೆ, ಹರಿನಾಮ ಸಂಕೀರ್ತನೆ: ಲಕ್ಷ್ಮೀನಾರಾಯಣ ಭಜನಾ ಮಂಡಳಿಯಿಂದ ಭಜನೆ, ವಿನಾಯಕ ನಾಮಣ್ಣನವರ್ ಅವರಿಂದ ಧಾರ್ಮಿಕ ಪ್ರವಚನ, ಆಯೋಜನೆ–ತಿರುಪತಿ ತಿರುಮಲ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 6ರಿಂದ

'ನೈಸ್: ಹೆಚ್ಚುವರಿ ಭೂಮಿ ಹಿಂದಕ್ಕೆ'

ಒಂದನೇ ಪುಟದಿಂದ...

ನೈಸ್‌ಗೆ ಹೆಚ್ಚುವರಿಯಾಗಿ 543 ಎಕರೆ ಭೂಮಿ ನೀಡಲಾಗಿದೆ. ಇದನ್ನು ವಾಪಸ್ ಪಡೆಯುವ ಸಂಬಂಧ 15 ದಿನಗಳಲ್ಲಿ ಇನ್ನೊಂದು ವರದಿ ನೀಡುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು. ಆ ವರದಿ ಬಂದ ನಂತರ ಹೆಚ್ಚುವರಿ ಭೂಮಿ ಹಿಂದಕ್ಕೆ ಪಡೆಯುವ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದೂ ಅವರು ತಿಳಿಸಿದರು.

ಟೌನ್‌ಶಿಪ್ ಕಾನೂನು ಬಾಹಿರ: ನೈಸ್ ಕಂಪನಿ ಸುಮಾರು 1,600 ಎಕರೆ ಭೂಮಿಯನ್ನು ವಶಪಡಿಸಿಕೊಂಡು ಟೌನ್‌ಶಿಪ್ ಮಾಡುತ್ತಿದೆ. ಇದು ಕಾನೂನು ಬಾಹಿರ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ರೈತರಿಗೆ ಒಂದು ಎಕರೆಗೆ ₹1.60 ಕೋಟಿ ನೀಡುವುದರ ಜೊತೆಗೆ 60x40 ಅಳತೆಯ ನಿವೇಶನವನ್ನೂ ನೀಡಬೇಕು. ಆದರೆ, ಭೂಸ್ವಾಧೀನ ಮಾಡಿಕೊಂಡು 20 ವರ್ಷ ಕಳೆದಿದ್ದರೂ ರೈತರಿಗೆ ನ್ಯಾಯ ಸಿಕ್ಕಿಲ್ಲ. ಈ ಹಿಂದೆ ನಿಗದಿಯಾಗಿದ್ದ ₹40 ಲಕ್ಷ ಪರಿಹಾರಕ್ಕೆ ರೈತರು ಒಪ್ಪಿಕೊಂಡಿಲ್ಲ. ನೈಸ್ ಒಪ್ಪದಿದ್ದರೆ ರೈತರ ಭೂಮಿಯನ್ನು ರೈತರಿಗೆ ನೀಡಲಾಗುವುದು ಅಥವಾ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು ಎಂದರು.

ಸದನ ಸಮಿತಿ ವರದಿ: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೈಸ್ ಅಕ್ರಮದ ಬಗ್ಗೆ ವಿಧಾನಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿತ್ತು. ಸದಸ್ಯರ ಬೇಡಿಕೆ ಆಧರಿಸಿ ಅಂದಿನ ಕಾನೂನು ಸಚಿವ ಟಿ.ಬಿ. ಜಯಚಂದ್ರ ನೇತೃತ್ವದಲ್ಲಿ ಸದನ ಸಮಿತಿಯನ್ನು ರಚಿಸಲಾಗಿತ್ತು. ಹೆಚ್ಚುವರಿಯಾಗಿ ನೀಡಿರುವ ಭೂಮಿಯನ್ನು ಮರುವಶಕ್ಕೆ ಪಡೆದು, ದಂಡವನ್ನೂ ವಸೂಲಿ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಬಳಿಕ, ಸಮಿತಿ ವರದಿ ನನೆಗುದಿಗೆ ಬಿದ್ದಿದೆ.

ಹದಗೆಡುತ್ತಿರುವ ಭಾರತದ ಧಾರ್ಮಿಕ ಸ್ವಾತಂತ್ರ್ಯ: ಅಮೆರಿಕ

ವಾಷಿಂಗ್ಟನ್ (ಎಎಫ್‌ಪಿ): ಹಿಂದೂ ರಾಷ್ಟ್ರೀಯತಾವಾದಿ ಸರ್ಕಾರದ ಅಡಿಯಲ್ಲಿ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ಗಮನಾರ್ಹವಾಗಿ ಹದಗೆಟ್ಟಿದೆ ಎಂದು ಅಮೆರಿಕದ ಆಯೋಗವು ಸೋಮವಾರ ಹೇಳಿದೆ.

ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಅಮೆರಿಕ ಆಯೋಗವು ಭಾರತವನ್ನು 'ನಿರ್ದಿಷ್ಟ ಕಾಳಜಿಯ ದೇಶಗಳ' ಪಟ್ಟಿಗೆ ಸೇರಿಸಬೇಕೆಂದು ಸತತ ಮೂರನೇ ವರ್ಷ ಹೇಳಿದೆ. ಈ ಶಿಫಾರಸು ಮಾಡಿದ್ದಕ್ಕೆ ಭಾರತ ಆಕ್ರೋಶ ವ್ಯಕ್ತಪಡಿಸಿದೆ.

ಅಕ್ಷಯ ತೃತೀಯಕ್ಕೆ ಕೊಡುಗೆ

ಬೆಂಗಳೂರು: ಅಕ್ಷಯ ತೃತೀಯ ಹಬ್ಬಕ್ಕಾಗಿ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಆಭರಣ ಮಳಿಗೆಯಲ್ಲಿ ಗ್ರಾಹಕರಿಗಾಗಿ ವಿಶೇಷ ಕೊಡುಗೆಗಳನ್ನು ನೀಡಲಾಗಿದೆ.


ಪ್ರತಿ ಶಾಖೆಯಲ್ಲೂ ಮನಮೋಹಕ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಮೇಳ ನಡೆಯುತ್ತಿದೆ. ವಿವಿಧ ರಾಜ್ಯಗಳ ನಿಪುಣ ಆಭರಣ ತಯಾರಕರು ಸಿದ್ಧಪಡಿಸಿದ ದೈವಿಕ ಆಭರಣ, ಜೈಪುರ ರಾಜಮನೆತನದ ಪಾರಂಪರಿಕ ಒಡವೆಗಳು, ಅನ್‌ಕಟ್ ರೂಬಿ ಆಭರಣಗಳ ಸಂಗ್ರಹ ಇವೆ.

ಗ್ರಾಹಕರು ದುಬೈ ದರದಲ್ಲಿ ಚಿನ್ನ ಖರೀದಿಸಬಹುದು. ಪ್ರತಿ ಗ್ರಾಂ.ಗೆ ₹125ರವರೆಗೆ ರಿಯಾಯಿತಿ ಸಿಗಲಿದ್ದು, ಹಳೆಯ ಚಿನ್ನವನ್ನು ಇಂದಿನ ದರಕ್ಕಿಂತ ₹125 ಹೆಚ್ಚಿಗೆ ಪಡೆದು ಬದಲಾಯಿಸಿಕೊಳ್ಳಲು ಅವಕಾಶ ಇದೆ. ಗ್ರಾಹಕರು ಕಾರು, ಸ್ಕೂಟರ್, ಗೃಹೋಪಯೋಗಿ ವಸ್ತುಗಳು ಸೇರಿದಂತೆ ₹20 ಲಕ್ಷದವರೆಗೆ ಬಹುಮಾನಗಳನ್ನೂ ಗೆಲ್ಲಬಹುದು ಎಂದು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಟಿ.ಎ.ಶರವಣ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬ್ಯಾಡ್ಜ್ ಪಡೆಯಲು ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವ ಏ.29ರಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಈ ಸಂಬಂಧ ಎಲ್ಲ ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳು ಹಾಗೂ ಪಿಎಚ್‌.ಡಿ. ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳಿಗೆ ಆಮಂತ್ರಣ ಪತ್ರಿಕೆ ಮತ್ತು ಬ್ಯಾಡ್ಜ್‌ಗಳನ್ನು ಪಡೆಯಲು ಸೂಚಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಪ್ರಾಂಶುಪಾಲರು ನೀಡಿರುವ ಗುರುತಿನ ಪತ್ರದೊಂದಿಗೆ ಖುದ್ದಾಗಿ ಜ್ಞಾನಭಾರತಿ ಆವರಣದಲ್ಲಿ ಪರೀಕ್ಷಾ ಭವನದ ಮೌಲ್ಯಮಾಪನ ವಿಭಾಗದ ಕುಲಸಚಿವರ ಕಚೇರಿಯಲ್ಲಿ ಏ.26ರಿಂದ 28ರ ನಡುವೆ ಬ್ಯಾಡ್ಜ್ ಪಡೆಯಬಹುದು ಎಂದು ಕುಲಸಚಿವರು (ಮೌಲ್ಯಮಾಪನ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಟ್ಯಾಂಕ್ ಮೇಲೆ ಕುಳಿತಿರುವ ಆಂಜನೇಯರೆಡ್ಡಿ ಕುಟುಂಬದ ಸದಸ್ಯರು

ನೀರಿನ ಟ್ಯಾಂಕ್ ಏರಿದ ಕುಟುಂಬ: ಆತ್ಮಹತ್ಯೆ ಬೆದರಿಕೆ

ದೊಡ್ಡಬಳ್ಳಾಪುರ: ಜಮೀನು ವಿಚಾರದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಮೋಸ ಮಾಡಿದ್ದಾರೆ ಎಂದು ಆರೋಪಿಸಿರುವ ಚಿಂತಾಮಣಿ ಮೂಲದ ಕುಟುಂಬ ಸೋಮವಾರ ಬೆಳಿಗ್ಗೆ ನ್ಯಾಯಕ್ಕಾಗಿನೀರಿನ ಟ್ಯಾಂಕ್ ಏರಿ ಕುಳಿತಿದ್ದು ರಾತ್ರಿಯಾದರೂ ಟ್ಯಾಂಕ್‌ನಿಂದ ಕೆಳಗೆ ಇಳಿದಿಲ್ಲ.

ಚಿಂತಾಮಣಿಯ ಆಂಜನೇಯ ರೆಡ್ಡಿ ಕುಟುಂಬದ ನಾಲ್ವರು ಪುರುಷರು ಮತ್ತು ನಾಲ್ವರು ಮಹಿಳೆಯರು ಬೆಳಿಗ್ಗೆಯೇ ನಗರದಲ್ಲಿನ ಜಿಕೆವಿ ಲೇಔಟ್ ನೀರಿನ ಟ್ಯಾಂಕ್ ಏರಿದ್ದಾರೆ. ತಮ್ಮೊಂದಿಗೆ ಪೆಟ್ರೋಲ್ ತುಂಬಿದ ಕ್ಯಾನ್ ಸಹ ಕೊಂಡೊಯ್ದಿದ್ದು ಆತ್ಮಹತ್ಯೆಯ ಬೆದರಿಕೆ ಒಡ್ಡುತ್ತಿದ್ದಾರೆ.

‘ನಿವೃತ್ತ ಡಿವೈಎಸ್‌ಪಿ ಕೋನಪ್ಪ ರೆಡ್ಡಿ ಅವರು ತಮ್ಮ ಕುಟುಂಬದ 4 ಎಕರೆ 18 ಗುಂಟೆ ಜಮೀನು ವಿಚಾರದಲ್ಲಿ ಮೋಸ ಮಾಡಿದ್ದಾರೆ. ನಮಗೆ ನ್ಯಾಯ ದೊರಕಿಸಿ, ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳಲು ಬಿಡಿ’ ಎಂದು ರೆಡ್ಡಿ ಕುಟುಂಬದವರು ಕೂಗಿ ಹೇಳುತ್ತಿದ್ದಾರೆ.

ಮಾತುಕತೆಗೆ ಬರುವಂತೆ ಪೊಲೀಸರು ನೀಡಿದ ಆಹ್ವಾನ ಮನ್ನಿಸಿ ನಾಲ್ವರು ಪುರುಷರು ಟ್ಯಾಂಕ್ ಮೇಲಿಂದ ಇಳಿದು ಬಂದಿದ್ದಾರೆ. ಉಳಿದ ನಾಲ್ವರು ಮಹಿಳೆಯರು ಟ್ಯಾಂಕ್ ಮೇಲೆಯೇ ಧರಣಿ ಮುಂದುವರೆಸಿದ್ದಾರೆ.

‘ನಾನು ಯಾರಿಗೂ ಮೋಸ ಮಾಡಿಲ್ಲ. ಅವರ ಬಳಿ ದಾಖಲೆ ಇದ್ದರೆ ನನ್ನ ವಿರುದ್ಧ ದೂರು ನೀಡಲಿ. ಅದನ್ನು ಬಿಟ್ಟು ಈ ರೀತಿ ಬ್ಲಾಕ್ ಮೇಲ್ ಮಾಡುವುದು ಸರಿಯಲ್ಲ’ ಎಂದು ನಿವೃತ್ತ ಡಿವೈಎಸ್‌ಪಿ ಟಿ.ಕೋನಪ್ಪ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

ಪಿಎಸ್‌ಐ ನೇಮಕಾತಿ ಅಕ್ರಮ: 50 ಅಭ್ಯರ್ಥಿಗಳ ವಿಚಾರಣೆ

ಬೆಂಗಳೂರು: ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮದ ತನಿಖೆಯನ್ನು ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೆಸರಿರುವ 50 ಮಂದಿಯನ್ನು ಸೋಮವಾರ ವಿಚಾರಣೆಗೆ ಒಳಪಡಿಸಿದ್ದಾರೆ.

‘ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೆಸರಿರುವವರಿಗೆ ಕೆಲ ದಿನಗಳ ಹಿಂದೆಯೇ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕಳುಹಿಸಲಾಗಿತ್ತು. ಶನಿವಾರ ಮತ್ತು ಭಾನುವಾರ ರಜೆ ಇದ್ದಿದ್ದರಿಂದ ಯಾರೂ ಬಂದಿರಲಿಲ್ಲ. ಸೋಮವಾರ ಒಟ್ಟು 50 ಮಂದಿಯ ವಿಚಾರಣೆ ನಡೆದಿದೆ. ಈವರೆಗೂ ಒಟ್ಟು 175 ಮಂದಿ ವಿಚಾರಣೆಗೆ ಒಳಪಟ್ಟಿದ್ದಾರೆ’ ಎಂದು ಮೂಲಗಳು ತಿಳಿಸಿವೆ.





ಸ್ಮಾರ್ಟ್‌ಸಿಟಿ ಕಾಮಗಾರಿ ನಡೆಯುತ್ತಿರುವ ವೈ.ರಾಮಚಂದ್ರ ರಸ್ತೆ ಕೆಸರುಮಯವಾಗಿರುವುದು (ಎಡಚಿತ್ರ) ವೈ.ರಾಮಚಂದ್ರ ರಸ್ತೆಯಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿ —ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಗಾಂಧಿನಗರ: ಸ್ಮಾರ್ಟ್‌ಸಿಟಿ ಕಾಮಗಾರಿಯಿಂದ ಜನ ಹೈರಾಣ

ರಾಮಚಂದ್ರ ರಸ್ತೆ: ಆಮೆಗತಿಯಲ್ಲಿ ಕಾಮಗಾರಿ

• ಮನೋಹರ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಗಾಂಧಿನಗರ ಮತ್ತು ಅರಮನೆ ರಸ್ತೆಗೆ ಸಂಪರ್ಕ ಕೊಂಡಿಯಾಗಿರುವ ‘ವೈ. ರಾಮಚಂದ್ರ ರಸ್ತೆ’ಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿರುವುದರಿಂದ ವಾಹನ ಸವಾರರು, ಆಟೊ ಚಾಲಕರು ಹಾಗೂ ಪಾದಚಾರಿಗಳು ಪಡಿಪಾಟಲು ಎದುರಿಸುವಂತಾಗಿದೆ.

ಸ್ಮಾರ್ಟ್‌ಸಿಟಿ ಯೋಜನೆಯ ಮೂರನೇ ಹಂತದಲ್ಲಿ ಸುಮಾರು ₹135 ಕೋಟಿ ವೆಚ್ಚದಲ್ಲಿ ವೈ.ರಾಮಚಂದ್ರ ರಸ್ತೆಯೂ ಸೇರಿದಂತೆ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಗಾಂಧಿನಗರದ ಕಾಳಿದಾಸ ಮಾರ್ಗದ ಮೂಲಕ ವಾಹನಗಳು ಈ ರಸ್ತೆಯನ್ನು ಪ್ರವೇಶಿಸುವುದನ್ನು ಎರಡು ತಿಂಗಳ ಹಿಂದೆಯೇ ನಿರ್ಬಂಧಿಸಲಾಗಿದೆ. ಆದರೆ, ಅರಮನೆ ರಸ್ತೆಯಿಂದ ಗಾಂಧಿನಗರ ತಲುಪುತ್ತಿದ್ದವರು ಎಂದಿನಂತೆ ಇದೇ ರಸ್ತೆ ಪ್ರವೇಶಿಸಿ, ಬೇಸರದಿಂದ ಹಿಂತಿರುಗುತ್ತಾರೆ.

ಸೆಂಟ್ರಲ್ ಕಾಲೇಜು ಆಟದ ಮೈದಾನ, ಗೃಹವಿಜ್ಞಾನ ಕಾಲೇಜು,ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಚೇರಿ ಇದೇ ರಸ್ತೆಯಲ್ಲಿವೆ. ಕಾಮಗಾರಿಯಿಂದಾಗಿ ಈ ಸ್ಥಳಗಳನ್ನು ತಲುಪಲೂ ಸಮಸ್ಯೆಯಾಗಿದೆ. ಇಲ್ಲಿರುವ ಕಾಲೇಜುಗಳ ಬಹುತೇಕ ವಿದ್ಯಾರ್ಥಿಗಳು ರಾಮಚಂದ್ರ ರಸ್ತೆಯ ಮೂಲಕವೇ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಕಾಲೇಜುಗಳನ್ನು ತಲುಪುತ್ತಾರೆ.

ರಸ್ತೆಯುದ್ದಕ್ಕೂ ಒಳಚರಂಡಿ ಕಾಮಗಾರಿ ಹಾಗೂ ಕೇಬಲ್ ಅಳವಡಿಕೆ ಕಾಮಗಾರಿ ಒಂದೆಡೆ ನಡೆಯುತ್ತಿದೆ. ಮತ್ತೊಂದು ಬದಿಯಲ್ಲಿ ಕಾಮಗಾರಿಯ ವಸ್ತುಗಳನ್ನು ರಾಶಿ ಹಾಕಲಾಗಿದೆ. ಅಗೆದ ಮಣ್ಣನ್ನೂ ರಸ್ತೆಯಲ್ಲಿ ಹಾಕಿರುವುದರಿಂದ ಇತ್ತೀಚೆಗೆ ಸುರಿದ ಮಳೆಗೆ ಕೆಸರು ರಸ್ತೆಯಾಗಿ ಬದಲಾಗಿದೆ. ಸದ್ಯಕ್ಕೆ ವಾಹನ ಸಂಚಾರ ತಗ್ಗಿದ್ದರೂ, ಸಾರ್ವಜನಿಕರ ಸಂಚಾರ ಎಂದಿನಂತೆಯೇ ಇದೆ. ಸಾರ್ವಜನಿಕರು ಕೆಸರಿನಲ್ಲೇ ಜಾರುತ್ತಾ ಹೆಜ್ಜೆ ಹಾಕುತ್ತಿದ್ದಾರೆ.

‘ನಗರವನ್ನು ಸ್ಮಾರ್ಟ್ ಮಾಡುವ ಭರದಲ್ಲಿ ಸಾರ್ವಜನಿಕರಿಗೆ ನಿರಂತರವಾಗಿ ತೊಂದರೆ ನೀಡುತ್ತಿದ್ದಾರೆ. ಕಾಮಗಾರಿಗಳನ್ನು ಗಡುವಿನೊಳಗೆ ಮುಗಿಸುವುದೇ ಇಲ್ಲ. ಆರಂಭದಲ್ಲಿ ವಾಗವಾಗಿ ಸಾಗುವ ಕಾಮಗಾರಿ ಕ್ರಮೇಣ ಆಮೆಗತಿಯಲ್ಲಿ ಸಾಗುತ್ತವೆ. ಈ ರಸ್ತೆಯ ಕಥೆಯೂ ಹಾಗೆಯೇ ಆಗಿದೆ’ ಎಂದು ಗಾಂಧಿನಗರದ ಮಳಿಗೆಯೊಂದರ ಮಾಲೀಕ ವೇಣುಗೋಪಾಲ್ ಅಸಮಾಧಾನ ವ್ಯಕ್ತಪಡಿಸಿದರು.

‘ಈ ಒಂದು ರಸ್ತೆ ಮುಚ್ಚಿರುವುದರಿಂದ ಅನ್ಯ ಮಾರ್ಗಗಳನ್ನು ಬಳಸಿ ಸಾಗುವಷ್ಟರಲ್ಲಿ ಸಾಕುಸಾಕಾಗುತ್ತದೆ. ಈಗ ಅರಮನೆ ರಸ್ತೆ ತಲುಪಬೇಕೆಂದರೆ ಕೆ.ಜಿ ರಸ್ತೆಯನ್ನು ಸುತ್ತಬೇಕು. ಮುಂದೆ ಶೇಷಾದ್ರಿ ರಸ್ತೆಯ ಪ್ರವೇಶವೂ ನಿರ್ಬಂಧಿಸಿರುವುದರಿಂದ ಪ್ರತಿದಿನವೂ ಪರದಾಟ ತಪ್ಪಿಲ್ಲ’ ಎಂದರು.

‘ಈ ರಸ್ತೆಯಲ್ಲಿದ್ದ ಹೋಟೆಲ್‌ಗಳಲ್ಲಿ ರುಚಿಕರವಾದ ಊಟ ಸಿಗುತ್ತಿತ್ತು. ಬೆಳಿಗ್ಗೆ ಮತ್ತು ಮಧ್ಯಾಹ್ನದ ಊಟಕ್ಕಾಗಿ ಇಲ್ಲಿಗೆ ಪ್ರತಿದಿನ ಬರುತ್ತಿದ್ದೆ. ರಸ್ತೆಯುದ್ದಕ್ಕೂ ಮರಗಳಿರುವುದರಿಂದ ಕೆಲಕಾಲ ವಿಶ್ರಾಂತಿಯೂ ಪಡೆಯುತ್ತಿದ್ದೆ. ಈ ರಸ್ತೆ ಆಟೊ ಚಾಲಕರ ವಿಶ್ರಾಂತಿ ಸ್ಥಳವಾಗಿತ್ತು. ಕಾಮಗಾರಿ ನಡೆಯುತ್ತಿರುವುದರಿಂದ ಹೋಟೆಲ್‌ಗಳು ತೆರೆಯುತ್ತಿಲ್ಲ’ ಎಂದು ಆಟೊ ಚಾಲಕ ರಮೇಶ್ ಗೌಡ ಅವರು ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಸ್ಮಾರ್ಟ್‌ಸಿಟಿ ಕಾಮಗಾರಿ ವಿಳಂಬ
- 2 ತಿಂಗಳುಗಳಿಂದ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧ
- ಸಾರ್ವಜನಿಕರು–ವಾಹನ ಸಂಚಾರಕ್ಕೆ ಸಮಸ್ಯೆ

‘2 ತಿಂಗಳುಗಳಲ್ಲಿ ಕಾಮಗಾರಿ ಪೂರ್ಣ’

‘ಕಾಮಗಾರಿ ಚುರುಕಾಗಿ ನಡೆಯುತ್ತಿತ್ತು. ಒಂದು ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೆಲಸ ಸದ್ಯಕ್ಕೆ ನಿಂತಿದೆ. ಕೆಲಸದವರಿಗೂ ಇದೇ ರಸ್ತೆಯಲ್ಲಿ ಶೆಡ್ ನಿರ್ಮಿಸಿಕೊಡಲಾಗಿದೆ. ಕಾಮಗಾರಿ ವೇಗ ಹೆಚ್ಚಿಸಲಾಗುವುದು. ಎರಡು ತಿಂಗಳೊಳಗೆ ರಾಮಚಂದ್ರ ರಸ್ತೆಯ ಕಾಮಗಾರಿ ಪೂರ್ಣಗೊಂಡು, ಸಂಚಾರಕ್ಕೆ ಮುಕ್ತವಾಗಲಿದೆ’ ಎಂದು ಕಾಮಗಾರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ವ್ಯಕ್ತಿ ಮಾಹಿತಿ ನೀಡಿದರು.



ಕಾಮಗಾರಿಯಿಂದ ಯುವಕರಿಗೆ ಸಮಸ್ಯೆ ಇಲ್ಲ. ವಯಸ್ಸಾದವರಿಗೆ ಈ ರಸ್ತೆಯಲ್ಲಿ ನಡೆದಾಡಲು ಸಾಧ್ಯವಾಗುತ್ತಿಲ್ಲ. ಕಾಮಗಾರಿ ಬೇಗ ಮುಗಿಸಿದರೆ ಒಳ್ಳೆಯದು.
ಅಕ್ಷಯ್, ಸಾರ್ವಜನಿಕ



ರಸ್ತೆಯನ್ನು ಸುಂದರಗೊಳಿಸುತ್ತಿರುವುದು ಒಳ್ಳೆಯದು. ಈ ರಸ್ತೆಯಲ್ಲಿ ತಂಪಾದ ಗಾಳಿ ಬೀಸುತ್ತಿತ್ತು. ಈಗ ಕಾಮಗಾರಿಯಿಂದಾಗಿ ಹಳ್ಳ, ಕೆಸರಿನ ನಡುವೆ ಸಾಗುವುದೇ ಸವಾಲಾಗಿದೆ.
ಮಂಜುಳಾ, ವಿದ್ಯಾರ್ಥಿನಿ

‘ಈ ರಸ್ತೆಯಲ್ಲಿ ದ್ವಿಮುಖ ಸಂಚಾರಕ್ಕೆ ಅವಕಾಶ ಇದ್ದಿದ್ದರಿಂದ ಗ್ರಾಹಕರಿಗೆ ಕೊರತೆ ಇರಲಿಲ್ಲ. ಹೋಟೆಲ್‌ನಿಂದ ಜೀವನವೂ ಸುಗಮವಾಗಿ ನಡೆಯುತ್ತಿತ್ತು. ಇಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಎರಡು ತಿಂಗಳಿನಿಂದ ಹೋಟೆಲ್‌ಗೆ ಜಾಗವೂ ಇಲ್ಲ, ಗ್ರಾಹಕರೂ ಮೊದಲಿನಂತೆ ಬರುತ್ತಿಲ್ಲ. ಕಾಮಗಾರಿ ಬೇಗ ಮುಗಿದರೆ ನಾವೂ ಬದುಕು ಕಟ್ಟಿಕೊಳ್ಳಲು ಅನುಕೂಲ’ ಎನ್ನುತ್ತಾರೆ ಇಲ್ಲಿ ತಳ್ಳು ಗಾಡಿಯಲ್ಲಿ ಆಹಾರ ಮಾರಾಟ ಮಾಡುವ ದಿನೇಶ್.

‘ಹನುಮಾನ್ ಚಾಲೀಸಾ ಪಠಣಕ್ಕೆ ಅಡ್ಡಿಯಿಲ್ಲ, ದಾದಾಗಿರಿ ಸಹಿಸುವುದಿಲ್ಲ’

ಮುಂಬೈ (ಪಿಟಿಐ): ಹನುಮಾನ್ ಚಾಲೀಸಾ ಪಠಣ ಕುರಿತು ಮೌನ ಮುರಿದಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ‘ನನ್ನ ಮನೆಯಲ್ಲಿಯೇ ಹನುಮಾನ್ ಚಾಲೀಸಾ ಪಠಣ ಮಾಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಆದರೆ, ‘ದಾದಾಗಿರಿ’ ಮಾಡುವುದನ್ನು ಸಹಿಸಿಕೊಳ್ಳುವುದಿಲ್ಲ’ ಎಂದು ಸೋಮವಾರ ಹೇಳಿದ್ದಾರೆ.

ಬಾಂದ್ರಾ ಉಪನಗರದಲ್ಲಿರುವ ಠಾಕ್ರೆ ಅವರ ‘ಮಾತೋಶ್ರೀ’ ನಿವಾಸದ ಎದುರು ಶಾಸಕ ರವಿ ರಾಣಾ ಹಾಗೂ ಅವರ ಪತ್ನಿ, ಸಂಸದೆ ನವನೀತ್ ರಾಣಾ ಅವರು ಹನುಮಾನ್ ಚಾಲೀಸಾ ಪಠಣ ಮಾಡುವುದಾಗಿ ಹೇಳಿದ್ದರಿಂದ ಶನಿವಾರ ಮುಂಬೈಯಲ್ಲಿ ಶಿವಸೇನಾ ಕಾರ್ಯಕರ್ತರು ತೀವ್ರ ಪ್ರತಿಬಟನೆ ನಡೆಸಿದ್ದರು. ನಂತರ ರಾಣಾ ದಂಪತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಎಚ್‌ಡಿಕೆ ಅವಧಿಯಲ್ಲಿ ಬಮೂಲ್ ನೇಮಕಾತಿ: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಮೂಲ್ ನೇಮಕಾತಿ ನಡೆದಾಗ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇತ್ತು. ಅಕ್ರಮ ನಡೆದಿದ್ದರೆ ಅವರ ಅವಧಿಯಲ್ಲೇ ನಡೆದಿರಬೇಕು ಎಂದು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಎಚ್‌.ಡಿ. ಕುಮಾರಸ್ವಾಮಿ ಅವರು ಬಮೂಲ್ ನೇಮಕಾತಿಯಲ್ಲಿ ಎಲ್ಲ ಹದಿನಾಲ್ಕು ಯೂನಿಯನ್‌ಗಳಲ್ಲೂ ಅಕ್ರಮ ನಡೆದಿದೆ ಎಂದು ದೂರು ಕೊಟ್ಟಿದ್ದಾರೆ. ಎಲ್ಲ ಕಡೆ ಅಕ್ರಮದ ದೂರು ನೀಡಿದರೆ ಹೇಗೆ’ ಎಂದು ಲೇವಡಿ ಮಾಡಿದರು.

ಮೈತ್ರಿ ಸರ್ಕಾರದ ಅವಧಿಯಲ್ಲಿ ಕುಮಾರಸ್ವಾಮಿ ಸಹೋದರ ಎಚ್‌.ಡಿ.ರೇವಣ್ಣ ಕೆಎಂಎಫ್ ಅಧ್ಯಕ್ಷರಾಗಿದ್ದರು. ಬಂಡೆಪ್ಪ ಕಾಶೆಂಪೂರ ಅವರು ಸಹಕಾರ ಸಚಿವರಾಗಿದ್ದರು. ಆರೋಪ ಮಾಡಬೇಕಾದರೆ ದಾಖಲೆ ಇಟ್ಟು ಮಾಡಬೇಕು. ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೇ ಅಕ್ರಮ ನಡೆದಿರಬೇಕು ಎಂದರು.

‘ನಾವು ಅಧಿಕಾರಕ್ಕೆ ಬಂದ ಮೇಲೆ ಕೊರೊನಾ ಸಂದರ್ಭದಲ್ಲೇ ಐದು ಸಾವಿರ ಹುದ್ದೆಗಳ ನೇಮಕಾತಿ ಘೋಷಣೆ ಮಾಡಿದ್ದೆ. ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಸಂಸದ ಡಿ.ಕೆ.ಸುರೇಶ್ ದೂರು ಕೊಟ್ಟಿದ್ದರು. ಇದರ ತನಿಖೆಗೆ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೆವು. ಈ ಅಧಿಕಾರಿ ಈಗಾಗಲೇ ವರದಿ ನೀಡಿದ್ದಾರೆ’ ಎಂದು ಸೋಮಶೇಖರ್ ಹೇಳಿದರು.



ಗರ್ಭಕೋಶ ಶಸ್ತ್ರಚಿಕಿತ್ಸೆಗೊಳಗಾದ ಸಂತ್ರಸ್ತರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸುವಂತೆ ಒತ್ತಾಯಿಸಿ ಶಿಗ್ಗಾವಿಯಲ್ಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆಯ ಮುಂದೆ ಧರಣಿ ನಡೆಸಲು ರಾಣೆಬೆನ್ನೂರಿನಿಂದ ಸೋಮವಾರ ಪಾದಯಾತ್ರೆ ಆರಂಭಿಸಲಾಯಿತು. ದೊಡ್ಡಪೇಟೆಯ ವಿರಕ್ತಮಠದ ಗುರುಬಸವ ಸ್ವಾಮೀಜಿ ಹಾಗೂ ರೈತ ಸಂಘದ ಕಾರ್ಯಕರ್ತರು ಇದ್ದರು –ಪ್ರಜಾವಾಣಿ ಚಿತ್ರ

ಗರ್ಭಕೋಶಕ್ಕೆ ಕತ್ತರಿ: ಪರಿಹಾರಕ್ಕೆ ಆಗ್ರಹ

ಸಿ.ಎಂ ಮನೆವರೆಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ವೈದ್ಯರ ಬಳಿ ಹೊಟ್ಟೆನೋವಿನ ಚಿಕಿತ್ಸೆಗೆ ಹೋದ ದಲಿತ, ಲಂಬಾಣಿ ಹಾಗೂ ಬಡ ಮಹಿಳೆಯರಿಗೆ ಅನಧಿಕೃತವಾಗಿ ಗರ್ಭಕೋಶ ತೆಗೆದು ಹಾಕಿದ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ 250ಕ್ಕೂ ಹೆಚ್ಚು ಮಹಿಳೆಯರು ರಾಣೆಬೆನ್ನೂರಿನಿಂದ ಶಿಗ್ಗಾವಿಯಲ್ಲಿರುವ ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲು ಸೋಮವಾರ ಪಾದಯಾತ್ರೆ ಆರಂಭಿಸಿದರು.

‘2010ರಿಂದ 2017ರವರೆಗೆ ಈ ಪ್ರಕರಣಗಳು ನಡೆದಿದ್ದವು. ಆಗಿನ ಸರ್ಜನ್ ಡಾ.ಪಿ.ಶಾಂತ ಅವರು ವಿವಿಧ ಕಾರಣಗಳಿಂದ ಆಸ್ಪತ್ರೆಗೆ ಭೇಟಿ ನೀಡಿದ ಮಹಿಳೆಯರ ಗರ್ಭಕೋಶವನ್ನು ತೆಗೆದಿದ್ದರು. ಅದರ ಪರಿಣಾಮದಿಂದ ಮಾನಸಿಕ ಹಾಗೂ ದೈಹಿಕ ನ್ಯೂನತೆಗಳಿಂದ ಬಳಲುತ್ತಿರುವ 1,522 ಮಹಿಳೆಯರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ವಿಶೇಷ ಆರ್ಥಿಕ ನೆರವು ಬಿಡುಗಡೆಗೊಳಿಸಬೇಕು’ ಎಂದು ಮಹಿಳೆಯರು ಒತ್ತಾಯಿಸಿದರು.

ರೈತ ಸಂಘದ ಅಧ್ಯಕ್ಷ ಶಿವಪುತ್ರಪ್ಪ ಮಲ್ಲಾಡದ ಮಾತನಾಡಿ, ‘ಸಂತ್ರಸ್ತರಿಗೆ ಸರ್ಕಾರವು ₹45.66 ಕೋಟಿ ಪರಿಹಾರ ನೀಡಲು ಮುಂದಾಗಿದ್ದನ್ನು ತಪ್ಪಿಸಿದ ಈಗಿನ ಆಡಳಿತಾಧಿಕಾರಿ ಡಾ. ಪರಮೇಶ್ವರಪ್ಪ ಅವರನ್ನು ಕರ್ತವ್ಯದಿಂದ ವಜಾ ಮಾಡಬೇಕು’ ಎಂದರು.

‘ಪಾದಯಾತ್ರೆಯು ಮೂರು ದಿನ ನಡೆಯಲಿದೆ. ಬುಧವಾರ ಶಿಗ್ಗಾವಿಯಲ್ಲಿ ಮುಖ್ಯಮಂತ್ರಿ ಮನೆ ಎದುರು ನೊಂದ ಮಹಿಳೆಯರ ಬೇಡಿಕೆಗಳು ಈಡೇರುವವರೆಗೂ ಧರಣಿ ನಡೆಸುತ್ತೇವೆ’ ಎಂದು ತಿಳಿಸಿದರು. ದೊಡ್ಡಪೇಟೆಯ ವಿರಕ್ತಮಠದ ಗುರುಬಸವ ಸ್ವಾಮೀಜಿ ಪಾಲ್ಗೊಂಡಿದ್ದರು.

2017ರಲ್ಲಿ ಸರ್ಜನ್ ಡಾ.ಶಾಂತ ವಿರುದ್ಧ ಎಫ್‌ಐಆರ್ ದಾಖಲಾಗಿ, ಸೇವೆಯಿಂದ ಅಮಾನತು ಮಾಡಲಾಗಿತ್ತು. 2019ರಲ್ಲಿ ಮತ್ತೆ ಸರ್ಕಾರಿ ಸೇವೆಗೆ ಮರಳಿದ ಅವರು ಪ್ರಸ್ತುತ ಗೋಕಾಕ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆಎಸ್‌ಒಯು ಘಟಿಕೋತ್ಸವ; ಕಲಿಕೆಗೆ ವಯಸ್ಸಿನ ಹಂಗಿಲ್ಲ

81ನೇ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ!

ಪ್ರಜಾವಾಣಿ ವಾರ್ತೆ

ಮೈಸೂರು: ಜ್ಞಾನಾರ್ಜನೆಗೆ ವಯಸ್ಸಿನ ಹಂಗಿಲ್ಲ. ಕಲಿಯುವ ಹಂಬಲವಿದ್ದರೆ, ಯಾವ ವಯಸ್ಸಿನಲ್ಲಾದರೂ ಪದವಿ ಪೂರೈಸಬಹುದು ಎಂಬುದನ್ನು 81 ವರ್ಷದ ಎನ್‌.ಸಿ.ಶ್ರೀನಿವಾಸ ಮೂರ್ತಿ ಮತ್ತು 75ರ ಇಳಿವಯಸ್ಸಿನ ಎನ್‌. ಶ್ರೀಧರ ಅವರು ಸೋಮವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) 17ನೇ ಘಟಿಕೋತ್ಸವದಲ್ಲಿ ಸಾಬೀತು ಮಾಡಿದರು.

ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದವರ ನಡುವೆ ಈ ಇಬ್ಬರು ಎಲ್ಲರ ಕೇಂದ್ರಬಿಂದುವಾಗಿದ್ದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಸ್ನಾತಕೋತ್ತರ ಪದವಿ ಪ್ರಮಾಣಪತ್ರ ಸ್ವೀಕರಿಸಿದಾಗ ಜೋರು ಚಪ್ಪಾಳೆ ಕೇಳಿಬಂತು.

ಶ್ರೀನಿವಾಸಮೂರ್ತಿ, ಕನ್ನಡದಲ್ಲಿ ಶೇ 67 ಅಂಕಗಳೊಂದಿಗೆ ನಗದು ಬಹುಮಾನ ಪಡೆದರು. ಬೆಂಗಳೂರಿನ ಬನಶಂಕರಿ ಎರಡನೇ ಹಂತದ ನಿವಾಸಿಯಾಗಿರುವ ಅವರು 1964ರಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪೂರೈಸಿದ್ದರು. ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದು, 2000ದಲ್ಲಿ ನಿವೃತ್ತಿ ಹೊಂದಿದ್ದರು.

‘ಪರೀಕ್ಷೆ ಸಮೀಪಿಸಿದಂತೆ ಪ್ರತಿದಿನ 7 ರಿಂದ 8 ಗಂಟೆ ಓದುತ್ತಿದ್ದೆ. ನಿಗದಿತ ಅವಧಿಯಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕಿದ್ದುದರಿಂದ ದಿನಕ್ಕೆ ಎರಡು ಪುಟಗಳಷ್ಟು ಬರೆದು ಅಭ್ಯಾಸ ಮಾಡುತ್ತಿದ್ದೆ’ ಎಂದು ‘ಪ್ರಜಾವಾಣಿ’ ಜತೆ ಸಂತಸ ಹಂಚಿಕೊಂಡರು.

ಮೈಸೂರಿನ ಹೆಬ್ಬಾಳದ ನಿವಾಸಿ ಶ್ರೀಧರ, ಶೇ 72 ಅಂಕಗಳೊಂದಿಗೆ ಸಂಸ್ಕೃತ ಎಂ.ಎ ಪದವಿ ಪಡೆದರು. ಎಂಜಿನಿಯರ್ ಪದವೀಧರರಾಗಿರುವ ಅವರು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿದ್ದಾರೆ.

ಗೌರವ ಡಾಕ್ಟರೇಟ್ ಪ್ರದಾನ: ಬೆಂಗಳೂರಿನ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್, ಆರ್‌.ವಿ.ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಎ.ವಿ. ಎಸ್‌.ಮೂರ್ತಿ, ಟಿಸಿಎಸ್ ಉಪಾಧ್ಯಕ್ಷ ಇ.ಎಸ್‌.ಚಕ್ರವರ್ತಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) 17ನೇ ಘಟಿಕೋತ್ಸವದಲ್ಲಿ ಆನಂದ ಸಂಕೇಶ್ವರ, ಎ.ವಿ.ಎಸ್‌.ಮೂರ್ತಿ ಮತ್ತು ಇ.ಎಸ್‌.ಚಕ್ರವರ್ತಿ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ‘ಗೌರವ ಡಾಕ್ಟರೇಟ್’ ಪ್ರದಾನ ಮಾಡಿದರು. ಕೆಎಸ್‌ಒಯು ಕುಲಸಚಿವ (ಮೌಲ್ಯಮಾಪನ) ಡಾ.ಕೆ.ಬಿ.ಪ್ರವೀಣ, ಕುಲಪತಿ ಡಾ.ಎಸ್‌.ವಿದ್ಯಾಶಂಕರ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ (ತಾಂತ್ರಿಕ) ಎ.ಬಿ. ಬಸವರಾಜು, ಕುಲಸಚಿವ ಡಾ.ಆರ್‌.ರಾಜಣ್ಣ ಇದ್ದಾರೆ


ಎನ್‌.ಶ್ರೀಧರ


ಶ್ರೀನಿವಾಸ ಮೂರ್ತಿ

28ಕ್ಕೆ ಪ್ರಶಸ್ತಿ ಪ್ರದಾನ, ವಿಚಾರ ಸಂಕಿರಣ

ಬೆಂಗಳೂರು: ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ತ್ರಿ-ದಶಮಾನೋತ್ಸವ, ವಿಚಾರ ಸಂಕಿರಣ ಮತ್ತು ಪ್ರತಿಷ್ಠಾನದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ಏ.28ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ.


ಶಂಕರ್ ಭಟ್


ಕಮನಿಧರನ್

ಸಂಜೆ 5.30ರಿಂದ ಕಾರ್ಯಕ್ರಮ ನಡೆಯಲಿದ್ದು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ರಮಾನಂದ ಗುರೂಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಾಧ್ವಿ ಯೋಗಿನಿ ಮಾತಾ ಆಶೀರ್ವಚನ ನೀಡಲಿದ್ದಾರೆ.ಪ್ರತಿಷ್ಠಾನದ ವತಿಯಿಂದ ರಂಗಭೂಮಿ ಕಲಾವಿದರಾದ ಶಂಕರ್ ಭಟ್ ಮತ್ತು ಕಮನಿಧರನ್ ಅವರಿಗೆ ‘ರಾಷ್ಟ್ರೀಯ ಕಲಾ ವಿಭೂಷಣ ರಾಷ್ಟ್ರ ಪ್ರಶಸ್ತಿ’ ಪ್ರದಾನ ನಡೆಯಲಿದೆ. ರಾಷ್ಟ್ರೀಯ ಗ್ರಂಥಾಲಯ ರತ್ನ ಪ್ರಶಸ್ತಿ, ವಿಶ್ವೇಶ್ವರಯ್ಯ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಪ್ರದಾನವೂ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಹಾಪ್‌ಕಾಮ್ಸ್ ಆನ್‌ಲೈನ್ ಸೇವೆ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಗ್ರಾಹಕರ ಮನೆ ಬಾಗಿಲಿಗೆ ಉತ್ಪನ್ನಗಳನ್ನು ತಲುಪಿಸಲು ಹಾಪ್‌ಕಾಮ್ಸ್ ಆರಂಭಿಸಿದ್ದ ಆನ್‌ಲೈನ್ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ತಾಜಾ ಹಣ್ಣು, ತರಕಾರಿಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದೊಂದಿಗೆ ಈ ಆನ್‌ಲೈನ್ ಸೇವೆಯನ್ನು 2021ರ ಸೆಪ್ಟೆಂಬರ್‌ನಲ್ಲಿ ಆರಂಭಿಸಲಾಗಿತ್ತು.

‘ಉತ್ಪನ್ನಗಳನ್ನು ತಲುಪಿಸಲು ಕೋಡ್ ಕೆಟಲಿಸ್ಟ್ ಎಂಬ ಸಂಸ್ಥೆ ಹಾಪ್‌ಕಾಮ್ಸ್ ಜತೆ ಕೈಜೋಡಿಸಿತ್ತು. ಆಡಳಿತಾತ್ಮಕ ಕಾರಣದಿಂದ ಈ ಸಂಸ್ಥೆಯ ಆನ್‌ಲೈನ್ ಸೇವೆಯನ್ನು ಸದ್ಯ ರದ್ದುಗೊಳಿಸಲಾಗಿದೆ. ಸಂಸ್ಥೆಯ ಗ್ರಾಹಕರು ಇದಕ್ಕೆ ಸಹಕರಿಸಬೇಕು’ ಎಂದು ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್‌.ಮಿರ್ಜಿ ತಿಳಿಸಿದ್ದಾರೆ.

ರೊಬೊಟಿಕ್ ಸರ್ಜಿಕಲ್ ವ್ಯವಸ್ಥೆ ಶುರು



ಬೆಂಗಳೂರು: ನಗರದ ಎನ್‌ಯು ಆಸ್ಪತ್ರೆಯಲ್ಲಿ ‘ವರ್ಸಿಯಸ್ ರೊಬೊಟಿಕ್ ಸರ್ಜಿಕಲ್ ಸಿಸ್ಟಮ್’ ಅನ್ನು ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಮತ್ತು ಉದ್ಯಮಿ ಟಿ.ವಿ. ಮೋಹನದಾಸ್ ಪೈ ಉದ್ಘಾಟಿಸಿದರು.

ಪ್ರೊ.ಗೋವಿಂದ ರಂಗರಾಜನ್ ಮಾತನಾಡಿ, ‘ರೊಬೊಟಿಕ್ಸ್ ಆಧಾರಿತ ಶಸ್ತ್ರಚಿಕಿತ್ಸೆಯು ವೈದ್ಯಕೀಯ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗೆ ಕಾರಣವಾಗಲಿದೆ. ಇದು ನೆಫ್ರಾಲಜಿ ಮತ್ತು ಮೂತ್ರಶಾಸ್ತ್ರಕ್ಕೆ ಅಗತ್ಯವಿರುವ ತಂತ್ರಜ್ಞಾನ. ಆರೋಗ್ಯ ರಕ್ಷಣೆಯಲ್ಲಿ ತಂತ್ರಜ್ಞಾನದ ಪಾತ್ರವನ್ನು ಪ್ರತಿಬಿಂಬಿಸಲು ಇದು ಸೂಕ್ತ ಸಮಯ’ ಎಂದರು.

ಟಿ.ವಿ.ಮೋಹನದಾಸ ಪೈ ಮಾತನಾಡಿ, ‘ತಂತ್ರಜ್ಞಾನ ಭವಿಷ್ಯದ ಆರೋಗ್ಯ ರಕ್ಷಣೆಗೆ ಸಹಾಯ ನೀಡಲಿದೆ’ ಎಂದರು.

ಎನ್‌ಯು ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಸನ್ನ ವೆಂಕಟೇಶ್ ಎಂ.ಕೆ., ‘ರೋಗಿಗಳಿಗೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಎಂದರೆ ಕಡಿಮೆ ನೋವು ಮತ್ತು ಬೇಗ ಆರಂಭಿಕ ಚೇತರಿಕೆ ಎಂದರ್ಥ. ಇದರಿಂದ ನಾವು ಕನಿಷ್ಠ ಆಕ್ರಮಣಕಾರಿ ತಂತ್ರಗಳಲ್ಲಿ ಹೆಚ್ಚು ಸಂಕೀರ್ಣವಾದ ಶಸ್ತ್ರಚಿಕಿತ್ಸೆಗಳನ್ನು ಸುಲಭವಾಗಿ ಮಾಡಬಹುದು’ ಎಂದರು.

‘ದಿನವಿಡೀ ವಾಣಿಜ್ಯ ಚಟುವಟಿಕೆ ಬೇಡ’

ಬೆಂಗಳೂರು: ವಾಣಿಜ್ಯ ಅಂಗಡಿಗಳನ್ನು ದಿನವಿಡೀ ತೆರೆಯಲು ಅವಕಾಶ ನೀಡಿರುವ ಸರ್ಕಾರದ ಆದೇಶಕ್ಕೆ ನಗರದ ವಿವಿಧ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ವಿರೋಧ ವ್ಯಕ್ತಪಡಿಸಿವೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇಂದಿರಾನಗರದ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟ ‘ಐ ಚೇಂಜ್ ಇಂದಿರಾನಗರ’ದ ಸಹ ಸಂಸ್ಥಾಪಕಿ ಸ್ನೇಹಾ ನಂದಿಹಾಳ್, ‘ವಾರದ ಏಳೂ ದಿನ ಮತ್ತು ದಿನ 24 ಗಂಟೆಗಳೂ ಎಲ್ಲ ರೀತಿಯ ವಾಣಿಜ್ಯ ಅಂಗಡಿ ಮುಂಗಟ್ಟುಗಳನ್ನು ತೆರೆಯಬಹುದು ಎಂದು ಅಧಿಸೂಚನೆಯಲ್ಲಿದೆ. ವಾಣಿಜ್ಯ ಅಂಗಡಿಗಳು ಈಗಾಗಲೇ ಜನವಸತಿ ಪ್ರದೇಶಗಳನ್ನು ಅತಿಕ್ರಮಿಸಿದ್ದು, ಈ ಹೊಸ ವಿನಾಯಿತಿಯಿಂದಾಗಿ ನಗರದ ಜನರಿಗೆ ತೊಂದರೆಗಳೇ ಹೆಚ್ಚು’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘2021ರಲ್ಲೇ ಈ ಬಗ್ಗೆ ಆದೇಶ ಹೊರಡಿಸಲಾಗಿದೆ. ರಾತ್ರಿಯಿಡೀ ಅಂಗಡಿಗಳು ತೆರೆಯಲ್ಪಡುವುದರಿಂದ ಜನರ ನಿದ್ರಿಸುವ ಹಕ್ಕು ಮತ್ತು ಜೀವಿಸುವ ಹಕ್ಕುಗಳಿಗೆ ಅಡ್ಡಿಯಾಗಲಿದೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯಗಳು ಸೇರಿದಂತೆ ಅಪರಾಧ ಪ್ರಕರಣಗಳೂ ಹೆಚ್ಚಾಗಲಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ರಾತ್ರಿಯಿಡೀ ವಾಹನಗಳ ಸಂಚಾರ, ಅತಿ ವೇಗದ ಚಾಲನೆಯಿಂದ ಅಪಘಾತಗಳು, ಪುಂಡರ ಹಾವಳಿ, ಶಬ್ದ ಮಾಲಿನ್ಯ, ಅನಿಯಂತ್ರಿತ ಕೂಟಗಳಿಂದ ನಿವಾಸಿಗಳು ಕಿರುಕುಳಕ್ಕೆ ಒಳಗಾಗುತ್ತಾರೆ. ಈ ಆದೇಶ ಜಾರಿ ಮಾಡದಂತೆ ಬಿಬಿಎಂಪಿ ಮತ್ತು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಲಾಗುವುದು. ಬೇಡಿಕೆ ಈಡೇರದಿದ್ದರೆ ಪ್ರತಿಭಟನೆ ನಡೆಸಲಾಗುವುದು’ ಎಂದೂ ಎಚ್ಚರಿಸಿದರು.

ಚಿತ್ರಾವಳಿ


ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ‘ವೃಕ್ಷ ಲಕ್ಷ’ ಕಾರ್ಯಕ್ರಮದ ಅಂಗವಾಗಿ ಬಿಜೆಪಿಯ ಸ್ಥಳೀಯ ಘಟಕದ ಪದಾಧಿಕಾರಿಗಳು ಪೂಜಾರಿ ಬಡಾವಣೆಯ ಬಾಲಾಂಜನೇಯ ದೇಗುಲದ ರಸ್ತೆಯ ಬದಿಯಲ್ಲಿ ಸಸಿ ನೆಟ್ಟರು. ಡಾ.ಸುಜಾತ ರಾಣಿ, ಕೆ. ಶಿವಣ್ಣ, ಡಾ.ದೇವಿದಾಸ್ ಬಾಳಿಗಾ, ಮೋಹನ ಕುಮಟಾಕರ್, ಕೆ.ಜಿ.ಸಿದ್ದರಾಜು, ಆರ್‌.ಶ್ರೀನಿವಾಸ್, ವಿವೇಕಾನಂದ ಶೆಟ್ಟಿ, ಎಸ್‌. ಶ್ರೀನಿವಾಸ ನಾಯ್ಡು ಇತರರು ಇದ್ದರು.


ಆರೋಹಣ ಸಂಸ್ಥೆಯು ನಗರದಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಗಾಯಕಿ ಮಂಜುಳಾ ಗುರುರಾಜ್ ಅವರಿಗೆ ‘ಕಲಾ ರೂಪ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಶಾಸಕ ಎಲ್‌.ಎ.ರವಿಸುಬ್ರಹ್ಮಣ್ಯ, ಗರುಡ ಪ್ರತಿಷ್ಠಾನದ ಅಧ್ಯಕ್ಷೆ ಮೇದಿನಿ ಉದಯ್ ಗರುಡಾಚಾರ್, ಲೇಖಕಿ ಮೇಖಲಾ ವೆಂಕಟೇಶ್, ಆರೋಹಣ ಸಂಸ್ಥೆಯ ಅಧ್ಯಕ್ಷ ಸುಧೀಂದ್ರ, ಉಪಾಧ್ಯಕ್ಷೆ ರೂಪ ನಾಗೇಂದ್ರ, ಕಟ್ಟೆ ಸತ್ಯನಾರಾಯಣ ಇದ್ದಾರೆ.



ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಜಯನಗರದ ಮಳಿಗೆಯನ್ನು ಶಾಸಕ ಉದಯ್ ಗರುಡಾಚಾರ್ ಈಚೆಗೆ ಉದ್ಘಾಟಿಸಿದರು. ‘ಮಲಬಾರ್’ ಕಂಪನಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ; ಮೊಬೈಲ್ ಕರೆಗಳ ಪರಿಶೀಲನೆಗೆ ಮುಂದಾದ ಸಿಐಡಿ

ಅಕ್ರಮಕ್ಕೆ ಮೃತ ನೌಕರನ ಮೊಬೈಲ್ ಬಳಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿಯ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ರುದ್ರಗೌಡ ಡಿ. ಪಾಟೀಲ, ಕೋವಿಡ್‌ನಿಂದ ಮೃತಪಟ್ಟ ತನ್ನ ನೌಕರರೊಬ್ಬರ ಮೊಬೈಲ್ ಬಳಸಿಕೊಂಡಿದ್ದಾಗಿ ಹೇಳಿಕೆ ನೀಡಿರುವುದಾಗಿ ಸಿಐಡಿ ಮೂಲಗಳು ತಿಳಿಸಿವೆ.

'ಅಫಜಲಪುರ ತಾಲ್ಲೂಕಿನ ಸೊನ್ನ ಗ್ರಾಮದ ಲಕ್ಷ್ಮಿಪುತ್ರ ಎಂಬುವವರು ರುದ್ರಗೌಡ ಬಳಿ ಸೂಪರ್‌ವೈಸರ್ ಆಗಿದ್ದರು. ಅವರ ಸಾವಿನ ನಂತರ ರುದ್ರಗೌಡ, ಅವರ ಎರಡು ಮೊಬೈಲ್‌ಗಳನ್ನು ಸಿಮ್ ಸಮೇತ ತೆಗೆದುಕೊಂಡು, ಅಭ್ಯರ್ಥಿಗಳಿಗೆ ಉತ್ತರ ಪೂರೈಸಲು ಬಳಸಿದ್ದ. ಒಂದುವೇಳೆ ಪ್ರಕರಣ ಹೊರಬಿದ್ದರೂ ತಾನು ಸಿಕ್ಕಿಬೀಳಬಾರದು ಎಂಬ ಉದ್ದೇಶದಿಂದ ಸತ್ತ ವ್ಯಕ್ತಿಯ ಮೊಬೈಲ್ ಬಳಸಿದ್ದಾಗಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ. ಹಿಂದಿನ ವಿವಿಧ ನೇಮಕಾತಿ ಪರೀಕ್ಷೆಗಳಲ್ಲೂ ಇದೇ ತಂತ್ರ ಬಳಸಿರುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

'ಅಭ್ಯರ್ಥಿಗಳ ಬಳಿ ಹಣ ಪಡೆದು ವ್ಯವಹಾರ ಕುದುರಿಸುವಾಗಲೇ ಅವರು ಮತ್ತೊಬ್ಬರ ಮೊಬೈಲ್ ತರಬೇಕು



ಕಲಬುರಗಿಯ ಎಂ.ಬಿ. ನಗರ ಪೊಲೀಸ್ ಠಾಣೆಯಲ್ಲಿ ಆರೋಪಿ ರುದ್ರಗೌಡ ಡಿ. ಪಾಟೀಲ ಕುಳಿತುಕೊಳ್ಳಲು ಕುರ್ಚಿ ನೀಡಲಾಗಿತ್ತು. ಇನ್ನೊಬ್ಬ ಆರೋಪಿ ಮಲ್ಲಿಕಾರ್ಜುನ ಎದುರಿಗೆ ನಿಂತಿರುವುದು

ಎಂದು ಷರತ್ತು ಹಾಕುತ್ತಿದ್ದ. ಈಗಾಗಲೇ ಬಂಧಿತನಾಗಿರುವ ಶಾಸಕರ ಗನ್‌ಮ್ಯಾನ್ ಹಯ್ಯಾಳಿ ದೇಸಾಯಿ ಪರೀಕ್ಷೆಯಲ್ಲಿ ಇದೇ ತಂತ್ರ ಬಳಸಿದ್ದ' ಎನ್ನುತ್ತವೆ ಈ ಮೂಲಗಳು. ಹಯ್ಯಾಳಿಗೆ ಮೊಬೈಲ್ ನೀಡಿದ ಆರೋಪದಡಿ ಕಾನ್‌ಸ್ಟೆಬಲ್ ರುದ್ರಗೌಡ ಹಾಗೂ ಶರಣಬಸಪ್ಪ ಕೂಡ ಬಂಧಿತರಾಗಿದ್ದಾರೆ.

ಇಲ್ಲಿನ ಜ್ಞಾನಜ್ಯೋತಿ ಅಂಗ್ಲ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳು ಹಾಗೂ ಮೇಲ್ವಿಚಾರಕರ ಮೊಬೈಲ್ ಕರೆಗಳನ್ನು ಸಿಐಡಿ ಜಾಲಾಡುತ್ತಿದೆ. ಪರೀಕ್ಷಾ ಸಂದರ್ಭದಲ್ಲಿ ಇವರ ಮೊಬೈಲ್ ಸ್ವಿಚ್‌ಆಫ್ ಇತ್ತು ಎಂಬ ದಾಖಲೆ ಸೃಷ್ಟಿ ಮಾಡುವ ಉದ್ದೇಶದಿಂದಲೇ ಬೇರೊಬ್ಬರ ಮೊಬೈಲ್ ಬಳಸುವ ತಂತ್ರ ರೂಪಿಸಿದ್ದಾರೆ. ಆದರೆ, ಎಲೆಕ್ಟ್ರಾನಿಕ್ ಡಿವೈಸ್, ಬ್ಲೂಟೂತ್ ಬಳಸಿದ್ದರಿಂದ 'ಟವರ್‌ಡಂಪ್' ಟೆಕ್ನಾಲಜಿ ಮೂಲಕ ಕರೆಗಳ ಶೋಧ ಸಾಧ್ಯವಾಗಿದೆ ಎನ್ನುತ್ತವೆ ಮೂಲಗಳು.

ಒಡಿಶಾದಿಂದ ಎಲೆಕ್ಟ್ರಾನಿಕ್ ಡಿವೈಸ್ ಖರೀದಿ: 'ಪರೀಕ್ಷೆಯಲ್ಲಿ ಅಭ್ಯರ್ಥಿಗಳಿಗೆ ನೀಡಿದ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ಒಡಿಶಾದಿಂದ ತರಿಸಿದ್ದ. ಪರೀಕ್ಷಾ ಕೇಂದ್ರದ ಮೇಲ್ವಿಚಾರಕರ ಮೂಲಕವೇ ಈ ಡಿವೈಸ್‌ಗಳನ್ನು ಅಭ್ಯರ್ಥಿಗಳಿಗೆ ತಲುಪಿಸಿದ್ದ. ಎ, ಬಿ, ಸಿ, ಡಿ ಸರಣಿಯಲ್ಲಿರುವ ಪ್ರಶ್ನೆ ಪತ್ರಿಕೆಗಳನ್ನು ಮುಂಚಿತವಾಗಿಯೇ ತರಿಸಿಕೊಂಡಿದ್ದ. ಪರಿಣತರಿಂದ ಸರಿಯಾದ ಉತ್ತರಗಳನ್ನು ಪಡೆದು, ಯಾವ ಅಭ್ಯರ್ಥಿಗೆ ಯಾವ ಸಿರೀಸ್‌ನ ಒಎಂಆರ್ ಶೀಟ್ ಬರುತ್ತದೆ ಎಂಬುದನ್ನು ತಿಳಿದುಕೊಂಡು, ಅದರ ಉತ್ತರಗಳನ್ನು ತಲುಪಿಸುವ ವ್ಯವಸ್ಥೆ ಮಾಡಿದ್ದ. ಪರೀಕ್ಷೆ ಮುಗಿದ ಬಳಿಕ ಡಿವೈಸ್‌ಗಳನ್ನು ಅಭ್ಯರ್ಥಿಗಳಿಂದ ವಾಪಸ್ ಪಡೆದಿದ್ದಾಗಿ ಬಾಯಿಬಿಟ್ಟಿದ್ದಾನೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಠಾಣೆಯಲ್ಲೂ ರುದ್ರಗೌಡ ದೌಲತ್: ಸಿಐಡಿ ಕಸ್ಟಡಿಯಲ್ಲಿರುವ ರುದ್ರಗೌಡನನ್ನು ರಾತ್ರಿ ಇಲ್ಲಿನ ಎಂ.ಬಿ. ನಗರ ಪೊಲೀಸ್ ಠಾಣೆಯ ಸೆಲ್‌ನಲ್ಲಿ ಇಡಲಾಗಿತ್ತು. ಸೆಲ್‌ನಲ್ಲಿ ರುದ್ರಗೌಡ ಕುರ್ಚಿ ಹಾಕಿಕೊಂಡು ಕುಳಿತಿರುವ ಹಾಗೂ ಇನ್ನೊಬ್ಬ ಆರೋಪಿ ಮಲ್ಲಿಕಾರ್ಜುನ ಕೈಕಟ್ಟಿಕೊಂಡು ನಿಂತಿರುವ ಫೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತು.

ಪುಕ್ಕಟ್ಟೆ ಪ್ರಚಾರ ಕೊಡ್ತಿದ್ದೀರಿ...: ರುದ್ರಗೌಡ ಡಿ. ಪಾಟೀಲ ಅವರ ಅಣ್ಣ, ಸಿಐಡಿ ಕಸ್ಟಡಿಯಲ್ಲಿರುವ ಪ್ರಕರಣದ ಮತ್ತೊಬ್ಬ ಆರೋಪಿ ಮಹಾಂತೇಶ ಪಾಟೀಲ ಸೋಮವಾರ ಮಾಧ್ಯಮದವರನ್ನು ನೋಡುತ್ತಿದ್ದಂತೆಯೇ, 'ಹಾಕ್ರಿ ಹಾಕ್ರಿ... ಚಂದ್ ಹಾಕ್ರಿ. ರೊಕ್ಕ ಕೊಟ್ಟರೂ ಟಿ.ವಿ.ನ್ಯಾಗ್ ಅಡ್ವರ್ಟೈಸ್ ಬರೂದಿಲ್ಲ. ಈಗ ಪುಕ್ಕಟ್ಟೆ ಬರ್ತದ. ಬರ್ಲಿ ಬರ್ಲಿ ಚಂದ್ ಬರ್ಲಿ...' ಎಂದು ಹೇಳಿದರು. ಅಷ್ಟರಲ್ಲೇ ಅಧಿಕಾರಿಗಳು ಅವರನ್ನು ಮುಂದಕ್ಕೆ ಕರೆದೊಯ್ದರು.

ಜಾಮೀನು ಅರ್ಜಿ ವಿಚಾರಣೆ 27ಕ್ಕೆ ಮುಂದೂಡಿಕೆ

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಪ್ರಕರಣದ ಆರೋಪಿಗಳಾದ ಜ್ಞಾನಜ್ಯೋತಿ ಅಂಗ್ಲಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಸೇರಿದಂತೆ ಐವರ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ಏ. 27ಕ್ಕೆ ಮುಂದೂಡಲಾಗಿದೆ.

ಜಾಮೀನು ಅರ್ಜಿ ವಿಚಾರಣೆಗೆ ತಕರಾರು ಸಲ್ಲಿಸಲು ಸಿಐಡಿ ಅಧಿಕಾರಿಗಳು ಏ. 27ರವರೆಗೆ ಕಾಲಾವಕಾಶ ಕೋರಿದ ಕಾರಣ, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು.

ಈ ಶಾಲೆಯ ಮುಖ್ಯಶಿಕ್ಷಕ ಕಾಶೀನಾಥ, ಶಿಕ್ಷಕಿಯರಾದ ಅರ್ಚನಾ ಹೊಣಗೇರಿ, ಸುನಂದಾ, ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಅವರು ನಿರೀಕ್ಷಣಾ ಜಾಮೀನು ಕೋರಿ ಏ. 20ರಂದು ಅರ್ಜಿ ಸಲ್ಲಿಸಿದ್ದರು.

ನೆರವಾದವರ ಮೇಲೂ ಕಠಿಣ ಕ್ರಮ

ಸಿಐಡಿ ಡಿಜಿಪಿ ಪಿ.ಎಸ್. ಸಂಧು ಅವರು, ಸೋಮವಾರ ನಗರಕ್ಕೆ ಭೇಟಿ ನೀಡಿ, ತನಿಖಾ ತಂಡದಲ್ಲಿರುವ ಅಧಿಕಾರಿಗಳೊಂದಿಗೆ ಚರ್ಚಿಸಿದರು.

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆಸಲು ನೆರವಾದವರು, ಆರೋಪಿಗಳಿಗೆ ರಕ್ಷಣೆ ಕೊಟ್ಟವರು ಹಾಗೂ ತಪ್ಪಿಸಿಕೊಳ್ಳಲು ಸಹಾಯ ಮಾಡಿದವರ ಮೇಲೂ ಕಠಿಣ ಕಾನೂನು ಕ್ರಮ ಜರುಗಿಸಬೇಕು' ಎಂದು ಅವರು ತನಿಖಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗುತ್ತಿಗೆಯಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆ ನೀಡಿಕೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಮಾಹಿತಿ ಇದೆ. ಇದರ ನಿಯಂತ್ರಣಕ್ಕೆ ಗುತ್ತಿಗೆದಾರರ ಸಹಕಾರವೂ ಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸೋಮವಾರ 'ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ'ದ ಪದಾಧಿಕಾರಿಗಳ ಜತೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಗುತ್ತಿಗೆಯಲ್ಲಿ ಭ್ರಷ್ಟಾಚಾರ ಕಡಿವಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ₹50 ಲಕ್ಷದವರೆಗಿನ ಕಾಮಗಾರಿಗಳ ಗುತ್ತಿಗೆಯಲ್ಲಿ ಪ್ಯಾಕೇಜ್ ಟೆಂಡರ್ ನಡೆಸಬಾರದು ಎಂದು ಬೊಮ್ಮಾಯಿ ಅಧಿಕಾರಿಗಳಿಗೆ ಸೂಚಿಸಿದರು. ₹25 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಟೆಂಡರ್ ಪರಿಶೀಲನೆ ನಡೆಸಲು ಆದೇಶ ಹೊರಡಿಸಲಾಗುವುದು ಎಂದರು.

ಗುತ್ತಿಗೆ ಕಾಮಗಾರಿ ವೆಚ್ಚದ ಬಾಕಿ ಹಣ ಪಾವತಿಗೆ ತಂತ್ರಾಂಶವೊಂದನ್ನು ರೂಪಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ಯಾಕೇಜ್ ಪದ್ಧತಿ ಕೈಬಿಡಿ: ಸ್ಥಳೀಯ ಗುತ್ತಿಗೆದಾರರನ್ನು ದೂರವಿಟ್ಟು ನೆರೆ ರಾಜ್ಯಗಳ ಗುತ್ತಿಗೆದಾರರಿಗೆ ಮಣೆ ಹಾಕಲು ಪ್ಯಾಕೇಜ್ ಪದ್ಧತಿ ಎಂಬ ತಂತ್ರವನ್ನು ಅಧಿಕಾರಿಗಳು ಕಂಡುಕೊಂಡಿದ್ದಾರೆ. ಇದು ಸ್ಥಳೀಯ, ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ. ಅನಗತ್ಯ ಅರ್ಹತೆ ಮತ್ತು ನಿಯಮಗಳನ್ನು ಹೇರಿ ಸ್ಥಳೀಯರನ್ನು ದೂರವಿಡಲಾಗುತ್ತಿದೆ. ಆದ್ದರಿಂದ ಪ್ಯಾಕೇಜ್ ಪದ್ಧತಿ ರದ್ದು ಮಾಡಬೇಕು ಎಂದು ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮನವಿ ಮಾಡಿದರು.

₹50 ಲಕ್ಷ ಟೆಂಡರ್‌ವರೆಗೆ ಯಾವುದೇ ಯಂತ್ರೋಪಕರಣಗಳನ್ನು ಹೊಂದಬೇಕಿಲ್ಲ ಎಂಬ ಮಿತಿ ಇದೆ. ಈ ಮಿತಿಯನ್ನು ₹5 ಕೋಟಿವರೆಗೆ ಹೆಚ್ಚಿಸಿದರೆ ಗುತ್ತಿಗೆದಾರರಿಗೆ ಅನುಕೂಲವಾಗುತ್ತದೆ. ₹5 ಕೋಟಿ ವರೆಗಿನ ಟೆಂಡರ್ ವಿತರಣೆ ಮಾಡುವ ಅಧಿಕಾರವನ್ನು ಸ್ಥಳೀಯ ಇಲಾಖೆ ಮುಖ್ಯಸ್ಥರಿಗೆ ನೀಡಬೇಕು ಎಂದು ಮನವಿ ಮಾಡಿದರು.

ಗುತ್ತಿಗೆದಾರರಿಗೆ ಜಲಸಂಪನ್ಮೂಲ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಬಿಬಿಎಂಪಿ ಮತ್ತು ಇತರ ಇಲಾಖೆಗಳಿಂದ ₹20 ಸಾವಿರ ಕೋಟಿಗೂ ಹೆಚ್ಚು ಹಣ ಬಿಡುಗಡೆ ಆಗಬೇಕಿದೆ. ಪ್ರಭಾವಿ ಗುತ್ತಿಗೆದಾರರು ಬಾಕಿ ಪಾವತಿ ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೆ, ಜನಪ್ರತಿನಿಧಿಗಳು ಮಧ್ಯೆ ಪ್ರವೇಶಿಸಿ ಜ್ಯೇಷ್ಠತೆ ಉಲ್ಲಂಘಿಸಿ ಹಣ ಬಿಡುಗಡೆಗೆ ಒತ್ತಡ ಹೇರುವ ಪರಿಪಾಟ ಹೆಚ್ಚಾಗಿದೆ ಎಂದೂ ಕೆಂಪಣ್ಣ ಹೇಳಿದರು.

ಅಕ್ರಮ ಬಯಲಿಗೆಳೆದವರಿಗೆ ನೋಟಿಸ್: ಆಕ್ರೋಶ

ಶಾಸಕ ಪ್ರಿಯಾಂಕ್ ಖರ್ಗೆ ಪರ ನಿಂತ ಕಾಂಗ್ರೆಸ್ ನಾಯಕರು ● 'ಬಾಯಿ ಮುಚ್ಚಿಸುವ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಭಾಗಿಯಾದವರನ್ನು ಬಿಟ್ಟು ಅಕ್ರಮ ಬಯಲಿಗೆಳೆದವರಿಗೆ ನೋಟಿಸ್ ಕೊಡುವ ಮೂಲಕ ಅನ್ಯಾಯದ ವಿರುದ್ಧ ಧ್ವನಿ ಎತ್ತುವವರನ್ನು ಹೆದರಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ' ಎಂದು ಕಾಂಗ್ರೆಸ್ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಿಎಸ್‌ಐ ನೇಮಕಾತಿ ಅಕ್ರಮದ ಬಗ್ಗೆ ಸರಣಿ ಪತ್ರಿಕಾಗೋಷ್ಠಿ ನಡೆಸಿದ್ದ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಸಿಐಡಿ ನೋಟಿಸ್ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, 'ತಪ್ಪು ಮಾಡಿದವರನ್ನು ಹಿಡಿಯುವುದು ಸರ್ಕಾರದ ಜವಾಬ್ದಾರಿ. ಅಕ್ರಮ ಬಯಲು ಮಾಡಿದವರಿಗೆ ನೋಟೀಸ್ ಜಾರಿ ಮಾಡಿ, ಮುಂದೆ ಯಾರೂ ನಿಮ್ಮ ವಿರುದ್ಧ ಧ್ವನಿ ಎತ್ತದಂತೆ ಮಾಡಲು ಪ್ರಯತ್ನಿಸುತ್ತಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

'ಪಿಎಸ್‌ಐ ನೇಮಕಾತಿ ಅಕ್ರಮದ ಆರೋಪಿ ಯಾರೆಂದು ತಮಗೆ ಗೊತ್ತೇ ಇಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದರು. ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಅವರ ಮನೆಗೆ ಸಚಿವರು ಭೇಟಿ ನೀಡಿದಾಗ ತೆಗೆಸಿಕೊಂಡಿದ್ದ ಫೋಟೋಗಳು ಮಾರನೇ ದಿನ ಪ್ರಕಟವಾಗಿದ್ದವು. ಆರೋಪಿಯನ್ನು ಬಂಧಿಸಿ ತನಿಖೆ ಮಾಡಬೇಕಿತ್ತು. ಕಳ್ಳರನ್ನು ಹಿಡಿಯುವ ಬದಲು ಕಳ್ಳತನದ ಮಾಹಿತಿ ನೀಡಿದವರಿಗೆ ನೋಟಿಸ್ ನೀಡಿರುವುದು ಎಷ್ಟು ಸರಿ' ಎಂದು ಶಿವಕುಮಾರ್ ಪ್ರಶ್ನಿಸಿದ್ದಾರೆ.

ಬಾಯಿ ಮುಚ್ಚಿಸುವ ಹುನ್ನಾರ- ಸಿದ್ದರಾಮಯ್ಯ: 'ಪ್ರಿಯಾಂಕ್ ಖರ್ಗೆ ಅವರನ್ನು ತನಿಖೆಗೆ ಒಳಪಡಿಸಬೇಕು ಎಂದು ಸಚಿವ ಸುನೀಲ್‌ಕುಮಾರ್ ಹೇಳಿಕೆ ನೀಡಿದ ಬೆನ್ನಲ್ಲೇ, ಸಿಐಡಿ ನೋಟಿಸ್ ನೀಡಿದೆ. ಇದನ್ನು ಗಮನಿಸಿದರೆ ಹಗರಣದ ಬಗ್ಗೆ ಮಾತನಾಡುವವರ ಬಾಯಿ ಮುಚ್ಚಿಸುವ ಹುನ್ನಾರವನ್ನು ಬಿಜೆಪಿ ನಾಯಕರು ನಡೆಸಿದ್ದಾರೆಂದು ತೋರುತ್ತದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

'ಅಡಿಯಿಂದ ಮುಡಿಯವರೆಗೆ ಶೇ 100ರಷ್ಟು ಭ್ರಷ್ಟಾಚಾರ ನಡೆಸುತ್ತಿರುವ ರಾಜ್ಯದ ಬಿಜೆಪಿ ಸರ್ಕಾರಕ್ಕೆ ಅಂಟಿಕೊಂಡಿರುವ ಮಸಿಯನ್ನು ಸುಳ್ಳಿನ ಬಣ್ಣದಿಂದ ಅಳಿಸಲಾಗದು' ಎಂದು ಅವರು ಹೇಳಿದ್ದಾರೆ.

'ಗೃಹ ಸಚಿವರ ವಿಚಾರಣೆ ನಡೆಸಿ'

'ನೇಮಕಾತಿ ಹಗರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಅವರನ್ನು ರಕ್ಷಣೆ ಮಾಡುತ್ತಿರುವುದು ಯಾರು? ನೇಮಕಾತಿ ಪ್ರಕ್ರಿಯೆ ನಡೆಸಿದವರನ್ನು ಇನ್ನೂ ಯಾಕೆ ವಿಚಾರಣೆಗೆ ಕರೆದಿಲ್ಲ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಾಗದೇ ಇರುವುದನ್ನು ನೋಡಿದರೆ ಇಡೀ ಇಲಾಖೆಯೇ ಈ ಹಗರಣದಲ್ಲಿ ಶಾಮೀಲಾಗಿರುವ ಸಂಶಯ ಬರುತ್ತದೆ. ನೇಮಕಾತಿಯ ಪ್ರಮುಖರು ಇಲಾಖೆಯ ಹೊಣೆ ಹೊತ್ತ ಗೃಹ ಸಚಿವರು. ಅವರನ್ನೂ ವಿಚಾರಣೆಗೆ ಕರೆಸಬೇಕಲ್ಲವೇ' ಎಂದರು.

ಅಕ್ರಮ ನಡೆದಿರುವ ಬಗ್ಗೆ ಹಾಗೂ ತನಿಖೆಗೆ ಆದೇಶಿಸಿದ ಬಗ್ಗೆ ನನಗಿಂತ ಮೊದಲೇ ಸಚಿವರೇ ಟ್ವೀಟ್ ಮಾಡಿದ್ದಾರೆ. ನೇಮಕಾತಿ ಅಕ್ರಮದ ಬಗ್ಗೆ ಫೆ.10 ರಂದು ಶಶಿಲ್ ನಮೋಶಿ, ಫೆ. 17ರಂದು ಅರವಿಂದ ಅರಳಿಯವರು ವಿಧಾನ-ಪರಿಷತ್ತಿನಲ್ಲಿ ಪ್ರಶ್ನೆ ಕೇಳಿದ್ದರು. ಸಚಿವರು ಉತ್ತರ ನೀಡಿದ್ದರು. ಅವರಿಗೆ ಉತ್ತರ ಸಿದ್ಧಪಡಿಸಿಕೊಡುವವರು ಅಧಿಕಾರಿಗಳೇ ಅಲ್ಲವೇ? ಹಾಗಂದ ಮೇಲೆ ಸರ್ಕಾರದ ಬಳಿ ಎಲ್ಲ ಮಾಹಿತಿಯೂ ಇರಬೇಕಲ್ಲವೇ ಎಂದು ಅವರು ಕೇಳಿದರು.

'ಎಬಿವಿಪಿ ಕಾರ್ಯಕರ್ತ ಅರುಣ್ ವೈದ್ಯಕೀಯ ಪರೀಕ್ಷೆ ನಡೆದಿಲ್ಲ. ಆದರೆ, ಆತ ಡಬಲ್ ಸ್ಟಾರ್ ಹಾಗೂ ಪೊಲೀಸ್ ಸಮವಸ್ತ್ರ ಹಾಕಿಕೊಂಡು ಓಡಾಡುತ್ತಿದ್ದಾನೆ. ಅವನು ಆಯ್ಕೆಯಾಗಿರುವುದಾದೂ ಹೇಗೆ? ಇವೆಲ್ಲ ಅಧಿಕಾರಿಗಳಿಗೆ ಗೊತ್ತಾಗಿಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಸಿಐಡಿಗೆ ಖರ್ಗೆ ದಾಖಲೆ ನೀಡಲಿ'

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ನಿಷ್ಪಕ್ಷ ತನಿಖೆ ಮುಂದುವರಿಸಲು ಶಾಸಕ ಪ್ರಿಯಾಂಕ್ ಖರ್ಗೆ ತಮ್ಮ ಬಳಿ ಇರುವ ಎಲ್ಲ ದಾಖಲೆ ಹಾಗೂ ಮಾಹಿತಿಗಳನ್ನು ಸಿಐಡಿಗೆ ಒಪ್ಪಿಸಬೇಕು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಈ ಅಕ್ರಮಕ್ಕೆ ಸಂಬಂಧಿಸಿದಂತೆ ಒಂದು ಧ್ವನಿ ಮುದ್ರಿಕೆಯನ್ನು ಪ್ರಿಯಾಂಕ್ ಇತ್ತೀಚೆಗೆ ಬಿಡುಗಡೆ ಮಾಡಿದ್ದರು. ಪ್ರಿಯಾಂಕ್ ರಾಜಕೀಯ ಲಾಭ ಮಾಡಿಕೊಳ್ಳುವ ಹುನ್ನಾರ ನಡೆಸದೇ ಅಕ್ರಮ ಎಸಗಿದವರನ್ನು ಕಾನೂನಿನ ಬಲೆಗೆ ತರಲು ನೆರವಾಗಬೇಕು' ಎಂದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ

ಪ್ರಶ್ನೆಪತ್ರಿಕೆ ಸೋರಿಕೆ: ಸೌಮ್ಯಾ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಸಂಬಂಧ ಆರೋಪಿ ಆರ್. ಸೌಮ್ಯಾ ಅವರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಮೈಸೂರಿನಲ್ಲಿ ಭಾನುವಾರ ರಾತ್ರಿ ಬಂಧಿಸಿದ್ದಾರೆ. ಅವರು ಮೈಸೂರು ವಿಶ್ವ-ವಿದ್ಯಾಲಯದ ಭೂಗೋಳ ವಿಜ್ಞಾನ ವಿಭಾಗದಲ್ಲಿ 'ಪೋಸ್ಟ್ ಡಾಕ್ಟೊರಲ್ ಫೆಲೊ' ಆಗಿ ಸಂಶೋಧನೆ ನಡೆಸುತ್ತಿದ್ದಾರೆ.

ಮಾರ್ಚ್ 14 ರಂದು ನಿಗದಿಯಾಗಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆಪತ್ರಿಕೆಯು ಪರೀಕ್ಷೆ ಆರಂಭಕ್ಕೆ ಕೆಲ ಗಂಟೆಗಳ ಮುಂಚೆ (ಬೆಳಿಗ್ಗೆ 8.30) ಸೋರಿಕೆಯಾಗಿ ವಾಟ್ಸ್ ಆ್ಯಪ್‌ನಲ್ಲಿ ಹರಿದಾಡಿತ್ತು.

ಸೌಮ್ಯಾ ಅವರ ಮೊಬೈಲ್ ಸಂಖ್ಯೆಯಿಂದಲೇ 18 ಪ್ರಶ್ನೆಗಳು ಸೋರಿಕೆಯಾಗಿದೆ ಎಂದು ಆರೋಪಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರು ಮಲ್ಲೇಶ್ವರ ಠಾಣೆಗೆ ಇದೇ 22 ರಂದು ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ್ದರು.

'ಸೌಮ್ಯಾ ಅವರನ್ನು ಮೈಸೂರಿನಲ್ಲಿ ಬಂಧಿಸಿ ಭಾನುವಾರ ರಾತ್ರಿ ನಗರಕ್ಕೆ ಕರೆತರಲಾಗಿದೆ. ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಆಕೆಯನ್ನು ನಮ್ಮ ಸುಪರ್ದಿಗೆ ಪಡೆದು ವಿಚಾರಣೆ ಮುಂದುವರಿಸಲಿದ್ದೇವೆ. ಈ ಸಂಬಂಧ 32ನೇ ಎಸಿಎಂಎಂ ನ್ಯಾಯಾಲಯಕ್ಕೆ ಮನವಿ ಮಾಡಿದ್ದೇವೆ' ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಆರೋಪಿಯು ಮೈಸೂರಿನ ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷೆ ಆರಂಭಕ್ಕೆ 1 ಗಂಟೆ ಮುಂಚೆ ವಾಟ್ಸ್ ಆ್ಯಪ್ ಮೂಲಕ ಗೆಳತಿಯೊಬ್ಬಳಿಗೆ 18 ಪ್ರಶ್ನೆಗಳ ಮಾಹಿತಿಯನ್ನು ರವಾನಿಸಿದ್ದರು' ಎಂದು ಹೇಳಿದರು.

'ಬೆಂಗಳೂರಿನ ರಾಮಕೃಷ್ಣ ಎಂಬುವರ ವಾಟ್ಸ್ ಆ್ಯಪ್ ಸಂಖ್ಯೆಗೂ ಈ ಪ್ರಶ್ನೆಗಳ ಮಾಹಿತಿ ಬಂದಿತ್ತು. ಇದನ್ನು ಗಮನಿಸಿದ್ದ ಅವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ದೂರು ನೀಡಿದ್ದರು' ಎಂದೂ ಮಾಹಿತಿ ನೀಡಿದ್ದಾರೆ.

ಬೈಬಲ್ ಕಡ್ಡಾಯಕ್ಕೆ ಸಂಘಟನೆಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಿಚರ್ಡ್ಸ್ ಟೌನ್‌ನ ಕ್ಲಾರೆನ್ಸ್ ಪ್ರೌಢಶಾಲೆಯಲ್ಲಿ ಬೈಬಲ್ ಅಧ್ಯಯನ ಕಡ್ಡಾಯಗೊಳಿಸಿದ್ದಾರೆ ಎಂದು ಕೆಲವು ಸಂಘಟನೆಗಳು ಆರೋಪಿಸಿವೆ.

ಕ್ರೈಸ್ತರಲ್ಲದ ವಿದ್ಯಾರ್ಥಿಗಳು ಬೈಬಲ್ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು ಮತ್ತು ಈ ಗ್ರಂಥವನ್ನು ತರಬೇಕು ಎಂದು ಒತ್ತಡ ಹೇರಲಾಗುತ್ತಿದೆ ಎಂದೂ ಸಂಘಟನೆಗಳು ದೂರಿವೆ.

'ತರಗತಿಗಳಿಗೆ ಬೈಬಲ್ ಅನ್ನು ಕಡ್ಡಾಯವಾಗಿ ಕಳುಹಿಸಲಾಗುವುದು ಮತ್ತು ಬೈಬಲ್ ಕೊಂಡೊಯ್ಯಲು ಯಾವುದೇ ರೀತಿ ಆಕ್ಷೇಪ ಮಾಡುವುದಿಲ್ಲ' ಎಂದು 2022–23ರ ಶೈಕ್ಷಣಿಕ ವರ್ಷದ ದಾಖಲಾತಿಯ ಅರ್ಜಿಯ ಜತೆಗೆ ಘೋಷಣಾ ಪತ್ರವನ್ನು ಪೋಷಕರು ಬರೆದುಕೊಡಬೇಕು ಎಂದು ಶಾಲೆಯ ಆಡಳಿತ ಮಂಡಳಿ ಒತ್ತಾಯಿಸುತ್ತಿದೆ. ಜತೆಗೆ, ಶಾಲೆಯ ಈ ನಿಯಮಾವಳಿಗಳಿಗೆ ಆಕ್ಷೇಪ ಮಾಡದವರು ಮಾತ್ರ ಪ್ರವೇಶ ಪಡೆಯಲು ಅವಕಾಶವಿದೆ. ಶಾಲೆಯ ವೆಬ್‌ಸೈಟ್‌ನಲ್ಲೂ ಈ ಬಗ್ಗೆ ಉಲ್ಲೇಖಿಸಲಾಗಿದೆ' ಎಂದು ಹಿಂದೂ ಜನಜಾಗೃತಿ ಸಮಿತಿ ವಕ್ತಾರ ಮೋಹನ್ ಗೌಡ ದೂರಿದರು.

'ಕ್ರೈಸ್ತರಲ್ಲದ ವಿದ್ಯಾರ್ಥಿಗಳ ಮೇಲೆ ಬೈಬಲ್ ಗ್ರಂಥವನ್ನು ಬಲವಂತವಾಗಿ ಹೇರಲಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಯ ಕಾಯ್ದೆಯ ಉಲ್ಲಂಘನೆಯೂ ಆಗಿದೆ. ಕ್ರೈಸ್ತ ಶಾಲೆಗಳು ಈ ರೀತಿ ಬಲವಂತವಾಗಿ ಧರ್ಮಪ್ರಚಾರ ಮಾಡುವುದರ ವಿರುದ್ಧ ಶಿಕ್ಷಣ ಇಲಾಖೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಶಾಲೆಗೆ ಭೇಟಿ ನೀಡಿದ ಉತ್ತರ ವಲಯ–3ರ ಕ್ಷೇತ್ರ ಶಿಕ್ಷಣಾಧಿಕಾರಿ, ಆಡಳಿತ ಮಂಡಳಿಯಿಂದ ವರದಿ ಪಡೆದರು. ಮುನ್ನೆಚ್ಚರಿಕೆ ಕ್ರಮವಾಗಿ ಪುಲಿಕೇಶಿ ನಗರ ಠಾಣೆ ಪೊಲೀಸರು ಶಾಲೆಗೆ ಭದ್ರತೆ ಒದಗಿಸಿದ್ದರು.

'ಕಾನೂನು ಪಾಲಿಸಲು ಬದ್ಧ'

'ನಮ್ಮ ಶಾಲೆಯ ಒಂದು ನೀತಿಯ ಬಗ್ಗೆ ಕೆಲವರು ಅಸಮಾಧಾನ ಹೊಂದಿದ್ದಾರೆ ಎನ್ನುವುದು ಗೊತ್ತಾಗಿದೆ. ಶಾಂತಿ ಪ್ರಿಯರಾದ ನಾವು ಕಾನೂನು ಪಾಲಿಸಲು ಬದ್ಧರಾಗಿದ್ದೇವೆ' ಎಂದು ಕ್ಲಾರೆನ್ಸ್ ಪ್ರೌಢಶಾಲೆಯ ಪ್ರಾಂಶುಪಾಲ ಜೆರ್ರಿ ಜಾರ್ಜ್ ಮ್ಯಾಥ್ಯೂ ಹೇಳಿದ್ದಾರೆ.

'ಈ ವಿಷಯದ ಬಗ್ಗೆ ನಮ್ಮ ವಕೀಲರನ್ನು ಸಂಪರ್ಕಿಸಿದ್ದೇವೆ. ಅವರ ಸಲಹೆ ಪಡೆದು ಮುಂದಿನ ಕ್ರಮಗಳನ್ನು ಕೈಗೊಳ್ಳುತ್ತೇವೆ. ನಾವು ಈ ದೇಶದ ಕಾನೂನುಗಳನ್ನು ಉಲ್ಲಂಘಿಸುವುದಿಲ್ಲ' ಎಂದು ತಿಳಿಸಿದ್ದಾರೆ.

'ಬಲವಂತದ ಅಧ್ಯಯನಕ್ಕೆ ಅವಕಾಶ ಇಲ್ಲ'

'ಯಾವುದೇ ಧಾರ್ಮಿಕ ಗ್ರಂಥವನ್ನು ಅಧ್ಯಯನ ಮಾಡುವಂತೆ ಶಿಕ್ಷಣ ಸಂಸ್ಥೆಗಳು ಒತ್ತಾಯಿಸಬಾರದು. ಇದಕ್ಕೆ ಅವಕಾಶವೂ ಇಲ್ಲ. ಈ ಬಗ್ಗೆ ಅಧಿಕೃತವಾಗಿ ಯಾವುದೇ ದೂರು ಸ್ವೀಕರಿಸಿಲ್ಲ. ಸಾಮಾಜಿಕ ಮಾಧ್ಯಮಗಳ ಮೂಲಕ ಮಾಹಿತಿ ದೊರೆತಿದೆ. ಅಧಿಕಾರಿಗಳಿಗೆ ಪರಿಶೀಲಿಸುವಂತೆ ಸೂಚಿಸಲಾಗಿದೆ' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಿಜಾಬ್: ಪರೀಕ್ಷೆ ಬಹಿಷ್ಕರಿಸಿದ ಆರು ವಿದ್ಯಾರ್ಥಿನಿಯರು

ಯಾದಗಿರಿ: ಇಲ್ಲಿನ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನಲ್ಲಿ ಸೋಮವಾರ ಹಿಜಾಬ್ ತೆಗೆದಿರಿಸಲು ನಿರಾಕರಿಸಿದ ಆರು ವಿದ್ಯಾರ್ಥಿನಿಯರು ದ್ವಿತೀಯ ಪಿಯುಸಿ ಪರೀಕ್ಷೆ ಬಿಟ್ಟು ಹೊರ ನಡೆದರು.

'ಕಲಾ ವಿಭಾಗದ ಅರ್ಥಶಾಸ್ತ್ರ ವಿಷಯದ ಪರೀಕ್ಷೆ ಇತ್ತು. ಹಿಜಾಬ್ ಧರಿಸಿಯೇ ಪರೀಕ್ಷೆ ಬರೆಯುವುದಾಗಿ ವಿದ್ಯಾರ್ಥಿನಿಯರು ಪಟ್ಟು ಹಿಡಿದಿದ್ದರು. ಪರೀಕ್ಷಾ ಮೇಲ್ವಿಚಾರಕರು ಇದಕ್ಕೆ ಅವಕಾಶ ನೀಡದ ಕಾರಣ ಪರೀಕ್ಷೆ ಬಿಟ್ಟು ಮನೆಗೆ ತೆರಳಿದ್ದಾರೆ' ಎಂದು ಡಿಡಿಪಿಯು ಚಂದ್ರಕಾಂತ ಹಿಳ್ಳಿ ತಿಳಿಸಿದ್ದಾರೆ.

ಪಿಯು ಪರೀಕ್ಷೆ: 28 ಸಾವಿರ ವಿದ್ಯಾರ್ಥಿಗಳು ಗೈರು

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಗೆ ಗೈರುಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಸೋಮವಾರ ನಡೆದ ಅರ್ಥಶಾಸ್ತ್ರ ವಿಷಯಕ್ಕೆ 28 ಸಾವಿರ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಈ ಬಾರಿ ಒಟ್ಟು 4,12,593 ವಿದ್ಯಾರ್ಥಿಗಳು ಅರ್ಥಶಾಸ್ತ್ರ ಪರೀಕ್ಷೆ ಬರೆಯಲು ನೋಂದಾಯಿಸಿಕೊಂಡಿದ್ದರು. ಗೈರು ಹಾಜರಾದವರಲ್ಲಿ 20,147 ಹೊಸಬರು, 5,956 ಖಾಸಗಿ ಅಭ್ಯರ್ಥಿಗಳು ಮತ್ತು 2019 ಪುನರಾವರ್ತಿತ ಅಭ್ಯರ್ಥಿಗಳು ಸೇರಿದ್ದಾರೆ.

'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕೆಳದಿ ಚನ್ನಮ್ಮ ಹೆಸರಿಡಿ'

ಹರಿಹರ: ಶಿವಮೊಗ್ಗದ ವಿಮಾನ ನಿಲ್ದಾಣಕ್ಕೆ ಕೆಳದಿ ರಾಣಿ ಚನ್ನಮ್ಮ ಅವರ ಹೆಸರು ಘೋಷಣೆ ಮಾಡಬೇಕು ಎಂದು ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಸರ್ಕಾರವನ್ನು ಒತ್ತಾಯಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಮಾನ ನಿಲ್ದಾಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರ ಹೆಸರು ಅಂತಿಮಗೊಳಿಸಿರುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಅವರ ಹೆಸರು ಘೋಷಣೆ ಮಾಡದಿದ್ದರೆ, ಕೆಳದಿ ರಾಣಿ ಚನ್ನಮ್ಮ ಅವರ ಹೆಸರು ಇಡಬೇಕು' ಎಂದು ಒತ್ತಾಯಿಸಿದರು.

ರಾಗಿ ಖರೀದಿಗೆ ಸರ್ವರ್ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ಸೋಮವಾರದಿಂದ ಆರಂಭವಾಗಬೇಕಿದ್ದ ರೈತರ ಹೆಸರು ನೋಂದಣಿ ಪ್ರಕ್ರಿಯೆ ತಾಂತ್ರಿಕ ಸಮಸ್ಯೆಗಳಿಂದಾಗಿ ಸಾಧ್ಯವಾಗಲಿಲ್ಲ. ತಾಂತ್ರಿಕ ಸಮಸ್ಯೆ ಪರಿಹಾರವಾಗುವವರೆಗೂ ಹೆಸರು ನೋಂದಣಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ರೈತರಿಗೆ ಟೋಕನ್ ನೀಡಿ ಕಳಿಸಲಾಗಿದೆ.

ಭಾನುವಾರ ರಾತ್ರಿಯಿಂದಲೇ ಖರೀದಿ ಕೇಂದ್ರದ ಬಳಿ ಸರದಿಯಲ್ಲಿ ಕಾಯುತ್ತಿದ್ದ ನೂರಾರು ರೈತರು ನಿರಾಸೆಯಿಂದ ಮರಳಿದ್ದಾರೆ.

ತಿಪಟೂರು ಮತ್ತು ದೊಡ್ಡಬಳ್ಳಾಪುರ ಖರೀದಿ ಕೇಂದ್ರಗಳಲ್ಲಿ ನೂರಾರು ಸಂಖ್ಯೆಯ ರೈತರು ಮುಗಿಬಿದ್ದರು. ಅವರನ್ನು ಚದುರಿಸಲು ಪೊಲೀಸರು ಪರದಾಡಬೇಕಾಯಿತು. ಸೋಮವಾರ ಮಧ್ಯಾಹ್ನದವರೆಗೂ ಸರ್ವರ್ ಸಮಸ್ಯೆ ಬಗೆಹರಿಯದ ಕಾರಣ ಬೇಸತ್ತ ರೈತರು ಕುಣಿಗಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಅಡ್ಡಲಾಗಿ ಕಲ್ಲುಗಳನ್ನು ಇಟ್ಟು ಪ್ರತಿಭಟನೆ ನಡೆಸಿದರು. ಇದರಿಂದ ಬೆಂಗಳೂರು- ಮಂಗಳೂರು ರಸ್ತೆಯಲ್ಲಿ ಕೆಲಹೊತ್ತು ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಸ್ಥಳಕ್ಕೆ ಬಂದ ಶಾಸಕ ಮತ್ತು ಅಧಿಕಾರಿಗಳು ಸಮಾಧಾನಗೊಳಿಸಿದ ನಂತರ ರೈತರು ಪ್ರತಿಭಟನೆ ಕೈಬಿಟ್ಟರು. ರಾಜ್ಯದಾದ್ಯಂತ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದು, ಅದು ಸರಿಯಾಗಲು ಇನ್ನೂ ಎರಡು ದಿನ ಬೇಕಾಗಬಹುದು. ಅಲ್ಲಿಯವರೆಗೆ ಹೆಸರು ನೋಂದಣಿಯನ್ನು ಸ್ಥಗಿತಗೊಳಿಸಲಾಗಿದೆ. ಸದ್ಯ ರೈತರಿಗೆ ಟೋಕನ್ ಕೊಟ್ಟು ಕಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತಿಪಟೂರಿನಲ್ಲಿ ತಡರಾತ್ರಿಯೇ ದಾಖಲೆ ಸಮೇತ ಬಂದಿದ್ದ ರೈತರು ಸರದಿ ಸಾಲಿನಲ್ಲಿ ಕಲ್ಲು, ಚಪ್ಪಲಿ, ಹಳೆಯ ಗೋಣಿ ಚೀಲ,ಪ್ಲಾಸ್ಟಿಕ್ ಚೀಲ, ಪೊರಕೆ, ರಟ್ಟಿನ ಡಬ್ಬಿ, ಖಾಲಿ ಪ್ಲಾಸ್ಟಿಕ್ ಬಾಟಲ್ ಜೊತೆ ಮದ್ಯದ ಖಾಲಿ ಬಾಟಲಿಗಳನ್ನು ಇಟ್ಟು ಕಾದು ಕುಳಿತಿದ್ದರು.

ರಾಗಿ ಹೆಚ್ಚಾಗಿ ಬೆಳೆಯುವ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೂ ಇದೇ ಸಮಸ್ಯೆ ಕಾಣಿಸಿಕೊಂಡಿದ್ದು, ರೈತರಿಂದ ಅರ್ಜಿ ಪಡೆದು, ಟೋಕನ್ ಕೊಟ್ಟು ಕಳಿಸಲಾಗಿದೆ.



ತಿಪಟೂರು ರಾಗಿ ಖರೀದಿ ಕೇಂದ್ರ ಎದುರು ಸರದಿ ಸಾಲಿನಲ್ಲಿ ಕಲ್ಲು, ಚಪ್ಪಲಿ, ಬ್ಯಾಗ್ ಇಟ್ಟು ಕಾದು ಕುಳಿತಿದ್ದ ರೈತರು.

ಮುಖ್ಯಾಂಶಗಳು

- ಹೆಸರು ನೋಂದಣಿ ತಾತ್ಕಾಲಿಕ ಸ್ಥಗಿತ
- ರೈತರಿಗೆ ಟೋಕನ್ ವಿತರಣೆ
- ರೈತರ ಪ್ರತಿಭಟನೆ, ಹೆದ್ದಾರಿ ತಡೆ
- ತಾಂತ್ರಿಕ ಸಮಸ್ಯೆ ಪರಿಹಾರಕ್ಕೆ ಇನ್ನೂ ಎರಡು ದಿನ

ರಾತ್ರಿಯೇ ನೂರಕ್ಕೂ ಹೆಚ್ಚು ಮಂದಿ ನಮ್ಮಂತೆಯೇ ಬಂದು ತಂಗಿದ್ದರು. ಇದೀಗ ಸಮಸ್ಯೆಯಾಗಿದೆ ಎಂದು ಟೋಕನ್ ನೀಡುತ್ತಿದ್ದಾರೆ. ನಮ್ಮ ಸಮಯ, ಶ್ರಮ ವ್ಯರ್ಥವಾಗಿದೆ

ರಂಗಸ್ವಾಮಿ , ಕಲ್ಕೆರೆ ಗ್ರಾಮದ ರೈತ

ಐದು ವರ್ಷಗಳಲ್ಲಿ ಉದ್ಯೋಗ ಸೃಷ್ಟಿಗೆ ಕ್ರಮ: ಸಚಿವ ಅಶ್ವತ್ಥನಾರಾಯಣ

'ಐಟಿ ಉದ್ಯಮದಲ್ಲಿ 55 ಲಕ್ಷ ಉದ್ಯೋಗ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಐಟಿ ಉದ್ಯಮದಲ್ಲಿ ಈಗ 25 ಲಕ್ಷ ಉದ್ಯೋಗಿಗಳಿದ್ದು, ಮುಂದಿನ ಐದು ವರ್ಷಗಳಲ್ಲಿ ಈ ವಲಯಕ್ಕೆ 55 ಲಕ್ಷ ನುರಿತ ಉದ್ಯೋಗಿಗಳ ಅವಶ್ಯಕತೆ ಇದೆ ಎಂದು ಐಟಿ, ಬಿಟಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಬೆಂಗಳೂರು ತಂತ್ರಜ್ಞಾನ ಶೃಂಗದ ಪೂರ್ವಭಾವಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 55 ಲಕ್ಷ ಉದ್ಯೋಗ ಸೃಷ್ಟಿಗೆ ಪೂರಕವಾದ ಯೋಜನೆಗಳನ್ನು ರೂಪಿಸಲಾಗುವುದು. ಈ ಅವಧಿಯಲ್ಲಿ ಐಟಿ ಕ್ಷೇತ್ರದ ವಹಿವಾಟನ್ನು 300 ಶತಕೋಟಿ ಡಾಲರ್ ಮಟ್ಟಕ್ಕೆ ಬೆಳೆಸಲಾಗುವುದು ಎಂದರು.

ಈ ಬಾರಿ ಬೆಂಗಳೂರು ತಂತ್ರಜ್ಞಾನ ಶೃಂಗ ಭೌತಿಕ ರೂಪದಲ್ಲಿ ನಡೆಯಲಿದ್ದು, ಇದಕ್ಕೆ ಪೂರಕವಾಗಿ ಅಮೆರಿಕ, ಇಂಗ್ಲೆಂಡ್, ಜಪಾನ್ ಮುಂತಾದ ಕಡೆಗಳಲ್ಲಿ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಕಳೆದ ಹಣಕಾಸು ವರ್ಷದಲ್ಲಿ ದೇಶಕ್ಕೆ ಹರಿದು ಬಂದಿರುವ ಒಟ್ಟು ವಿದೇಶಿ ಹೂಡಿಕೆಯಲ್ಲಿ ಶೇ 40 ಪಾಲು ಕರ್ನಾಟಕದಲ್ಲೇ ಹೂಡಿಕೆಯಾಗಿದೆ ಎಂದರು.

ವೆಬ್ 3 ಮತ್ತು ಮೆಟಾವರ್ಸ್‌ಗೆ ಸಂಬಂಧಿಸಿದಂತೆ ಸಮರ್ಪಕ ನೀತಿ ಜಾರಿಗೆ ತರಲಾಗುವುದು. ಅಂತಿಮವಾಗಿ ತಂತ್ರಜ್ಞಾನದ ಲಾಭವು ಗ್ರಾಮೀಣ ಪ್ರದೇಶದ ಜನರನ್ನು ತಲುಪಬೇಕು. 'ಬಿಯಾಂಡ್ ಬೆಂಗಳೂರು' ಉಪಕ್ರಮದಡಿ ಮೈಸೂರಿನಲ್ಲಿ ಸೈಬರ್ ಸೆಕ್ಯುರಿಟಿಗೆ, ಹುಬ್ಬಳ್ಳಿ ಇಎಸ್‌ಡಿಎಂ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ಉದ್ದಿಮೆಗಳಿಗೆ, ಮಂಗಳೂರಿನಲ್ಲಿ ಫಿನ್‌ಟೆಕ್ ವಲಯಕ್ಕೆ ಮತ್ತು ಬೆಳಗಾವಿಯಲ್ಲಿ ಏರೋಸ್ಪೇಸ್ ಕ್ಷೇತ್ರಕ್ಕೆ ಒತ್ತು ನೀಡಲಾಗಿದೆ ಎಂದರು.

ನ.16 ರಿಂದ ತಂತ್ರಜ್ಞಾನ ಶೃಂಗ

ಬೆಂಗಳೂರು ತಂತ್ರಜ್ಞಾನ ಶೃಂಗದ 25 ನೇ ಆವೃತ್ತಿ ನವೆಂಬರ್ 16,17 ಮತ್ತು 18 ರಂದು ನಡೆಯಲಿದೆ. ಈ ಶೃಂಗಕ್ಕೆ 25 ವರ್ಷ ತುಂಬುತ್ತಿರುವ ಕಾರಣ ಅಂತರರಾಷ್ಟ್ರೀಯ ಮಟ್ಟದಲ್ಲಿ ಶೃಂಗ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ತಂತ್ರಜ್ಞಾನ ಶೃಂಗಕ್ಕೆ ಸಂಬಂಧಿಸಿದಂತೆ ಪ್ರಯುಕ್ತ ವಿವಿಧ ವಲಯದ ಕೈಗಾರಿಕೋದ್ಯಮಿಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಹಲವಾರು ಸಲಹೆಗಳನ್ನು ಪಡೆದುಕೊಳ್ಳಲಾಗಿದೆ. ಕೈಗಾರಿಕೆಗಳಿಗೆ ಪೂರಕವಾದ ನೀತಿಗಳು, ಮೂಲಸೌಕರ್ಯ, ತಾಂತ್ರಿಕತೆಗಳ ಬಗ್ಗೆ ಬಹಳಷ್ಟು ಸಲಹೆಗಳನ್ನು ಕೈಗಾರಿಕೋದ್ಯಮಿಗಳು ನೀಡಿದ್ದು, ಅವುಗಳನ್ನು ಜಾರಿಗೊಳಿಸಲಾಗುವುದು ಎಂದರು.

ಐಟಿ–ಬಿಟಿ ಕ್ಷೇತ್ರದಲ್ಲಿ ಬೆಂಗಳೂರು ವಿಶ್ವದಲ್ಲಿಯೇ ನಂ.1 ಸಿಲಿಕಾನ್ ಸಿಟಿ ಮಾಡುವ ಚಿಂತನೆ ಸರ್ಕಾರಕ್ಕಿದೆ. ಬೆಂಗಳೂರಿನ ಹೊರವಲಯಗಳಲ್ಲಿಯೂ ಮೂಲಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಲಾಗಿದೆ ಎಂದರು.

ವಿವಿಧೆಡೆ ಗುಡುಗು ಸಹಿತ ಮಳೆ: ಸಿಡಿಲಿಗೆ ನಾಲ್ವರು ಸಾವು

ಹುಬ್ಬಳ್ಳಿ/ಮಂಗಳೂರು: ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗದಗ, ವಿಜಯಪುರ, ಮಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಸೋಮವಾರ ಸಂಜೆ ಗುಡುಗು, ಸಿಡಿಲು ಸಹಿತ ಮಳೆಯಾಗಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ವಿಜಯಪುರ ಜಿಲ್ಲೆ ಕೊಲ್ಹಾರದಲ್ಲಿ ರೈತ ಜಗದೀಶ ಹಣಮಂತ ಸತ್ತಿಗೇರಿ (35), ಬಳ್ಳಾರಿ ಜಿಲ್ಲೆಯ ಸಂಡೂರಿನ ನಂದಿಹಳ್ಳಿ ಗ್ರಾಮದಲ್ಲಿ ಮಂಜುನಾಥ (21), ಬೆಳಗಾವಿ ಜಿಲ್ಲೆ ಕೌಜಲಗಿ ಸಮೀಪದ ವೆಂಕಟಾಪುರದಲ್ಲಿ ಮಲ್ಲಮ್ಮ ಕಲ್ಮೇಶ ವಟವಟಿ (34), ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನೂರಾಲ್‌ಬೆಟ್ಟುವಿನಲ್ಲಿ ಜಿಗೀಶ್ ಜೈನ್ (41) ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ಗಜೇಂದ್ರಗಡ ಸಮೀಪದ ದಿಂಡೂರ ಗ್ರಾಮದಲ್ಲಿ ಬಿರುಗಾಳಿಗೆ ಹಲವು ಮನೆಗಳ ತಗಡಿನ ಚಾವಣಿಗಳು ಹಾರಿಹೋಗಿದ್ದು, 10ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಬಿರುಗಾಳಿ ರಭಸಕ್ಕೆ ಕೆಲ ಮನೆಗಳ ಗೋಡೆಗಳು ಕುಸಿದಿವೆ. ಡಂಬಳದಲ್ಲಿ ಗುಡುಗು, ಸಿಡಿಲು, ಮಿಂಚು ಸಹಿತ ಮಳೆಯಾಗಿದೆ.

ಬಾಲಕರು ನೀರು ಪಾಲು: ಹೂವಿನಹಡಗಲಿ ತಾಲ್ಲೂಕಿನ ಮದಲಗಟ್ಟಿ ಬಳಿ ತುಂಗಭದ್ರಾ ನದಿಯಲ್ಲಿ ಈಜಲು ಹೋಗಿದ್ದ ಕಾಗನೂರು ಗ್ರಾಮದ ಸಹೋದರರಾದ ಎಲೆಗಾರ ಮಲ್ಲಣ್ಣ (16) ಹಾಗೂ ಜಗದೀಶ (12) ನೀರು ಪಾಲಾಗಿದ್ದಾರೆ.

ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ತಿಪ್ಪಾಯಿಕೊಪ್ಪ ಗ್ರಾಮದ ಬಳಿ ಕುಮದ್ವತಿ ನದಿಯಲ್ಲಿ ಈಜಲು ಹೋಗಿದ್ದ ಮಾಸೂರು ಗ್ರಾಮದ ನಿಖಿಲ್ ಕಿಲಾರಿ (14) ಹಾಗೂ ಸಂಜಯ ಚಳಗೇರಿ (14) ನೀರು ಪಾಲಾಗಿದ್ದಾರೆ. ನಿಖಿಲ್ ಮೃತದೇಹ ಪತ್ತೆಯಾಗಿದ್ದು, ಸಂಜಯನಿಗಾಗಿ ಶೋಧ ಮುಂದುವರಿದಿದೆ.

ನಿವೃತ್ತ ಸಿಎಸ್ ವಿರುದ್ಧ ತನಿಖೆಗೆ ಆದೇಶ

ಒಂದನೇ ಪುಟದಿಂದ

'ಆರೋಪಿತ ಅಧಿಕಾರಿಗಳು 2009–10ರಿಂದ 2014–15ರ ನಡುವೆ ಈ ಬೃಹತ್ ಮೊತ್ತವನ್ನು ದುರ್ವಿನಿಯೋಗ ಮಾಡಿಕೊಂಡಿದ್ದಾರೆ ಎಂದು ಲೆಕ್ಕ ಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆರು ಜನ ಆರೋಪಿಗಳು ಒಪ್ಪಂದಕ್ಕೆ ವಿರುದ್ಧವಾಗಿ ಆರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದಾರೆ. ಅಂತೆಯೇ ಬ್ಯಾಂಕ್ ಮ್ಯಾನೇಜರ್ ಕೂಡಾ ಒಪ್ಪಂದದ ನಿಯಮಗಳಿಗೆ ವಿರುದ್ಧವಾಗಿ 98 ಖಾತೆಗಳನ್ನು ತೆರೆದಿದ್ದಾರೆ. ಈ ಮೂಲಕ ₹ 269 ಕೋಟಿ ಮೊತ್ತವನ್ನು ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ' ಎಂಬ ಸಾಕ್ಷಿಗಳ ಹೇಳಿಕೆ ಅನುಸಾರ ನ್ಯಾಯಾಧೀಶರು ಪ್ರಕರಣದ ತನಿಖೆಗೆ ಆದೇಶಿಸಿದ್ದಾರೆ. ದೂರುದಾರರ ಪರ ವಕೀಲ ಬಿ.ಎನ್.ಶ್ರೀನಿವಾಸ್ ವಾದ ಮಂಡಿಸಿದರು.

ಕೊಳವೆ ಬಾವಿ ಟೆಂಡರ್ ತನಿಖೆ: ಸಚಿವ ಕೋಟ

ಬೆಂಗಳೂರು: ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕೊಳವೆ ಬಾವಿ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ನಾನು ಮಂತ್ರಿ ಆಗುವುದಕ್ಕೂ ಮೊದಲೇ ಕೊಳವೆ ಬಾವಿ ಟೆಂಡರ್ ಪ್ರಕ್ರಿಯೆ ಮುಗಿದು ಹೋಗಿದೆ' ಎಂದು ತಿಳಿಸಿದರು.

'ಇದಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ, ಸಿದ್ದರಾಮಯ್ಯ ಯಾರೇ ಹೇಳಿದರೂ ಸರಿ ತನಿಖೆ ಮಾಡಿ ಉತ್ತರ ಕೊಡಲು ಸಿದ್ಧ. ಚುನಾವಣೆ ಸಂದರ್ಭದಲ್ಲಿ ಸಮುದಾಯಗಳನ್ನು ಎತ್ತಿಕಟ್ಟುವುದು ಅವರಿಗೆ ಶೋಭೆ ತರುವುದಿಲ್ಲ. ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳ ಆರೋಪಗಳಿಗೆ ಸೂಕ್ಷ್ಮವಾಗಿ ಉತ್ತರ ಹೇಳಬೇಕಾಗುತ್ತದೆ. ಇವರ ಆರೋಪಗಳಿಗೆ ಸದನದಲ್ಲೇ ಉತ್ತರ ನೀಡಿದ್ದೇನೆ. ಪ್ರಶ್ನೆ ಕೇಳಿ ಕೇಳಿ ಸಾಕಾಗಿ ಅವರಿಗೆ ಈಗ ಏನೂ ಉಳಿದಿಲ್ಲ' ಎಂದು ಹೇಳಿದರು.

'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಟೀಕೆ ಮಾಡುವುದು ಅನಿವಾರ್ಯ. ಪಿಎಸ್‌ಐ ಅಕ್ರಮದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ವಿರೋಧಪಕ್ಷಗಳೂ ಹೌದು ಹೌದು ಎನ್ನುವ ರೀತಿಯಲ್ಲಿ ತನಿಖೆ ಮಾಡುತ್ತೇವೆ' ಎಂದರು.

‘ಯಾವನ್ರೀ ಅವ ಮುತಾಲಿಕ್’

ಮೈಸೂರು: ‘ಯಾವನ್ರೀ ಅವ ಪ್ರಮೋದ್ ಮುತಾಲಿಕ್? ಪಂಚಾಯಿತಿ ಸದಸ್ಯ ಅಥವಾ ಮುನ್ಸಿಪಾಲಿಟಿ ಸದಸ್ಯನಾಗಿ ಕೆಲಸ ಮಾಡಿದ ಅನುಭವ ಇದೆಯಾ? ಸರ್ಕಾರಕ್ಕೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲು ಆಗಲ್ಲ ಅಂದರೆ ಏನರ್ಥ?’ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ರಾಜ್ಯ ಸರ್ಕಾರದ ಬಗ್ಗೆ ಅಸಮಾಧಾನ ಹೊರ ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಅಂಥವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಬೆಲೆ ತೆರಬೇಕಾಗುತ್ತದೆ’ ಎಂದರು.

ದೇವದಾಸಿ ಪದ್ಧತಿ: ಯುವಕನಿಗೆ ದಾಸಪ್ಪ ಪಟ್ಟ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ದೇವದಾಸಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲು ಕೂಡ್ಲಿಗಿ ತಾಲ್ಲೂಕಿನ ಜೋಳದಕೂಡ್ಲಿಗಿ ಕುಟುಂಬ ವೊಂದು ಮನೆಯ ಮಗನನ್ನು ಆಯ್ಕೆ ಮಾಡಿದೆ.

ಏ.18ರಂದು ಜೋಳದಕೂಡ್ಲಿಗಿ ಗ್ರಾಮದಲ್ಲಿ ನಡೆದ ವಾರ್ಷಿಕ ಜಾತ್ರೆಯಲ್ಲಿ 22 ವರ್ಷ ವಯಸ್ಸಿನ ಶಿವಣ್ಣ ಎಂಬುವರಿಗೆ ‘ಮುದ್ರೆ ಹಾಕುವ’ ಆಚರಣೆ ಯಿಂದ ‘ಪವಿತ್ರ ಆತ್ಮ’ ಅಥವಾ ‘ದಾಸಪ್ಪ’ ಎಂದು ಘೋಷಿಸಿದ್ದಾರೆ. ಈ ಕ್ಷಣಕ್ಕೆ ಶಿವಣ್ಣ ಅವರ ತಾಯಿ ಚೌಡವ್ವ ಸೇರಿದಂತೆ ಅವರ ಹಲವು ಸಂಬಂಧಿಕರು ಕೂಡ ಸಾಕ್ಷಿಯಾಗಿದ್ದಾರೆ. ಇದಕ್ಕಾಗಿ ಅವರು ₹25,000 ವೆಚ್ಚ ಮಾಡಿದ್ದಾರೆ. ಅಜ್ಜಿ ಗತಿಸಿದ 15 ವರ್ಷಗಳ ನಂತರ ಮೊಮ್ಮಗ ಶಿವಣ್ಣನ ಹಳೆಯ ಸಂಪ್ರದಾಯವನ್ನು ಮುಂದುವರೆಸಿದ್ದಾರೆ. ಶಿವಣ್ಣ ಅವರ ಅಜ್ಜಿ ಪುನ ರ್ವಸತಿ ಕಲ್ಪಿತ ದೇವದಾಸಿಯಾಗಿದ್ದರು.


ಶಿವಣ್ಣನಿಗೆ ಮುದ್ರೆ ಹಾಕಿದ ಸಂದರ್ಭ

ದಾಸಪ್ಪ ಆದವರು, ಕೆಲವು ವಿಶೇಷ ಆಚರಣೆಗಳ ಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ವೈವಾಹಿಕ ಜೀವನ, ಕೌಟುಂಬಿಕ ಜೀವನ ಮಾಡಬಹುದಾಗಿದೆ. ಯಾವುದೇ ಕಾರಣಕ್ಕೂ, ಯಾರೂ ಇವರನ್ನು ಲೈಂಗಿಕ ಶೋಷಣೆಗೆ ದೂಡುವಂತಿಲ್ಲ. ಚಲವಾದಿ, ನಾಯಕ, ಮಾದಿಗ, ಉಪ್ಪಾರ ಸಮುದಾಯಗಳಲ್ಲಿ ಈ ಆಚರಣೆಯಿದೆ.

‘ಮಹಿಳೆಯರ ಬದಲು ಪುರುಷರು ದೇವದಾಸಿಯರಾಗಿ ಹರಕೆಗೆ ಒಪ್ಪಿಸಿಕೊಳ್ಳುತ್ತಿರುವುದು ಈಚಿನ ಬೆಳವಣಿಗೆ. ದಾಸಪ್ಪ ಆಗಿ ಬದಲಾದವರು ದೇವರಿಗೆ ಸಮರ್ಪಿತರಾದ ನಂತರ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ’ ಎಂದು ಪೂಜಾರಿ ಮಾಲ್ದೆಪ್ಪ ತಿಳಿಸಿದರು. ಕಳೆದ ವರ್ಷ ಇದೇ ಮಾಲ್ದೆಪ್ಪ ಅವರು ಹತ್ತು ಜನರನ್ನು ದಾಸಪ್ಪರಾಗಿ ಬದಲಿಸುವ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ್ದರು.

‘ಶೋಷಣೆಯ ಈ ವ್ಯವಸ್ಥೆಗೆ ಹೆಣ್ಣು ಮಕ್ಕಳನ್ನು ದೂಡುವುದಿಲ್ಲ. ಇದು ಕಾನೂನಿಗೆ ವಿರುದ್ಧವಾಗಿದೆ. ಈ ವ್ಯವಸ್ಥೆಯಿಂದ ಮುಕ್ತಿ ಪಡೆಯಲು ಮತ್ತು ಸಂಪ್ರದಾಯ ವನ್ನೂ ಜೀವಂತವಾಗಿಡಲು ಅನೇಕ ಆಧ್ಯಾತ್ಮಿಕ ವ್ಯಕ್ತಿಗಳನ್ನು ಕಂಡು, ಪರಿಹಾರ ಕೇಳಿದ್ದೆವು. ಆಂಜನೇಯದ ದಾರಿಯಲ್ಲಿ ಮುನ್ನಡೆದು ದೇವದಾಸಿ ಪದ್ಧತಿ ಕೊನೆಗಾಣಿಸಲು ಹೇಳಿದ್ದರು. ನಾವು ಮಗನನ್ನು ಹರಕೆಗೆ ಸಮರ್ಪಿಸಿದ್ದೇವೆ’ ಎಂದು ಚೌಡವ್ವ ತಿಳಿಸಿದ್ದಾರೆ.

‘ಈ ವಿಷಯ ಗಮನಕ್ಕೆ ಬಂದಿಲ್ಲ’ ಎಂದು ವಿಜಯನಗರ ಡಿ.ಸಿ ಅನಿರುದ್ಧ್ ಶ್ರವಣ್ ಪಿ. ಪ್ರತಿಕ್ರಿಯಿಸಿದ್ದಾರೆ.


ಚಹಾಕ್ಕಾಗಿ ಕಾದ ಸಚಿವ ಗಡ್ಕರಿ!

ಕಲಬುರಗಿ: ಗಾಣಗಾಪುರದ ದತ್ತ ಮಂದಿರಕ್ಕೆ ಭೇಟಿ ನೀಡಿ, ವಿಶೇಷ ವಿಮಾನದ ಮೂಲಕ ದೆಹಲಿಗೆ ತೆರಳಲು ಬಂದಿದ್ದ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಒಂದು ಕಪ್ ಚಹಾಕ್ಕಾಗಿ ಕೆಲ ಹೊತ್ತು ಕಾಯ್ದು ಕುಳಿತುಕೊಳ್ಳಬೇಕಾಯಿತು.

ನಿಲ್ದಾಣದ ವಿಐಪಿ ಲಾಂಜ್‌ನಲ್ಲಿ ಕುಳಿತ ಸಚಿವರು, ಚಹಾ ಕೇಳಿದರು. ಶಿಷ್ಟಾಚಾರದ ಪ್ರಕಾರ ವಿಮಾನ ನಿಲ್ದಾಣದ ಅಧಿಕಾರಿಗಳು ಸಚಿವರಿಗೆ ಚಹಾ, ಉಪಾಹಾರದ ವ್ಯವಸ್ಥೆ ಮಾಡಬೇಕಿತ್ತು. ಆದರೆ, ಚಹಾ ತರಿಸಿರಲಿಲ್ಲ.

ಅಲ್ಲದೆ, ಸಚಿವರು ಸೇವಿಸುವ ಚಹಾ, ಉಪಾಹಾರವನ್ನು ಮುಂಚೆಯೇ ಆಹಾರ ಸುರಕ್ಷತಾ ಅಧಿಕಾರಿಗಳು ತಪಾಸಣೆ ಮಾಡಬೇಕಿತ್ತು. ಅದಕ್ಕಾಗಿ ಬಂದಿದ್ದ ಅಧಿಕಾರಿಗಳಿಗೆ ವಿಮಾನ ನಿಲ್ದಾಣದ ಭದ್ರತೆ ಹೊತ್ತಿದ್ದ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆಯ ಪೊಲೀಸ್ ಇನ್‌ಸ್ಪೆಕ್ಟರ್ ನೂರ್ ಮರಡಿ ಒಳಗೆ ತೆರಳಲು ಅವಕಾಶ ನೀಡಿರಲಿಲ್ಲ. ಸಚಿವರು ಮತ್ತೆ ಮತ್ತೆ ಕೇಳಿದ್ದರಿಂದ ಹೊರಗಿನ ಕ್ಯಾಂಟೀನ್‌ನಿಂದ ಚಹಾ ತರಿಸಿ ಕೊಡಲಾಯಿತು.

‘ಪ್ರತಿಷ್ಠಾ ವರ್ಲ್ಡ್ ರೆಕಾರ್ಡ್’ ಪಟ್ಟಿಗೆ ಅಂಕೇಗೌಡ


ಪುಸ್ತಕಗಳ ಜೊತೆ ಎಂ.ಅಂಕೇಗೌಡ

ಮಂಡ್ಯ: ಪಾಂಡವಪುರ ತಾಲ್ಲೂಕು ಹರಳಹಳ್ಳಿಯ ‘ಪುಸ್ತಕ ಮನೆ’ ಸ್ಥಾಪಕ ಎಂ.ಅಂಕೇಗೌಡ ಅವರ ಹೆಸರು ಪ್ರತಿಷ್ಠಾ ವರ್ಲ್ಡ್ ರೆಕಾರ್ಡ್’ ಪಟ್ಟಿಗೆ ಸೇರ್ಪಡೆಯಾಗಿದೆ.

ಅಂಕೇಗೌಡ ಅವರು ವಿವಿಧ ಭಾಷೆಗಳ 15 ಲಕ್ಷ ಪುಸ್ತಕ ಸಂಗ್ರಹ ಮಾಡಿದ್ದು 2016ರಲ್ಲಿ ‘ಲಿಮ್ಕಾ’ ದಾಖಲೆಗೆ ಸೇರ್ಪಡೆಯಾಗಿದ್ದರು. ಈಗ ಕೇಂದ್ರ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಲ್ಲಿ ನೋಂದಣಿಯಾಗಿರುವ ‘ಪ್ರತಿಷ್ಠಾ ವರ್ಲ್ಡ್ ರೆಕಾರ್ಡ್’ ಪಟ್ಟಿ ಸೇರಿದ್ದಾರೆ. ಸಂಸ್ಥೆಯು ಪ್ರಮಾಣ ಪತ್ರ ಹಾಗೂ ಪಾರಿತೋಷಕವನ್ನು ಕಳುಹಿಸಿದೆ.

50 ವರ್ಷದಲ್ಲಿ ಅತ್ಯಧಿಕ ಪುಸ್ತಕಗಳನ್ನು ಸಂಗ್ರಹಿಸಿರುವುದನ್ನು ಗುರುತಿಸಿ ದಾಖಲೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಪುಸ್ತಕ ಮನೆಯಲ್ಲಿ 15 ಭಾಷೆಗಳ 36 ಸಾವಿರ ಅಂತರ ರಾಷ್ಟ್ರೀಯ ನಿಯತ ಕಾಲಿಕೆ, 15,000 ಕನ್ನಡ ನಿಯತ ಕಾಲಿಕೆ, 10,000 ನಕ್ಷೆಗಳು ಸೇರಿವೆ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರ್ ಟೆಂಡರು ಅಧಿಸೂಚನೆ ಸಂಖ್ಯೆ 02/2022–23 ದಿನಾಂಕ: 20.04.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ ಮೈಸೂರು ಇವರಿಂದ ಒಟ್ಟು 03 ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 8443 ಠೇವಣಿವಂತಿಕೆ ಅಡಿಯಲ್ಲಿ KW-1 ಮತ್ತು KW-2 ರ ನಿಬಂಧನೆ ಮತ್ತು ಷರತ್ತುಗಳನ್ವಯ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರ್‌ನ್ನು (http://eproc.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ದಿನಾಂಕ:29.04.2022 ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಗರಿಷ್ಟ ಮೊತ್ತ ರೂ. 30.69 ಲಕ್ಷ ಮತ್ತು ಇ.ಎಂ.ಡಿ. ಯ ಗರಿಷ್ಟ ಮೊತ್ತ ರೂ. 0.614 ಲಕ್ಷಗಳು ಮತ್ತು ಕನಿಷ್ಟ ಮೊತ್ತ ರೂ. 3.05 ಲಕ್ಷ ಮತ್ತು ಇ.ಎಂ.ಡಿ. ಯ ಕನಿಷ್ಟ ಮೊತ್ತ ರೂ. 0.076 ಲಕ್ಷಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

ICMR – National Institute of Traditional Medicine
Indian Council of Medical Research
Nehru Nagar, National Highway No. 4, BELAGAVI - 590 010. Tel: 0831- 2475477

Applications are invited before closing date i.e. **29.04.2022 upto 05:00 p.m.** for the following posts under projects to be filled purely on Temporary Contract basis:

- **Project Assistant - 02 Posts, DEO - 02 Posts at ICMR-NITM, Belagavi**
- **Technical Assistant - 02 Posts, Project Assistant (Multipurpose) - 01 Post, DEO - 01 Post** at **MRHRU, Sirwar Raichur**

For detailed advertisement please visit the **www.icmrnitm.res.in/about-us/Employment.html** and **www.icmr.nic.in** websites.

Date: 20.04.2022 *Sd/-*
Place: Belagavi **Director**

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಧುಗಿರಿ
DISTRICT INSTITUTE OF EDUCATION AND TRAINING MADHUGIRI
Telephone:08137-282766, E-mail:diet.madhugiri@gmail.com
ಸಂಖ್ಯೆ: ಸಿ1.ಟ್ಯಾಲ್ಟ್.ಟೆಂಡರ್.ಪತ್ರಿಕೆ ಪ್ರಕಟ01/22–23 ದಿನಾಂಕ: 20.04.2022

ಇ ಟೆಂಡರ್ ಪ್ರಕಟಣೆ

ಮಧುಗಿರಿ ಶೈಕ್ಷಣಿಕ ಜಿಲ್ಲೆಯ 05 ಸರ್ಕಾರಿ ಪ್ರೌಢ ಶಾಲೆಗಳಿಗೆ 2 ಕೆ.ವಿ ಯು.ಪಿ.ಎಸ್(ಬ್ಯಾಟರಿ ಸಹಿತ) ಖರೀದಿಸಿ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) http://eproc.karnataka. gov.in ನಲ್ಲಿ ಪಡೆಯುವಂತೆ ತಿಳಿಸಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ಅಪ್ ಲೋಡ್ ಮಾಡುವ ಕೊನೆಯ ದಿನಾಂಕ: **27.04.2022** ರಂದು 16.00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **29.04.2022** ಬೆಳಗ್ಗೆ 12.00ಗಂಟೆಗೆ ಮತ್ತು ಭರ್ತಿ ಮಾಡಿದ ಟೆಂಡರ್‌ನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30.04.2022** ರಂದು ಬೆಳಗ್ಗೆ 11.00ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು ಶಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಮಧುಗಿರಿ ಯನ್ನು ಸಂಪರ್ಕಿಸುವುದು ದೂರವಾಣಿ ಸಂಖ್ಯೆ:7892455101.

ಸಹಿ/– ಪ್ರಾಂಶುಪಾಲರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಧುಗಿರಿ.

DIPR/TUM/56/MCA/2022-23

ಕರ್ನಾಟಕ ಸರ್ಕಾರ
(ರೇಷ್ಮೆ ಇಲಾಖೆ)
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001

ಸಂಖ್ಯೆ: ಸಿಬ್ಬಂದಿ3/ಶಿಸ್ತು/ಗೈಹಾ/06/2017–18 ದಿನಾಂಕ: 30/03/2022

ಪ್ರಕಟಣೆ

ಶ್ರೀ ಜಿ. ದೇವರಾಜು, ಡಿ ದರ್ಜೆ ನೌಕರರು, ರೇಷ್ಮೆ ಇಲಾಖೆ, ತಾಂತ್ರಿಕ ಸೇವಾ ಕೇಂದ್ರ, ಯಲಿಯೂರು, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆದ ನಿಮಗೆ ದಿನಾಂಕ: 22/05/2010 ರಿಂದ ಸರ್ಕಾರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾದ ಸಂಬಂಧ ಹಲವಾರು ಬಾರಿ ಪತ್ರ ವ್ಯವಹಾರವನ್ನು ಸೇವಾವಹಿಯಲ್ಲಿ ನಮೂದಿಸಿರುವ ವಿಳಾಸಕ್ಕೆ ರವಾನಿಸಿದ್ದರೂ ಸಹ ಪತ್ರಗಳು ಸ್ವೀಕೃತಿಯಾಗದೇ ವಾಪಸ್ ಬಂದಿರುತ್ತದೆ. ಈ ಬಗ್ಗೆ ದಿನಾಂಕ: 29/09/2020 ರಂದು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ, ಕೂಡಲೇ ಕಛೇರಿಗೆ ಹಾಜರಾಗಲು ಸೂಚಿಸಿ ತಪ್ಪಿದ್ದಲ್ಲಿ 1957ರ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ಸಿ.ಸಿ.ಎ) ನಿಯಮದಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ ಸರ್ಕಾರಿ ಕೆಲಸದಿಂದ ತೆಗೆದು ಹಾಕಲು ಕ್ರಮ ವಹಿಸಲಾಗುವುದೆಂದು ಅಂತಿಮವಾಗಿ ತಿಳಿಸಲಾಗಿತ್ತು.

ಆದಾಗ್ಯೂ ನೀವು ಯಾವುದೇ ಲಿಖಿತ ಹೇಳಿಕೆ ಸಲ್ಲಿಸದೇ ದೀರ್ಘ ಕಾಲದವರೆಗೆ ಸರ್ಕಾರಿ ಕೆಲಸಕ್ಕೆ ಗೈರು ಹಾಜರಾಗಿದ್ದರಿಂದ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ದಿನಾಂಕ: 04/02/2021 ರಂದು ವಿಚಾರಣಾಧಿಕಾರಿಗಳು ನಿಮಗೆ ವಿಚಾರಣೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲಾಗಿ, ಸ್ವೀಕೃತಿಗೊಳ್ಳದೆ ವಾಪಸ್ಸು ಬಂದಿದ್ದು ವಿಚಾರಣಾಧಿಕಾರಿಗಳ ಆರೋಪಗಳು ಸಾಬೀತಾಗಿವೆ ಎಂದು ನೀಡಿದ ವರದಿಯಂತೆ ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 14 ರಡಿಯಲ್ಲಿನ ಅವಕಾಶದನ್ವಯ ಪರಿಶೀಲಿಸಿ ನೀವು ಸರ್ಕಾರಿ ಕೆಲಸಕ್ಕೆ ನಿರಾಸಕ್ತಿ ತೋರಿಸಿ ದುರ್ನಡತೆ ಎಸಗಿರುವುದನ್ನು ತೀವ್ರತರವಾಗಿ ಪರಿಗಣಿಸಿ ಕಠಿಣ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ನಿಮ್ಮನ್ನು ದಿನಾಂಕ: 26/02/2021 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕೆ.ಸಿ.ಎಸ್ (ಸಿ.ಸಿ.ಎ) ನಿಯಮ 8(vii) ರನ್ವಯ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಇವರಿಗೆ
ಶ್ರೀ ಜಿ. ದೇವರಾಜು, ಕೇರಾಫ್ ಕೌಸಲ್ಯಬಾಯಿ, 1ನೇ ಕ್ರಾಸ್, ಕೀರ್ತಿನಗರ, ಶಿವಮೊಗ್ಗ.

ಸಹಿ/–
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/271/ಆಕಾರ್/22–23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ–8, ಝಳಕಿ – 586204. ತಾ:ಇಂಡಿ, ಜಿ: ವಿಜಯಪುರ. ದೂರವಾಣಿ ಸಂ: 08422–282227
ಇ–ಮೇಲ್:eezalaki1@gmail.com

ಸಂ:ಕೃಭಾಜನಿನಿ/ಇಂಶಾಕಾವಿ–8/ಝಳಕಿ/ಡಿಬಿ/ಟೆಂಡರ್/ಎಸ್.ಸಿ.ಪಿ–ಟಿ.ಎಸ್.ಪಿ/2022–23/111 ದಿನಾಂಕ:21.04.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ: 8 ಝಳಕಿ ತಾ: ಇಂಡಿ ಇವರು ಶೇಕಡಾವಾರು ಟೆಂಡರನ್ನು ಆಹ್ವಾನಿಸಿರುತ್ತಾರೆ. ಕೆಟಿಪಿಪಿ ಕಾಯ್ದೆ ನಿಯಮ–28 ರನ್ವಯ ಒಂದು ಲಕೋಟೆ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಭದ್ರತಾ ಠೇವಣಿ ಹೊರತು ಪಡಿಸಿ ಒಂದು ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಕೆ.ಪಿ.ಡಬ್ಲೂ.ಡಿ.ದಡಿ ನೊಂದಣಿಯಾದ ಕ್ಲಾಸ–3 ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಇಂಡಿ ಮತ್ತು ವಿಜಯಪೂರ ಲೋಕಸಭಾ ಕ್ಷೇತ್ರದಡಿ ಬರುವ **2017–18** ರಿಂದ **2019–20**ನೇ ಸಾಲಿನ ಒಟ್ಟು **10** ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಮೊತ್ತದ ವಿವರ: ಗರಿಷ್ಠ ಮೊತ್ತ : ರೂ: 13.00 ಲಕ್ಷ. – ಕನಿಷ್ಠ ಮೊತ್ತ ರೂ. 2,45 ಲಕ್ಷ.
ಗರಿಷ್ಠ ಇ.ಎಂ.ಡಿ ರೂ: 33,000/– ಕನಿಷ್ಠ ಇ.ಎಂ.ಡಿ ರೂ: 6,000/–.

ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಕೆಳಕಂಡ ಕಛೇರಿಯಿಂದ ಅಥವಾ ವೆಬಸೈಟನಲ್ಲಿ http;//eproc.karnataka.gov.in ಪಡೆದುಕೊಳ್ಳಬಹುದು.

ಟೆಂಡರಿನ ವಿವಿಧ ಹಂತಗಳನ್ನು 1) ಟೆಂಡರ ಡಾಕ್ಯುಮೆಂಟನ್ನು **ಇ–ಪೋರ್ಟಲನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡನ್ನು ಸಲ್ಲಿಸುವ** ಕಾಲಾವಧಿ ದಿ: **09.05.2022** ರಿಂದ **16.05.2022** ರ ಸಾಯಂಕಾಲ 4.30 ಗಂಟೆಯವರೆಗೆ.
2) ಆರ್ಥಿಕ ಬಿಡ್‌ನ್ನು ತೆರೆಯುವ ದಿ: **18.05.2022** ಬೆಳಗ್ಗೆ 11.00 ಗಂಟೆ.
3) ಸಾಮಾನ್ಯ ವರ್ಗದವರು ರಜಿಸ್ಟ್ರೇಶನ ಪ್ರಮಾಣ ಪತ್ರ, ಇ.ಪಿ.ಎಫ್, ಸ್ಕ್ಯಾನ್ಡ ಸಹಿ, ಜಿ.ಎಸ್.ಟಿ ಪ್ರಮಾಣ ಪತ್ರ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ,
4) ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಯಾವುದೇ ಕಾಮಗಾರಿ/ಗಳ ಒಪ್ಪಿಗೆ/ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ:8,ಝಳಕಿ

ವಾಸಾಸಂಇ/ವಿಜಯಪುರ/62/ಎಂಸಿಎ/2021–22

THE CAMPCO LTD
Varanasi Tower,P.B No.223,Mission street, Mangaluru-575001, D.K., Karnataka
PBX:0824-2888200 Email:campco@bsnl.in
Web: www.campco.org, www.campcochocolates.com

INVITATION FOR SUPPLY OF ELECTRICAL POWER UNITS

THE CAMPCO Ltd,Mangaluru invites bids/tenders for selection of seller for the supply of 18 lakh units electrical power per year for consumption at Campco Chocolate Factory, Puttur-574202 Karnataka in different time slots on long term basis.

For Tender/Bid details visit our website www.campco.org, https://campcochocolates.com/

Sd/-
The Managing Director

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬೊಮ್ಮನಹಳ್ಳಿ ಯೋಜನಾ ವಿಭಾಗ, ಬೇಗೂರು ಮುಖ್ಯರಸ್ತೆ, ಬೆಂಗಳೂರು–560 068.

ಸಂ: ಕಾಅ/ಬೋ.ಯೋ.ವಿ/ಟೆಂಡರ್–10/2022–23 ದಿನಾಂಕ: 21.04.2022

ತಿದ್ದುಪಡಿ–01

ಟೆಂಡರ್ ಪ್ರಕಟಣೆ ಸಂಖ್ಯೆ: **EE(BD)/TENDER/G.L./10/21-22 ದಿನಾಂಕ: 21.03.2022**ರ ಪ್ರಕಟಣೆಯ ಇ.ಎಂ.ಡಿ ಮೊತ್ತದಲ್ಲಿ ಕೆಲವೊಂದು ಬದಲಾವಣೆಗಳಿದ್ದು, ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ದಿನಾಂಕ 21.03.2022 ರಂದು ಪ್ರಕಟಿಸಿದ ಇಎಂಡಿ ಮೊತ್ತ (ರೂಗಳಲ್ಲಿ)	ಮರುನಿಗದಿಪಡಿಸಿದ ಇಎಂಡಿ ಮೊತ್ತ (ರೂಗಳಲ್ಲಿ)
1	ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಿ–ಸ್ಲ್ಯಾಬ್‌ಗಳನ್ನು ಒದಗಿಸುವುದು.	16,00,000/–	12,00,000/– (ರೂ. 1,00,000/– ಆನ್‌ಲೈನ್ ಮೂಲಕ ಹಾಗೂ ಉಳಿದ ರೂ. 11,00,000/– ಗಳು ಬ್ಯಾಂಕ್ ಗ್ಯಾರಂಟಿ ಮೂಲಕ).
2	ವಾರ್ಡ್ ಸಂಖ್ಯೆ 187, ಬೊಮ್ಮನಹಳ್ಳಿ 1ನೇ ಹಂತದಲ್ಲಿ ಪಂಡಿತ ದೀನ ದಯಾಳ್ ಉಪಾಧ್ಯಾಯ ಮಕ್ಕಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿ.	20,00,000/–	10,00,000/– (ರೂ. 1,00,000/– ಆನ್‌ಲೈನ್ ಮೂಲಕ ಹಾಗೂ ಉಳಿದ ರೂ. 9,00,000/– ಗಳು ಬ್ಯಾಂಕ್ ಗ್ಯಾರಂಟಿ ಮೂಲಕ).
3	ಬೊಮ್ಮನಹಳ್ಳಿ ವಲಯದಲ್ಲಿ ಬಿಬಿಎಂಪಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿ.	8,00,000/–	6,00,000/– (ರೂ. 1,00,000/– ಆನ್‌ಲೈನ್ ಮೂಲಕ ಹಾಗೂ ಉಳಿದ ರೂ. 5,00,000/– ಗಳು ಬ್ಯಾಂಕ್ ಗ್ಯಾರಂಟಿ ಮೂಲಕ).
4	ವಾರ್ಡ್ ಸಂಖ್ಯೆ 184, ಉತ್ತರಹಳ್ಳಿಯ ಗುಬ್ಬಲಾಳ ಮುಖ್ಯರಸ್ತೆಯಲ್ಲಿ ಜಯನಗರ ಹೌಸಿಂಗ್ ಸೊಸೈಟಿ ಉದ್ಯಾನವನದ ಸುತ್ತ ಚೈನ್‌ಲಿಂಕ್ ಬೇಲಿಯನ್ನು ನಿರ್ಮಿಸುವುದು ಮತ್ತು ಇತರೆ ಸಿವಿಲ್ ಅಭಿವೃದ್ಧಿ ಕಾಮಗಾರಿಗಳು.	3,00,000/–	2,25,000/– (ರೂ. 1,00,000/– ಆನ್‌ಲೈನ್ ಮೂಲಕ ಹಾಗೂ ಉಳಿದ ರೂ. 1,25,000/– ಗಳು ಬ್ಯಾಂಕ್ ಗ್ಯಾರಂಟಿ ಮೂಲಕ).

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04.05.2022 ರ ಸಂಜೆ 4.00 ಗಂಟೆಯವರೆಗೆ.**
ಉಳಿದ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬೊಮ್ಮನಹಳ್ಳಿ ಯೋಜನಾ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ ಸಂ.4, ಚಿಕ್ಕಹೊನ್ನಕುಣಿ–584111. ತಾ:ದೇವದುರ್ಗ, ಜಿ:ರಾಯಚೂರು.

No. KBJNL/NRBC/D-4/PB-1/2021-22/27 DATE:18-04-2022

ತಿದ್ದುಪಡಿ–1

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) (ದ್ವಿ –ಲಕೋಟೆ ಪದ್ಧತಿಯಲ್ಲಿ)

ವಿಷಯ:–ಟೆಂಡರ್ ಪ್ರಕಟಣೆಗಳನ್ನು ಮುಂದೂಡುವ ಬಗ್ಗೆ.
ಉಲ್ಲೇಖ:– ಈ ಕಛೇರಿಟೆಂಡರ್ ಪ್ರಕಟಣೆ ಸಂಖ್ಯೆ:1091, ದಿನಾಂಕ: 28/03/2022.

ಉಲ್ಲೇಖಿತ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಇಂಡೆಂಟ್ ಸಂಖ್ಯೆ :21945 ಕಾಮಗಾರಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಕೆಲವೊಂದು ತಾಂತ್ರಿಕ ಕಾರಣಗಳಿಂದ ಟೆಂಡರ್ ದಿನಾಂಕಗಳನ್ನು ಮುಂದೂಡಲಾಗಿದೆ.

ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ www.eproc.karnataka.gov.in ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಾರ್ಯಾಲಯದಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ ಸಂ.4, ಚಿಕ್ಕಹೊನ್ನಕುಣಿ–584111. ತಾ:ದೇವದುರ್ಗ, ಜಿ:ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/45/ಎಂ.ಸಿ.&ಎ/2022–23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–03/1131/2022–23 ದಿನಾಂಕ:25.04.2022

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿನಲ್ಲಿ ನೋಂದಾಯಿತ ದರ್ಜೆ–2 ಮತ್ತು ಮೇಲ್ಪಟ್ಟ (ಎಲೆಕ್ಟ್ರಿಕಲ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಡಿ ಟೆಂಡರನ್ನು ಆಹ್ವಾನಿಸಿದೆ. **ಕಾಮಗಾರಿಯ ಹೆಸರು : ಬೆಳಗಾವಿ ಜಿಲ್ಲೆ, ಕಣಗಾಲ ಕೈಗಾರಿಕಾ ಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಿದ ರಸ್ತೆಗಳಿಗೆ ಎಲ್‌ಇಡಿ ಬೀದಿದೀಪ ಸೌಲಭ್ಯಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ.**

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **25.05.2022ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/270/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭೆ ಕಾರ್ಯಾಲಯ ಸಿಂಧನೂರು – 584128
ಜಿಲ್ಲೆ: ರಾಯಚೂರು, ರಾಜ್ಯ: ಕರ್ನಾಟಕ,
Website:http//:www.sindhanurcity.mrc.gov.in, ಕಛೇರಿ ದೂ.ಸಂಖ್ಯೆ: 08535–222233

No. CMC/SND/SWM/SBM/MPT/CR-01/2021-22 ದಿನಾಂಕ: 20.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ನಗರಸಭೆ ಸಿಂಧನೂರಿಂದ ಈ ಕೆಳಕಂಡ ಕೆಲಸಗಳಿಗಾಗಿ ಅರ್ಹ ವ್ಯಕ್ತಿ/ನೋಂದಾಯಿತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000 ರನ್ವಯ ಮತ್ತು ಇತರೆ ತಿದ್ದುಪಡಿ ನಿಯಮಗಳನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಸಿಂಧನೂರು ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲವನ್ನು ಪೂರೈಸಲು ಟೆಂಡರ್‌ನ್ನು ಆಹ್ವಾನಿಸಿರುತ್ತದೆ. ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ: https://www.eproc.karnataka.gov.in ನಲ್ಲಿ ಪಡೆಯಬಹುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 85.24 ಲಕ್ಷಗಳು ಇ.ಎಂ.ಡಿ ಮೊತ್ತ ರೂ.1,71,000/–** ಹೆಚ್ಚಿನ ಮಾಹಿತಿಗಾಗಿ ವಿಷಯ ನಿರ್ವಾಹಕರನ್ನು ಕಛೇರಿ ಸಮಯದಲ್ಲಿ ವಿಚಾರಿಸಿ ತಿಳಿಯಲು ಸೂಚಿಸಿದೆ. ವಿ.ಸೂ: ಸದರಿ ಹೊರಗುತ್ತಿಗೆ ಕಾರ್ಯದಲ್ಲಿ ನೌಕರರಿಗೆ ಶಾಸನಬದ್ಧ ಸವಲತ್ತುಗಳನ್ನು ನೀಡಬೇಕಿರುವುದರಿಂದ ಬಿಡ್‌ದಾರರು ಯಾವುದೇ ಕಾರಣಕ್ಕೂ ನಿಗದಿಪಡಿಸಿದ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಬಾರದು. ಹಾಗೂ ಕೇವಲ ಸೇವಾ ವೆಚ್ಚವನ್ನು ಮಾತ್ರ ತಮ್ಮ ಆರ್ಥಿಕ ಬಿಡ್ ನಲ್ಲಿ ಶೇಕಡ ರೂಪದಲ್ಲಿ ನಮೂದಿಸುವ್ವದು. ಒಂದು ವೇಳೆ ಕಡಿಮೆ ದರ ನಮೂದಿಸಿದಲ್ಲಿ ಅಂತಹವರ ಬಿಡ್‌ನ್ನು ತಿರಸ್ಕರಿಸಲಾಗುವುದು. ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲೆಗಳನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪ್‌ಲೋಡ್ ಮಾಡತಕ್ಕದ್ದು. ಸದರಿ ಟೆಂಡರ್ ಗೆ ಸಂಬಂಧಿಸಿದಂತೆ ಏನಾದರೂ ತಿದ್ದುಪಡಿ / ಮುಂದೂಡಿಕೆಗಳಿದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ತಿಳಿಸಲಾಗುವುದು. ದಿನಪತ್ರಿಕೆಗಳಲ್ಲಿ ತಿಳಿಸಲಾಗುವುದಿಲ್ಲ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಪಡೆಯಬಹುದಾದ ದಿನಾಂಕ ಮತ್ತು ಸಮಯ: **21/04/2022 ಬೆಳಗ್ಗೆ 11.00 ಗಂಟೆಯಿಂದ,** 2) ವಿವರಣೆಗಳನ್ನು ಕೇಳಲು ಕೊನೆಯ ದಿನಾಂಕ ಮತ್ತು ಸಮಯ: **27/04/2022 ಬೆಳಗ್ಗೆ 11.00 ಗಂಟೆವರೆಗೆ,** 3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **02/05/2022 ಸಾಯಂಕಾಲ 5.30 ಗಂಟೆಯೊಳಗೆ,** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **04/05/2022 ಬೆಳಗ್ಗೆ 11.00 ಗಂಟೆಗೆ,** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : **07/05/2022 ಬೆಳಗ್ಗೆ 11.00** ಗಂಟೆಗೆ ಅಥವಾ ನಿಗದಿ ಪಡಿಸಿದ ದಿನಾಂಕದಂದು.

ಸಹಿ/– ಪೌರಾಯುಕ್ತರು, ನಗರಸಭೆ, ಸಿಂಧನೂರು

ವಾ.ಸಾ.ಸಂ.ಇ/ರಾಯಚೂರು/44/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಆಯುಕ್ತರವರ ಕಚೇರಿ, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ಗಡಿಗಿ ಚನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101 ದೂರವಾಣಿ : 08392–273479 / 278168 ಫ್ಯಾಕ್ಸ್: 08392–273477
ಇ–ಮೇಲ್ : bellarycommissioner@yahoo.co.in ವೆಬ್‌ಸೈಟ್: www.bellarycity.mrc.gov.in

ಸಂಖ್ಯೆ: ಮನಪಾಬ/ತಾಂ/ವಿ/ಡಿ.ಎಂ.ಎಫ್/ಮು.ಆ.ವಿ/01/2021–22 ದಿನಾಂಕ: 22–04–2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಬಳ್ಳಾರಿ ಮಹಾನಗರ ಪಾಲಿಕೆ ವತಿಯಿಂದ 3ನೇ ಕ್ರಿಯಾ ಯೋಜನೆಯಲ್ಲಿನ ಅನುಮೋದನೆಗೊಂಡ ಕ್ರಿಯಾಯೋಜನೆಯಲ್ಲಿರುವ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಪ್ರದೇಶಗಳ ಅಭಿವೃದ್ಧಿ (ಜಿಲ್ಲಾ ಖನಿಜ ಫೌಂಡೇಶನ್ ನಿಧಿ) (District Mineral Foundation) ಅನುದಾನದಡಿಯಲ್ಲಿ ಕಾಮಗಾರಿಗಳ ಕೈಗೊಳ್ಳಲಾಗುತ್ತಿದ್ದು, ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಪ್ರಚಲಿತ ಅವಧಿಗೆ ನೋಂದಾಯಿಸಲ್ಪಟ್ಟ ಅರ್ಹ ಮತ್ತು ಆಸಕ್ತ ಬಿಡ್‌ದಾರರು ವಿದ್ಯುತ್ ಸೂಕ್ತ ದರ್ಜೆಯ ಅರ್ಹ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಆಮಗಾರಿಗಳಿಗೆ ಕೆ.ಡಬ್ಲ್ಯು–4 ರಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

DMA/2022-23/EL/WORK_INDENT 131165

ಕ್ರ ಸಂ	ಕಾಮಗಾರಿ ಹೆಸರು	ರೂ. ಲಕ್ಷ ಗಳ್ಳಲ್ಲಿ	ಮುಂಗಡ ಠೇವಣಿ ರೂ. ಲಕ್ಷಗಳಲ್ಲಿ	ಕೆಲಸದ ಅವಧಿ
1	Electrification at Mundaragi Layout Ballari (Sourth Zone)	466.00	6.999	6 ತಿಂಗಳು

1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 28–04–2022 ರಿಂದ 30–05–2022 ರ ಸಂಜೆ 4:00 ಗಂಟೆ ಒಳಗಾಗಿ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 30–05–2022 ರಂದು ಸಂಜೆ 5:00 ಗಂಟೆಯೊಳಗಾಗಿ ಸಲ್ಲಿಸಬಹುದು. 2) ಟೆಂಡರ್ ಪೂರ್ವಭಾವಿ ಸಭೆಯನ್ನು **ದಿನಾಂಕ: 07–05–2022 ರಂದು 03:30 ಗಂಟೆ** ಆಯುಕ್ತರ ಕಚೇರಿಯಲ್ಲಿ ಹಾಗೂ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 01–06–2022 ಬೆಳಿಗ್ಗೆ 11:30 ಗಂಟೆಗೆ.** 3) ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 10–06–2022 ರ ಬೆಳಿಗ್ಗೆ 11:30 ಗಂಟೆಗೆ.** 4) ಇ–ಪ್ರೊಕ್ಯೂರ್‌ಮೆಂಟ್ ಪ್ರೊಸೆಸಿಂಗ್ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೊಂದಿರುವ ಕರ್ನಾಟಕ ಸರ್ಕಾರದ ಸೆಂಟ್ರಲ್ ಪೂಲಿಂಗ್ ಅಕೌಂಟ್‌ನಲ್ಲಿ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ಮಾದರಿಯಲ್ಲಿ ಪೋರ್ಟಲ್‌ನಲ್ಲಿರುವಂತೆ ಸಂದಾಯ ಮಾಡುವುದು. 5) ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಮತ್ತು ಹೆಚ್ಚಿನ ವಿವರಗಳಿಗೆ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ **ಫೋನ. ನಂ. 08392–273479** ಗೆ ಪಡೆಯಬಹುದು ಹಳಗೂ ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಆಯುಕ್ತರು,
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನ ಅಬುಲ್ ಕಲಾಂ ಅಜಾದ್ ಭವನ, ನಂ.16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ವೆಬ್‌ಸೈಟ್: https://dom.karnataka.gov.in
ಇ–ಮೇಲ್: directorgokdom@gmail.com ಸಹಾಯವಾಣಿ: 8277799990 (24/7)

ಸಂಖ್ಯೆ: ಡಿಓಎಂ/ಎಸ್‌ಎಂಎಸ್/ಸಿಆರ್–50/2021–22 ದಿನಾಂಕ: 26.04.2022

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪಿಯು ಕಾಲೇಜುಗಳಲ್ಲಿ ಶಾಲಾ ನಿರ್ವಹಣ ವ್ಯವಸ್ಥೆ (ಎಸ್‌ಎಂಎಸ್) ಸಾಫ್ಟ್‌ವೇರ್‌ನ ವಿನ್ಯಾಸ, ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆ

ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು 134 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪಿಯು ಕಾಲೇಜುಗಳಲ್ಲಿ ಶಾಲಾ ನಿರ್ವಹಣ ವ್ಯವಸ್ಥೆ (ಎಸ್‌ಎಂಎಸ್) ಸಾಫ್ಟ್‌ವೇರ್‌ನ್ನು ಸೃಜಲಿಸಲು/ಅಭಿವೃದ್ಧಿಪಡಿಸಲು/ಒದಗಿಸಲು ಆಸಕ್ತಿ ಹೊಂದಿರುವ ಬಿಡ್ಡುದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಅಲ್ಪಾವಧಿ ಮರು–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

1	ಟೆಂಡರ್/ಇ–ಪ್ರೊಕ್ಯೂರ್‌ಮೆಂಟ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ	ಡಿಓಎಂ/ಎಸ್‌ಎಂಎಸ್/ಸಿಆರ್–50/2021–22, ದಿ: 25.04.2022
2	ಟೆಂಡರ್‌ಗಿಟ್ಟ ಮೊತ್ತ	ರೂ.1,60,00,000/-
3	ಟೆಂಡರ್ ಪ್ರಕಟಣೆ ದಿನಾಂಕ	26.04.2022, ಬೆಳಿಗ್ಗೆ 10.00 ಗಂಟೆ
4	ಬಿಡ್ ಪೂರ್ವ ಸಭೆ ದಿನಾಂಕ ಮತ್ತು ಸಮಯ	07.05.2022, ಬೆಳಿಗ್ಗೆ 11.00 ಗಂಟೆ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.05.2022, ಸಂಜೆ 5.00 ಗಂಟೆ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	12.05.2022, ಬೆಳಿಗ್ಗೆ 11.00 ಗಂಟೆ
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ತಾಂತ್ರಿಕ ಮೌಲ್ಯಮಾಪನ ಪೂರ್ಣಗೊಂಡ ನಂತರ
8	ಇಎಂಡಿ ಮೊತ್ತ	ರೂ.3,20,000/-
9	ಬಿಡ್ ಪೂರ್ವ ಸಭೆ, ಟೆಂಡರ್ ತೆರೆಯುವ ಸ್ಥಳ & ಸಂಪರ್ಕಿಸಬೇಕಾದ ವಿಳಾಸ	ಮೌಲಾನ ಅಬುಲ್ ಕಲಾಂ ಅಜಾದ್ ಭವನ, ನಂ.16ಸಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052.
10	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು	8277799990, 080–22535916, 080–22535920

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿತ ಆಸಕ್ತ ಬಿಡ್‌ದಾರರು ವೆಬ್‌ಸೈಟ್: **https://eproc.karnataka.gov.in**ಗೆ ಭೇಟಿ ನೀಡಿ ಬಿಡ್ ದಸ್ತಾವೇಜುಗಳನ್ನು ಸಲ್ಲಿಸಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

ರಜೆಯೂ ಕೌಶಲವೂ

ಪ್ರಜ್ಞಾ ಮತ್ತಿಹಳ್ಳಿ




> ಅರ್ಧ ಆಯುಷ್ಯವನ್ನು ನಿದ್ದೆಯಲ್ಲಿಯೇ ಕಳೆಯುವ ಮನುಷ್ಯ ಎಚ್ಚರವಿದ್ದಾಗಲಾದರೂ ಪ್ರತಿ ನಿಮಿಷವೂ ಉಪಯುಕ್ತವಾಗುವಂತೆ ಕಳೆಯುವ ನಿಟ್ಟಿನಲ್ಲಿ ಉದ್ಯುಕ್ತನಾಗಬೇಕು

ರಜೆ ಎಂಬ ಶಬ್ದವನ್ನು ಕೇಳಿದ ತಕ್ಷಣ ಮನಸ್ಸಿಗೆ ಒಂದು ಬಗೆಯ ರೋಮಾಂಚನಭರಿತವಾದ ಆನಂದ ಉಂಟಾಗುತ್ತದೆ.

ಅರೆ! ಇದೇಕೆ ಹೀಗೆ - ಎಂದು ಯೋಚಿಸಿದಾಗ ಹೊಳೆಯುವ ಅಂಶ ಏನೆಂದರೆ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಮನುಷ್ಯ ಒಂದು ಚೌಕಟ್ಟನ್ನು ಹಾಕಿಕೊಂಡಿರುತ್ತಾನೆ. ಬೆಳಿಗ್ಗೆ ಇಂತಿಷ್ಟು ಗಂಟೆಗೆ ಏಳಲೇಬೇಕು, ತಕ್ಷಣವೇ ಪ್ರಾತರ್ವಿಧಿಗಳನ್ನು ಪೂರೈಸಿ ಸಿದ್ಧನಾಗಬೇಕು, ತಿಂಡಿ-ಊಟ, ಅವುಗಳಿಗಾಗಿ ಡಬ್ಬಿಗಳಲ್ಲಿ ತುಂಬಿಕೊಳ್ಳುವುದು, ಇತ್ಯಾದಿ ಕೆಲಸಗಳು ಗಡಿಬಿಡಿಯಿಂದ ನಡೆಯಬೇಕು. ಮತ್ತೆ ಸಂಜೆಯವರೆಗೆ ಶಾಲೆ-ಕಾಲೇಜು, ಆಫೀಸು-ಬ್ಯಾಂಕು ಇತ್ಯಾದಿ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು. ಆ ವೇಳೆಯಲ್ಲಿ ಅಲ್ಲಿನ ಶಿಸ್ತು-ನಿಯಮಗಳಿಗೆ ಒಳಪಟ್ಟು ಕರ್ತವ್ಯಗಳನ್ನು ಪಾಲಿಸಬೇಕು. ವಿದ್ಯಾರ್ಥಿಗಳು ತಮ್ಮ ಶಾಲೆ-ಕಾಲೇಜುಗಳಲ್ಲಿ ಪಾಠ-ಪ್ರವಚನಗಳಿಗೆ ಹಾಜರಾಗಬೇಕು. ಸಂಜೆ ಮತ್ತೆ ಹೋಮ್‌ವರ್ಕ್ ಇತ್ಯಾದಿ ಅಭ್ಯಾಸಗಳಲ್ಲಿ ಮುಳುಗಿಕೊಳ್ಳಬೇಕು. ಇಂತಹ ಪುನರಾವರ್ತನೆಗೊಳ್ಳುವ ದಿನಚರಿಯಿಂದ ಮನಸ್ಸು ಬಹಳ ಬೇಗ ಆಯಾಸಕ್ಕೆ ಒಳಗಾಗುತ್ತದೆ. ಇವೆಲ್ಲದರ ಕೊನೆಗೆ ಪರೀಕ್ಷೆ ಎನ್ನುವ ಇನ್ನೂ ಹೆಚ್ಚಿನ ಒತ್ತಡವನ್ನು ಅನುಭವಿಸಿದ ನಂತರ ರಜೆಯ ಬಿಡುವು ದೊರಕುತ್ತದೆ.

ಆಗಷ್ಟೇ ಪರೀಕ್ಷೆಯ ತಲ್ಲಣವನ್ನು, ಓದಿ ನೆನಪಿಟ್ಟುಕೊಳ್ಳುವ ಹೆಚ್ಚಿನ ಆಯಸವನ್ನು, ಮರೆತರೇನು ಗತಿ – ಎನ್ನುವ ಭಯನಿರ್ವಹಣೆಯನ್ನು ಮುಗಿಸಿ ನಿರಾಳವಾಗುವ ಮಿದುಳು 'ರಜೆ' ಎನ್ನುವ ಬಿಡುವನ್ನು ಬಹಳ ಸಂತೋಷದಿಂದ ಎದುರುಗೊಳ್ಳುತ್ತದೆ. ಹೆಚ್ಚಿನ ಸಮಯದ ನಿದ್ರೆ, ರುಚಿಯಾದ ಊಟ-ತಿಂಡಿ, ಪಠ್ಯಪುಸ್ತಕದ ಓದಿನಿಂದ ಬಿಡುಗಡೆ – ಇವೆಲ್ಲವೂ ರಜೆಯನ್ನು ಪ್ರೀತಿಸಲಿಕ್ಕೆ ಇರುವ ಹಲವಾರು ಕಾರಣಗಳು. ಆದರೆ ಒಂದೆರಡು ದಿನಗಳ ನಂತರ ಮನಸ್ಸು ಈ ಬಿಡುವನ್ನೂ ಬೇಸರ ಎಂದು ಭಾವಿಸಲು ಶುರು ಮಾಡುತ್ತದೆ. ಏಕೆಂದರೆ ಚಟುವಟಿಕೆಗಳೇ ಇಲ್ಲದೇ ಬದುಕುವುದೆಂದರೆ ಅದು ಸಮಯ ಹರಣ. ಅಂದರೆ ಅಮೂಲ್ಯವಾದ ಕಾಲವನ್ನು ಏನೂ ಮಾಡದೇ ಕಳೆಯುವುದು ಒಂದು ಬಗೆಯ ಅಪರಾಧವೇ ಆಗುತ್ತದೆ. ಸಾಮಾನ್ಯವಾಗಿ 5ರಿಂದ 15ರ ವಯಸ್ಸಿನವರೆಗೆ ವ್ಯಕ್ತಿಗಳ ಮಿದುಳು ಅತ್ಯಂತ ಕ್ರಿಯಾಶೀಲವಾಗಿದ್ದು ಎಲ್ಲವನ್ನೂ ಗ್ರಹಿಸಬಲ್ಲುದು, ನೆನಪಿಟ್ಟುಕೊಳ್ಳಬಲ್ಲುದು. ಆದ್ದರಿಂದ ಈ ವಯಸ್ಸಿನ ಮಕ್ಕಳು ತಮ್ಮ ರಜೆಯ ಬಿಡುವನ್ನು ಅತ್ಯಂತ ಉಪಯುಕ್ತವಾಗಿ ಕಳೆಯಲು ಯೋಜನೆ ಹಾಕಿಕೊಳ್ಳುವುದು ಒಳ್ಳೆಯದು.



ಭಾರತೀಯ ಜ್ಞಾನಪರಂಪರೆಯನ್ನು ಗಮನಿಸಿದರೆ ಅದರ ಅಗಾಧ ಹರಹನ್ನೂ, ಆಳ-ವಿಸ್ತಾರಗಳನ್ನೂ ನೋಡಿದರೆ ವಿಸ್ಮಯವುಂಟಾಗುತ್ತದೆ. ಖಗೋಳಶಾಸ್ತ್ರ, ಆಯುರ್ವೇದ, ಜ್ಯೋತಿಷ್ಯ, ವಚನಸಾಹಿತ್ಯ, ನೃತ್ಯ-ಸಂಗೀತ-ನಾಟಕಗಳಂತಹ ಕಲೆಗಳು, ನೇಕಾರಿಕೆ-ಹೊಲಿಗೆ-ಬಣ್ಣಗಾರಿಗೆ-ಬಡಿಗತನ-ಕಮ್ಮಾರಿಕೆ-ಕುಂಬಾರಿಕೆಗಳಂತಹ ಕಸುಬುಗಳು, ಗುಡಿಗಾರಿಕೆ, ಶಿಲ್ಪ ಕೆತ್ತನೆ, ಚಾಪೆ ಹೆಣೆಯುವುದು ಮುಂತಾದ ಕೌಶಲಗಳು ಇವೆಲ್ಲವನ್ನೂ ಶಾಲೆಗಳಲ್ಲಿ ಪಠ್ಯದ ರೂಪದಲ್ಲಿ ಕಲಿಸಲು ಸಾಧ್ಯವಿಲ್ಲ. ಆದರೆ ಸುಸ್ಥಿರ ಜೀವನಕ್ಕೆ ಇವುಗಳಲ್ಲಿ ಅನೇಕ ತಿಳಿವಳಿಕೆಗಳು ಬೇಕಾಗುತ್ತವೆ. ಒಂದು ಕಾಲದಲ್ಲಿ ಕುಲಕಸುಬುಗಳಾಗಿದ್ದ ಇಂತಹ ಅನೇಕ ಕೌಶಲಗಳು ಸಮಾಜದ ಅಸಡ್ಡೆಗೆ ತುತ್ತಾಗಿ ನಾಶವಾಗುತ್ತಿವೆ. ಎಲ್ಲರೂ ಏಕರೂಪದ ಶಿಕ್ಷಣ ಪಡೆದು ಆಧುನಿಕ ಉದ್ಯೋಗಗಳಲ್ಲಿ ತೊಡಗಿಕೊಳ್ಳುವ ತುರುಸಿನ ಸ್ಪರ್ಧೆಗೆ ಇಳಿದಿರುವುದರಿಂದ ಪಾರಂಪರಿಕ ಕೌಶಲಗಳು ಆಯಾ ಕುಟುಂಬಗಳಲ್ಲಿ ಮುಂದುವರೆಯುತ್ತಿಲ್ಲ. ಆದರೆ ಒಟ್ಟೂ ಜನಜೀವನದ ಅಭಿರುಚಿಯನ್ನು ಗಮನಿಸಿದಾಗ ಅಂತಹ ವಸ್ತುಗಳಿಗೆ ಅಪಾರವಾದ ಬೇಡಿಕೆಯಿದೆ. ಮಣ್ಣಿನ ಪಾತ್ರೆಗಳಲ್ಲಿ ಅಡುಗೆ ಮಾಡುವುದನ್ನು, ಮನೆಯ ಗೋಡೆಗಳ ಮೇಲೆ ಹಸೆ ಬರೆಯುವುದನ್ನು, ಬಿದಿರು ಬುಟ್ಟಿಗಳನ್ನು ಲ್ಯಾಂಪ್ ಶೇಡ್ ತರಹ ಬಳಸುವುದನ್ನು ಈಗ ಎಲ್ಲರೂ ಅನುಕರಿಸಿಕೊಂಡು ಜೀವನಶೈಲಿಯಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಹಾಗಾದರೆ ಇಂತಹ ಕೌಶಲಗಳನ್ನು ಮಕ್ಕಳು ಕಲಿತರೆ ಒಳ್ಳೆಯದಲ್ಲವೆ?

ರಜೆಯ ಅವಧಿಯಲ್ಲಿ ತರಬೇತಿಯನ್ನು ಪಡೆದುಕೊಂಡರೆ ಇಂತಹ ಕೆಲವಾದರೂ ಕೌಶಲಗಳನ್ನು ತಮ್ಮದಗಿಸಿಕೊಳ್ಳಬಹುದು. ಭರತನಾಟ್ಯ, ಯಕ್ಷಗಾನ, ಮೂಡಲಪಾಯ, ಸಮರಕಲೆ, ನಾಟಕ ಇತ್ಯಾದಿ ಯಾವುದಾದರೊಂದು ಕಲೆಯನ್ನು ಅಭ್ಯಾಸ ಮಾಡಿದರೆ ಮನೋರಂಜನೆಯ ಜೊತೆಗೆ ವ್ಯಕ್ತಿತ್ವ ವಿಕಸನವೂ ಸಾಧ್ಯವಾಗುತ್ತದೆ. ಸಂಸ್ಕೃತ, ಜರ್ಮನ್, ಫ್ರೆಂಚ್ ಇತ್ಯಾದಿ ಭಾಷೆಗಳನ್ನು ಕಲಿತುಕೊಂಡರೆ ಭವಿಷ್ಯದಲ್ಲಿ ವಿದೇಶ ವಾಸ ಸುಲಭವಾಗುತ್ತದೆ. ಕಂಪ್ಯೂಟರ್ ಭಾಷೆಗಳ ಕಲಿಕೆಯಿಂದ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದೆಲ್ಲಕ್ಕಿಂತ ಮುಖ್ಯವಾಗಿ ಮನುಷ್ಯ ಪ್ರಕೃತಿಗೆ ಹತ್ತಿರವಾಗುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ.

ಗಿಡ-ಮರಗಳನ್ನು ನೆಡುವ, ಬೆಳೆಸುವ, ಪಶು-ಪಕ್ಷಿಗಳನ್ನು ಪ್ರೀತಿಸುವ-ಪಾಲಿಸುವ ತನ್ಮೂಲಕ ನಿಸರ್ಗ ಸಾಮರಸ್ಯದ ರಹಸ್ಯವನ್ನು ತಿಳಿದುಕೊಳ್ಳಬೇಕಾದ ತುರ್ತು ನಿರ್ಮಾಣವಾಗಿದೆ. ಆದ್ದರಿಂದ ತಮ್ಮ ಬಂಧು-ಬಳಗದಲ್ಲಿ ಯಾರಾದರೂ ಕೃಷಿಕರಿದ್ದರೆ ಅಂತಹವರ ಮನೆಗಳಿಗೆ ಹೋಗಿ ಉಳಿದುಕೊಂಡು ಮಣ್ಣು-ನೀರು-ಹೊಲ-ತೋಟ-ಕಾಡುಗಳನ್ನು ಹತ್ತಿರದಿಂದ ಗಮನಿಸಿ, ಪ್ರೀತಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು.

ಆಧುನಿಕ ಶಿಕ್ಷಣ ಪದ್ಧತಿ ಮನುಷ್ಯನನ್ನು ಸ್ವ-ಕೇಂದ್ರಿತನನ್ನಾಗಿ ನೋಡುವಂತೆ ಕಲಿಸುತ್ತಿದೆ. ಅವಿಭಕ್ತ ಕುಟುಂಬಗಳು ಕಲಿಸುತ್ತಿದ್ದ ಹೊಂದಾಣಿಕೆ-ತ್ಯಾಗ-ಸಮಷ್ಟಿ ಪ್ರೀತಿಯ ಭಾವಗಳು ಮರೆಯಾಗುತ್ತಿವೆ. ಆದ್ದರಿಂದ ರಜೆಯಲ್ಲಿ ಎರಡು-ಮೂರು ಕುಟುಂಬಗಳು ಒಂದೆಡೆ ಉಳಿಯುವ ಅವಕಾಶವನ್ನು ಸೃಷ್ಟಿ ಮಾಡಿಕೊಂಡರೆ ಆ ಮಟ್ಟಿಗಾದರೂ ಮಕ್ಕಳು ಹೊಂದಾಣಿಕೆಯ ಭಾವವನ್ನು ಬೆಳೆಸಿಕೊಳ್ಳಬಲ್ಲರು. 'ನನ್ನ ಟವೆಲ್, ನನ್ನ ರೂಮು, ನನ್ನ ಟಿ.ವಿ.' – ಅಂತೆಲ್ಲ ಏಕಸ್ವಾಮ್ಯದ ಭಾವದಲ್ಲಿ ಬೆಳೆಯುವ ಮಗು ಬದುಕಿನಲ್ಲಿ ಏನನ್ನೂ ಹಂಚಿಕೊಳ್ಳಲಾರದು, ಸಹಿಸಿಕೊಳ್ಳಲಾರದು. ಹಂಚಿಕೊಳ್ಳುವುದರಲ್ಲಿ ಇರುವ ಸುಖವನ್ನು ಅರ್ಥ ಮಾಡಿಸಿದರೆ ಸಾಂಘಿಕ ಬದುಕಿನ ಆದರ್ಶವನ್ನು ಪುನರ್ ಸ್ಥಾಪಿಸಬಹುದು.

ಕಂಪ್ಯೂಟರ್ ಗೇಮುಗಳು, ಟಿ.ವಿ. ಸರಣಿಯ ಕಾರ್ಟೂನುಗಳು ಇವುಗಳನ್ನು ಮಾತ್ರ ತಮ್ಮ ಮನೋರಂಜನೆಗಳಾಗಿ ಮಾಡಿಕೊಂಡಿರುವ ನಗರದ ಮಕ್ಕಳಿಗೆ ದೈಹಿಕ ಕ್ರೀಡೆಗಳ ಪರಿಚಯವೇ ಇಲ್ಲದಂತಾಗಿದೆ. ಶಾರೀರಿಕ ಶ್ರಮದಿಂದ ಉಂಟಾಗುವ ಲಾಭಗಳಿಂದ ಅವರು ವಂಚಿತರಾಗುತ್ತಿದ್ದಾರೆ. ರಜೆಯ ಅವಧಿಯಲ್ಲಾದರೂ ಬೆಳಿಗ್ಗೆ-ಸಂಜೆಯ ವೇಳೆಯಲ್ಲಿ ಕಬಡ್ಡಿ, ಖೋ ಖೋ, ಫುಟ್‌ಬಾಲ್, ಹಾಕಿ ಇಂತಹ ಆಟಗಳಲ್ಲಿ ತೊಡಗಿಕೊಂಡರೆ ದೇಹಕ್ಕೆ ವ್ಯಾಯಾಮದ ಜೊತೆಗೆ ಗುಂಪು ಆಟದ ಸೋಲು-ಗೆಲುವುಗಳು, ಕಷ್ಟ-ಸುಖಗಳು, ತಂಡವಾಗಿ ಆಡುವಾಗ ಬೇಕಾಗುವ ಹೊಂದಾಣಿಕೆಗಳು ಅರ್ಥವಾಗುತ್ತವೆ. ಒಂದೇ ಮಗುವಾಗಿ ಅಪ್ಪ-ಅಮ್ಮನ ಕಣ್ಮಣಿಯಾಗಿ ಬೆಳೆಯುವ ಮಗುವಿನ ಮಾನಸಿಕ ಸ್ಥಿತಿಯನ್ನು ಭವಿಷ್ಯದಲ್ಲಿ ಸಮಾಜದ ನಡುವೆ ಆರೋಗ್ಯಕರ ಹೊಂದಾಣಿಕೆಯೊಂದಿಗೆ ಬದುಕಲು ಸಿದ್ಧ ಮಾಡಬೇಕಾಗಿರುವುದು ಬಹಳ ಮಹತ್ವದ ಸಂಗತಿ.

ಆಧುನಿಕ ಬದುಕಿನ ಸಂಕೀರ್ಣತೆಯಿಂದ ಗಂಡಿರಲಿ, ಹೆಣ್ಣಿರಲಿ ಅಡುಗೆ, ಮನೆ ಸ್ವಚ್ಛತೆ, ಡ್ರೈವಿಂಗ್, ಸ್ವಿಮ್ಮಿಂಗ್, ಸಣ್ಣ-ಪುಟ್ಟ ರಿಪೇರಿಗಳು ಎಲ್ಲರಿಗೂ ಅವಶ್ಯಕವಾದ ವಿದ್ಯೆಗಳಾಗಿವೆ. ಅವುಗಳನ್ನು ರಜೆಯ ಬಿಡುವಿನಲ್ಲಿ ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು. ಇನ್ನು ಪ್ರವಾಸವಂತೂ ಜಗತ್ತನ್ನು ಅರ್ಥ ಮಾಡಿಕೊಳ್ಳಲು ತುಂಬಾ ಸಹಾಯ ಮಾಡುತ್ತದೆ. ಅರ್ಧ ಆಯುಷ್ಯವನ್ನು ನಿದ್ದೆಯಲ್ಲಿಯೇ ಕಳೆಯುವ ಮನುಷ್ಯ ಎಚ್ಚರವಿದ್ದಾಗಲಾದರೂ ಪ್ರತಿ ನಿಮಿಷವೂ ಉಪಯುಕ್ತವಾಗುವಂತೆ ಕಳೆಯುವ ನಿಟ್ಟಿನಲ್ಲಿ ಉದ್ಯುಕ್ತನಾಗಬೇಕು ಎಂಬುದು ನಾವೆಲ್ಲರೂ ನೆನಪಿಡಬೇಕಾದ ಸತ್ಯವಾಗಿದೆ. ❖



ಆಹಾರದಲ್ಲೂ ಇದೆ ರೋಗನಿರೋಧಕ ಶಕ್ತಿ

ಡಾ. ಎಚ್. ಎಸ್. ಪ್ರೇಮಾ

ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ? ಎಂಬ ಮಾತು ಮುನ್ನೆಲೆಗೆ ಬಂದಿದ್ದು ಕೋವಿಡ್ ನಂತರದ ಕಾಲದಲ್ಲಿ. ಮನುಷ್ಯ ತಾನು ತಿನ್ನುವ ಆಹಾರಕ್ರಮದಿಂದಲೇ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ತಿನ್ನುವ ಆಹಾರದ ಮೂಲಕ ರೋಗ ನಿಯಂತ್ರಣ ಮಾಡುವ ವಿಧಾನವು ಹೆಚ್ಚು ಶಾಶ್ವತ, ಸುರಕ್ಷಿತ ಮತ್ತು ಅಗ್ಗ. ಆಹಾರದ ಮೂಲಕ ಹೆಚ್ಚಿಸಿಕೊಳ್ಳುವ ನಿರೋಧಕ ಶಕ್ತಿಗೆ ವಿಶಾಲವಾದ ಬಾಹುಳ್ಯವಿದೆ. ನಾವು ಸೇವಿಸುವ ಕೆಲವು ಆಹಾರ ಪದಾರ್ಥಗಳಿಂದಲೇ ರೋಗಾಣುಗಾಗಳಿಂದ ಬಂದ ಸಮಸ್ಯೆ ಅಥವಾ ಅಸಮರ್ಪಕ ಜೀವನಶೈಲಿಯಿಂದ ಕಾಣಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು.

ರೋಗನಿರೋಧಕ ಆಹಾರಗಳು

ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಸ್ಯಾಹಾರಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಆ ಕಾರಣಕ್ಕೆ ಬಹಳ ಹಿಂದಿನಿಂದಲೂ ಭಾರತೀಯರ ಆಹಾರ ಕ್ರಮದಲ್ಲಿ ಸಸ್ಯಾಹಾರಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಆಹಾರಗಳಲ್ಲಿ ಇರುವ ಕೆಲವು ಅಂಶಗಳನ್ನು 'ರೋಗ ತಡೆಯುವ ಆಹಾರಾಂಶಗಳು' ಎನ್ನುತ್ತೇವೆ. ಇಂತಹ ರೋಗನಿರೋಧಕ ಶಕ್ತಿ ಹೆಚ್ಚಿಸುವ ಆಹಾರಗಳು ಪಟ್ಟಿ ಇಲ್ಲಿದೆ.

- ಟೀ, ಸೀಬೆಹಣ್ಣು, ನಕ್ಷತ್ರಹಣ್ಣು, ಕೆಂಪು ಮೆಣಸು, ನೆಲ್ಲಿಕಾಯಿ, ಓಮಕಾಳು, ವೀಳ್ಯೆದೆಲೆ, ಕಿಡ್ನಿ ಬೀನ್ಸ್, ಸೋಯಾ, ಬದನೆ ಮತ್ತು ಸಜ್ಜೆ, ಟೊಮೆಟೊ, ಕಪ್ಪು ಹಾಗೂ ನೀಲಿ ದ್ರಾಕ್ಷಿ, ಕೆಂಪು ಕೋಸು, ಕೆಂಪು ಬಣ್ಣದ ಸೊಪ್ಪು, ಕ್ಯಾರೆಟ್, ಟೊಮೆಟೊ, ಕುಂಬಳಕಾಯಿ, ಕಲ್ಲಂಗಡಿ, ಪರಂಗಿ, ಸೀಬೆ, ನಿಂಬೆ, ಕಿತ್ತಳೆ, ಚಕ್ಕೋತ, ಚೆರ್ರಿ ಮುಂತಾದವುಗಳಲ್ಲಿ ಇರುವ ವಿಶಿಷ್ಟವಾದ ಆಹಾರಾಂಶಗಳು ರೋಗಾಣುಗಳನ್ನು ದೇಹದೊಳಗೆ ಕೊಲ್ಲಲು ಸಹಾಯ ಮಾಡುತ್ತವೆ.
- ಬೆಳ್ಳುಳ್ಳಿ, ಈರುಳ್ಳಿ, ಲೀಕ್ಸ್, ಕೋಸು, ಬ್ರುಸೆಲ್, ಸಾಸಿವೆ ಮುಂತಾದವುಗಳಲ್ಲಿ ರಕ್ತವನ್ನು ಶುದ್ಧೀಕರಿಸಿ ರಕ್ತದ ಆರೋಗ್ಯ ಸುಧಾರಿಸುವ ಅಂಶಗಳಿವೆ.
- ಭಾರತೀಯರ ಆಹಾರದಲ್ಲಿ ಸಾಂಬಾರ ಪದಾರ್ಥಗಳ ಬಳಕೆ ಪ್ರಶಂಸನೀಯವಾದದ್ದು. ನಾವು ಸೇವಿಸುವ ಮೂಲಿಕೆ ಮತ್ತು ಸಾಂಬಾರ ಪದಾರ್ಥಗಳಲ್ಲಿ ಹಲವು ಬಗೆಯ ಆಹಾರಾಂಶಗಳಿವೆ. ಈ ಸಾಂಬಾರ ಪದಾರ್ಥಗಳು ಮತ್ತು ಗಿಡಮೂಲಿಕೆಗಳು ಆಹಾರದ ರುಚಿ ಹೆಚ್ಚಿಸುವುದರ ಜೊತೆಗೆ ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತವೆ. ರೋಗನಿರೋಧಕ ಶಕ್ತಿ ಹೆಚ್ಚಿಸುವ ಸಾಂಬಾರ ಪದಾರ್ಥಗಳು ಹೀಗಿವೆ: ಕೊತ್ತಂಬರಿ ಬೀಜ ಮತ್ತು ಅದರ ಎಲೆಗಳು, ಕರಿಬೇವು, ಅರಿಸಿನ, ಮೆಣಸು, ಜೀರಿಗೆ, ಏಲಕ್ಕಿ, ಮೆಣಸಿನಕಾಯಿ, ಶುಂಠಿ, ಇಂಗು, ಓಮ, ಕಪ್ಪು ಜೀರಿಗೆ, ಅಶ್ವಗಂಧ, ಜೇಷ್ಠಮಧು, ತುಳಸಿ, ದಾಲ್ಚಿನ್ನಿ, ಮಜ್ಜಿಗೆ ಹುಲ್ಲು, ಲವಂಗ ಮುಂತಾದವುಗಳು.
- ರೋಗಾಣುಗಳಿಂದ ಹರಡುವ ಕೊರೊನಾ, ನೆಗಡಿ, ಕೆಮ್ಮು, ಕ್ಷಯ, ಜ್ವರದಂತಹ ಕಾಯಿಲೆಗಳಿಗೂ ಮತ್ತು ಅಸರ್ಮಪಕ ಜೀವನಶೈಲಿಯಿಂದ ಕಾಣಿಸುವ ಡಯಾಬಿಟಿಸ್, ಅತಿತೂಕ, ಬಂಜೆತನ, ಕ್ಯಾನ್ಸರ್, ಹೃದ್ರೋಗ, ಬಿ.ಪಿಯಂತಹ ಸಮಸ್ಯೆಗಳಿಗೂ ಈ ಆಹಾರಗಳು ರಾಮಬಾಣ.

ಈ ರೀತಿ ರೋಗನಿರೋಧಕ ಶಕ್ತಿ ಹೆಚ್ಚಿರುವ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ, ಅವು ದೇಹದಲ್ಲಿ ಔಷಧಿಯಂತೆ ಕೆಲಸ ಮಾಡುತ್ತವೆ. ಆದರೆ ಇವುಗಳಿಂದ ಯಾವುದೇ ಅಡ್ಡಪರಿಣಾಗಳಿರುವುದಿಲ್ಲ. ಉತ್ತಮ ಆಹಾರಾಭ್ಯಾಸವಿದ್ದಲ್ಲಿ ಕಾಯಿಲೆಗಳು ಹೆದರಿ ಓಡುತ್ತವೆ. ಏಕೆಂದರೆ ರೋಗಗಳಿಗೆ ಒಳ್ಳೆಯ ಆಹಾರಗಳನ್ನು ಕಂಡರೆ ಭಯ.

(ಲೇಖಕಿ ಆಹಾರತಜ್ಞೆ)

ಮಾನಸಿಕ ಸ್ವಾಸ್ಥ್ಯಕ್ಕೆ ಹತ್ತು ಸೂತ್ರಗಳು



ಡಾ. ಕಿರಣ್ ವಿ. ಎಸ್.

ಮಾನಸಿಕ ಸ್ವಾಸ್ಥ್ಯದ ಅರಿವು ಹೆಚ್ಚುವುದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಮುಖ್ಯ. ದೇಹದ ಆರೋಗ್ಯದಷ್ಟೇ ಮನಸ್ಸಿನ ಆರೋಗ್ಯವೂ ಮುಖ್ಯ ಎಂಬುದನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ನೀಡುವುದು ಒಂದು ಭಾಗವಾದರೆ, ಉತ್ತಮ ಮಾನಸಿಕ ಆರೋಗ್ಯವನ್ನು ಪ್ರಚೋದಿಸಿ, ಕಾಯಿಲೆಗಳನ್ನು ತಡೆಗಟ್ಟುವುದು ಮತ್ತೊಂದು ಆಯಾಮ. ಶರೀರಕ್ಕೆ ಅನಾರೋಗ್ಯ ಕಾಡಿದಾಗ ರೋಗಿಯ ರಕ್ತದಲ್ಲಿ, ಅಂಗಾಂಗಗಳಲ್ಲಿ ಕೆಲವು ನಿಶ್ಚಿತ ಬದಲಾವಣೆಗಳು ಉಂಟಾಗುತ್ತವೆ. ಈ ಬದಲಾವಣೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಮೂಲಕ ಭೌತಿಕ ಅನಾರೋಗ್ಯವನ್ನು ಪತ್ತೆ ಮಾಡಬಹುದು. ಇದಕ್ಕೆ ಜಾಗತಿಕವಾಗಿ ಅನುಸರಿಸಬಹುದಾದ ನಿರ್ದೇಶನಗಳಿವೆ. ಆದರೆ, ಮಾನಸಿಕ ಅಸ್ವಸ್ಥತೆ ವಿಭಿನ್ನ; ಅದರಲ್ಲಿ ಪ್ರಯೋಗಾಲಯದ ಪರೀಕ್ಷೆಗಳಿಗೆ ಹೆಚ್ಚು ಆಸ್ಪದವಿಲ್ಲ. ಜೊತೆಗೆ, ಆಯಾ ಭೌಗೋಳಿಕ ಕ್ಷೇತ್ರಗಳಿಗೆ ಅನುಸಾರವಾಗಿ ಬದಲಾಗುವ ಸಾಂಸ್ಕೃತಿಕ ಆಚರಣೆಗಳು, ರೀತಿ-ರಿವಾಜುಗಳು, ವೈಯಕ್ತಿಕ ನಂಬಿಕೆಗಳು ಮುಂತಾದವುಗಳ ಬಲವಾದ ಪ್ರಭಾವವುಳ್ಳ ಕಾರಣದಿಂದ ಮಾನಸಿಕ ಅನಾರೋಗ್ಯದ ಪತ್ತೆಗೆ ವಿಶಿಷ್ಟ ವಿಧಾನಗಳನ್ನು ಅನುಸರಿಸಬೇಕು. ಮಾನಸಿಕ ಆರೋಗ್ಯವನ್ನು ಸಫಲವಾಗಿ ಉತ್ತೇಜಿಸುವ ನಿಟ್ಟಿನಲ್ಲಿ ಕೆಲವು ವಿಷಯಗಳನ್ನು ಪರಿಗಣಿಸಬಹುದು.

- ದೇಹದ ಆರೋಗ್ಯದ ಬಗ್ಗೆ ಆಸ್ಥೆ ವಹಿಸುವಷ್ಟು ಮಾನಸಿಕ ಆರೋಗ್ಯದ ಬಗ್ಗೆ ಜನರ ಅರಿವಿಲ್ಲ. ಯಾವುದೇ ರೋಗದ ಬಗ್ಗೆ ತಿಳಿವಳಿಕೆ ಮೂಡಲು ಮೊದಲು ಅದರ ಕಾಯಿಲೆಯ ಲಕ್ಷಣಗಳು ತಿಳಿಯಬೇಕು. ಇಲ್ಲವಾದರೆ, ಚಿಕಿತ್ಸೆ ಪಡೆಯಬೇಕೆಂದಾಗಲೀ, ಪಡೆಯುವ ದಾರಿಯಾಗಲೀ ತಿಳಿಯುವುದಿಲ್ಲ. ಹೀಗಾಗಿ ಮಾನಸಿಕ ಸ್ವಾಸ್ಥ್ಯದ ಕುರಿತಾಗಿ ಜನಜಾಗೃತಿ ಮೂಡಬೇಕು.
- ಮಾನಸಿಕ ಅಸ್ವಸ್ಥತೆ ಎನ್ನುವುದು ವಾಸ್ತವ. ಇದರ ಬಗ್ಗೆ ಯಾವುದೇ ನಿರಾಕರಣೆ ಅಥವಾ ಸಂಕೋಚ ಬೇಕಿಲ್ಲ; ಚಿಕಿತ್ಸೆ ಪಡೆಯಲು ಮುಜುಗರ ಪಡಬೇಕಿಲ್ಲ. ದೈಹಿಕ ಕಾಯಿಲೆಗೆ ಯಾವ ರೀತಿ ವೈದ್ಯರನ್ನು ಸಂಪರ್ಕಿಸುತ್ತೇವೆಯೋ, ಮಾನಸಿಕ ಚಿಕಿತ್ಸೆಗೂ ಅಂತೆಯೇ ನಿಸ್ಸಂಕೋಚವಾಗಿ ವೈದ್ಯರನ್ನು ಕಾಣುವಂತಹ ಸಾಮಾಜಿಕ ಪರಿಸ್ಥಿತಿ ನಿರ್ಮಾಣವಾಗಬೇಕು.
- ಸರಿ-ತಪ್ಪುಗಳ ಜಿಜ್ಞಾಸೆ, ಆತ್ಮವಿಶ್ವಾಸ, ವಿವೇಚನೆ, ಸ್ವಸಾಮರ್ಥ್ಯದ ಮೇಲಿನ ನಂಬಿಕೆ – ಇವುಗಳು ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕ. ಇವುಗಳನ್ನು ಬೆಳೆಸುವ ಕೌಟುಂಬಿಕ ಮತ್ತು ಸಾಮಾಜಿಕ ವಾತಾವರಣ ನಿರ್ಮಾಣವಾಗಬೇಕು.
- ಒಳ್ಳೆಯ ಶೈಕ್ಷಣಿಕ ಮತ್ತು ಮಾಡಬೇಕಾದ ಉದ್ಯೋಗದ ಬಗೆಗಿನ ತರಬೇತಿಗಳು ಮುಖ್ಯ. ಮಾಡುವ ಉದ್ಯೋಗದ ಬಗ್ಗೆ ನಿಖರ ಜ್ಞಾನ, ಕೆಲಸದ ಬಗ್ಗೆ ಶ್ರದ್ಧೆ, ಸಹೋದ್ಯೋಗಿಗಳ ಜೊತೆಯಲ್ಲಿ ಒಳ್ಳೆಯ ವರ್ತನೆ, ವೃತ್ತಿಪರ ಮಾಹಿತಿಗಳು ಮಾನಸಿಕ ಸ್ವಾಸ್ಥ್ಯದ ರಕ್ಷಣೆಗೆ ಇಂಬು ನೀಡುತ್ತವೆ. ಶಾಲೆಯ ದಿನಗಳಿಂದಲೇ ಈ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಮಾನಸಿಕ ಆರೋಗ್ಯ ಪಠ್ಯದ ವಿಷಯವಾಗಬೇಕು.
- ಭಾವನೆಗಳ ಮೇಲೆ ಹತೋಟಿ ಇರಬೇಕು. ಮಾನವ ಸಂಘಜೀವಿ. ವೈಯಕ್ತಿಕ ಭಾವನೆಗಳು ಸಾಂಘಿಕ ಸ್ವಾಸ್ಥ್ಯಕ್ಕೆ ಪೂರಕವಾಗಿರಬೇಕು. ಜೊತೆಗೆ, ಮತ್ತೊಬ್ಬರ ವರ್ತನೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಯಬೇಕು. ಒಳ್ಳೆಯ ವಿಷಯಗಳನ್ನು ಹಂಚುವುದು, ಅಪಾಯಗಳನ್ನು ಗ್ರಹಿಸಿ ಇತರರಿಗೆ ಎಚ್ಚರಿಕೆ ನೀಡುವುದು – ಇವು ಉತ್ತಮ ಮಾನಸಿಕ ಆರೋಗ್ಯದ ಸೂಚಕಗಳು. ಪ್ರತಿದಿನವೂ ಹಲವಾರು ಸಣ್ಣಪುಟ್ಟ ಸಮಸ್ಯೆಗಳನ್ನು ಪ್ರತಿಯೊಬ್ಬರೂ ಎದುರಿಸುತ್ತಿರುತ್ತೇವೆ. ಇದನ್ನು ಯಾವ ರೀತಿ ನಿರ್ವಹಿಸುತ್ತೇವೆಂಬುದು ನಮ್ಮ ಮಾನಸಿಕ ಪಕ್ವತೆಗೆ ಕಿರುಗಿಂಡಿ. ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಅವಕ್ಕೆ ಪ್ರಾಯೋಗಿಕ ಪರಿಹಾರಗಳನ್ನು ಹುಡುಕಿಕೊಳ್ಳುವುದು; ಇಂತಹ ಪರಿಹಾರಗಳನ್ನು ಸಮರ್ಥವಾಗಿ ನೀಡಬಲ್ಲ ಆತ್ಮೀಯರೊಡನೆ ಚರ್ಚಿಸುವುದು; ದೊಡ್ಡ ಸಮಸ್ಯೆಗಳನ್ನು ಒಂದು ತಂಡವಾಗಿ ಪರಿಹರಿಸುವುದು – ಇವೆಲ್ಲವೂ ಮಾನಸಿಕ ಆರೋಗ್ಯಕ್ಕೆ ಪೂರಕ. ಸಂತಸದ ಸಮಯದಲ್ಲಿ ಮಾನಸಿಕ ಗಟ್ಟಿತನ ಹೆಚ್ಚಾಗಿ ಅಗತ್ಯವಿಲ್ಲ. ಆದರೆ, ಗಡುಸಿನ ಅಗತ್ಯ ಕ್ಲಿಷ್ಟಕರ ಪರಿಸ್ಥಿತಿಗಳಲ್ಲಿ ಇರುತ್ತದೆ. ಸಮಸ್ಯೆಗಳಿಂದ ದೂರ ಓಡುವವರು ಮಾನಸಿಕ ಕಾಯಿಲೆಗಳಿಗೆ ಹೆಚ್ಚಾಗಿ ಗುರಿಯಾಗುತ್ತಾರೆ.
- ಸಾಮಾಜಿಕ ಮತ್ತು ಸಾಂಘಿಕ ಕೌಶಲಗಳು ಮಾನಸಿಕ ಸ್ವಾಸ್ಥ್ಯಕ್ಕೆ ಸಹಕಾರಿ. ಪರಿಚಿತ ಮತ್ತು ಅಪರಿಚಿತ ಜನರೊಡನೆ ವ್ಯವಹರಿಸುವ ಚಾತುರ್ಯ, ವಿವಿಧ ವಯೋಮಾನದವರೊಡನೆ ಬೆರೆಯುವಾಗ ಇರಬೇಕಾದ ಎಚ್ಚರ, ಸಂಬಂಧಗಳನ್ನು ನಿರ್ವಹಿಸುವ ವಿಧಾನಗಳು, ತಂಡದ ಭಾಗವಾಗಿ ಮಾಡಬೇಕಾದ ಕರ್ತವ್ಯಗಳು, ನಾಯಕತ್ವದ ಗುಣ, ಸಹಕಾರದ ಮನೋಧರ್ಮ ಮೊದಲಾದುವು ನಮ್ಮ ಮಾನಸಿಕ ಭಾವನೆಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಲು ನೆರವಾಗುತ್ತವೆ.
- ದೈಹಿಕ ಸ್ವಾಸ್ಥ್ಯಕ್ಕೂ ಮಾನಸಿಕ ಆರೋಗ್ಯಕ್ಕೂ ಬಲವಾದ ನಂಟಿದೆ; ಒಂದನ್ನೊಂದು ಪರಸ್ಪರ ಉತ್ತೇಜಿಸುತ್ತವೆ. ದೀರ್ಘಕಾಲಿಕ ಕಾಯಿಲೆಗಳಿಂದ ಬಳಲುವವರಲ್ಲಿ ಮಾನಸಿಕ ಸಂತುಲನ ಬಿಗಡಾಯಿಸುತ್ತದೆ. ಅಂತೆಯೇ, ಮಾನಸಿಕ ರೋಗಿಗಳಲ್ಲಿ ಹಲವಾರು ದೈಹಿಕ ಸಮಸ್ಯೆಗಳು ಕಾಣುತ್ತವೆ. ಹೀಗಾಗಿ, ಸರಿಯಾದ ಆಹಾರ, ವ್ಯಾಯಾಮ, ಶಿಸ್ತುಗಳ ಮೂಲಕ ದೈಹಿಕ ಆರೋಗ್ಯವನ್ನು ಕಾಪಾಡಿಕೊಂಡವರಲ್ಲಿ ಮಾನಸಿಕ ಅನಾರೋಗ್ಯಗಳ ಸಾಧ್ಯತೆ ಕಡಿಮೆಯಾಗುತ್ತದೆ.
- ಆಧ್ಯಾತ್ಮ ಮತ್ತು ಪಾರಲೌಕಿಕ ಚಿಂತನೆಗಳು ಮನಸ್ಸಿನ ಉದ್ವೇಗಗಳನ್ನು ಹದ್ದುಬಸ್ತಿನಲ್ಲಿ ಇಡಲು ಸಹಕಾರಿ ಎಂದು ಅಧ್ಯಯನಗಳು ತಿಳಿಸಿವೆ. ನಮ್ಮ ಜೀವನದ ಅರ್ಥ, ಉದ್ದೇಶಗಳನ್ನು ಅರಿಯುವ ಪ್ರಯತ್ನಗಳು ಒಂದು ದೊಡ್ಡ ವ್ಯವಸ್ಥೆಯಲ್ಲಿ ನಮ್ಮ ಪಾತ್ರವನ್ನು ನಿರ್ದೇಶಿಸಲು ನೆರವಾಗುತ್ತವೆ. ಈ ರೀತಿಯ ಚಿಂತನೆ ಕೇವಲ ಆಸ್ತಿಕರಿಗೆ ಮಾತ್ರವಲ್ಲದೇ, ಇತರರಿಗೂ ನೆರವಾಗುತ್ತವೆ.
- ಜೀವನದ ಗುಣಮಟ್ಟವೆನ್ನುವುದು ಕೇವಲ ಹಣಕ್ಕೆ ಸಂಬಂಧಿಸಿದ ವಿಷಯವಲ್ಲ. ದೈಹಿಕ ಮತ್ತು ಮಾನಸಿಕ ಆರೋಗ್ಯ, ಸಂತಸ, ವೈಯಕ್ತಿಕ ಸಾಧನೆ, ಸಮಾಧಾನ, ಜೀವನಪ್ರೀತಿಗಳು ಬದುಕಿನ ಗುಣಮಟ್ಟವನ್ನು ವೃದ್ಧಿಸುತ್ತವೆ. ಯಾವ ರೀತಿ ದೈಹಿಕ ಆರೋಗ್ಯ ಎನ್ನುವುದು ಕೇವಲ ಕಾಯಿಲೆಯ ಅನುಪಸ್ಥಿತಿಯಲ್ಲ ಎನ್ನುವ ಮಾತಿದೆಯೋ, ಅಂತೆಯೇ ಮಾನಸಿಕ ಆರೋಗ್ಯ ಎನ್ನುವುದು ಮಾನಸಿಕ ಕಾಯಿಲೆ ಇಲ್ಲದ ಸ್ಥಿತಿಯಲ್ಲ. ಬದಲಿಗೆ, ಅದು ಸ್ವಸಾಮರ್ಥ್ಯ ಮೂಲದ ಸಾಧನೆ, ಜೀವನದ ಹಲವಾರು ಪ್ರಾಕಾರಗಳ ಸಂತಸಗಳನ್ನು ಅನುಭವಿಸುವ ಮನೋವೃತ್ತಿ, ಸಫಲ ಸಾಮಾಜಿಕ ಸಂಬಂಧಗಳು, ಕಾಲಕ್ಷೇಪಗಳು, ನೆಮ್ಮದಿ ನೀಡುವ ಆರೋಗ್ಯಕರ ಹವ್ಯಾಸಗಳು, ಬಿಡುವಿನ ವೇಳೆಯನ್ನು ಫಲಪ್ರದವಾಗಿ ಕಳೆಯುವ ವಿಧಾನಗಳು ಮಾನಸಿಕ ಸ್ವಾಸ್ಥ್ಯದ ಸೂಚ್ಯಂಕಗಳು.
- ಮಾನಸಿಕ ಆರೋಗ್ಯದ ಪ್ರಮುಖ ಲಕ್ಷಣಗಳೆಂದರೆ, ವ್ಯಕ್ತಿ ತನ್ನ ಸಾಮರ್ಥ್ಯವನ್ನು ಗುರುತಿಸಿ, ಅದಕ್ಕೆ ಪೂರಕವಾಗಿ ನಡೆದುಕೊಳ್ಳುವುದು; ದಿನನಿತ್ಯದ ಜಂಜಾಟಗಳನ್ನು ಸಮರ್ಥವಾಗಿ ನಿರ್ವಹಿಸುವುದು; ತನಗೆ ಮತ್ತು ಸಮಾಜಕ್ಕೆ ಲಾಭದಾಯಕವಾಗುವ ವೃತ್ತಿಯಲ್ಲಿ, ಕೆಲಸಗಳಲ್ಲಿ ತೊಡಗಿಕೊಳ್ಳುವುದು; ಸಮಾಜದ ಏಳಿಗೆಗೆ ತನ್ನ ಕೈಲಾದ ಸಹಕಾರ ನೀಡುವುದು. ಈ ನಿಟ್ಟಿನಲ್ಲಿ ಲೋಪಗಳು ಕಂಡರೆ ಮಾನಸಿಕ ಸ್ವಾಸ್ಥ್ಯ ಏರುಪೇರಾಗಿದೆಯೆಂದು ಭಾವಿಸಬಹುದು. ಸಮಾಜದ ಪ್ರತಿಯೊಬ್ಬರ ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುವುದು ಒಳ್ಳೆಯ ಸಮಾಜ ನಿರ್ಮಾಣದ ಹಾದಿಯಲ್ಲಿ ಮಹತ್ವದ ಹೆಜ್ಜೆ. ಇದನ್ನು ಶಾಲೆಯ ವಯಸ್ಸಿನಿಂದಲೇ ಆರಂಭಿಸಬೇಕು. ಮಾನಸಿಕ ಸ್ವಾಸ್ಥ್ಯದ ಬಗೆಗಿನ ಅಜ್ಞಾನ ಅದನ್ನು ಸಾಧಿಸುವ ಹಾದಿಯಲ್ಲಿ ತೊಡಕಾಗಬಾರದು.




> ಸರಿ-ತಪ್ಪುಗಳ ಜಿಜ್ಞಾಸೆ, ಆತ್ಮವಿಶ್ವಾಸ, ವಿವೇಚನೆ, ಸ್ವಸಾಮರ್ಥ್ಯದ ಮೇಲಿನ ನಂಬಿಕೆ – ಇವುಗಳು ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕ.

(ಲೇಖಕ ವೈದ್ಯ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ.

–ಎ.ಪಿ.ಜೆ. ಅಬ್ದುಲ್ ಕಲಾಂ

ತಾಳೆ ಎಣ್ಣೆ ರಫ್ತು ನಿಷೇಧ ಸಂಕಷ್ಟದ ಹೊತ್ತಿನ ಹೆಚ್ಚುವರಿ ಹೊರೆ

ತಾಳೆ ಎಣ್ಣೆಯ ರಫ್ತನ್ನು ಏಪ್ರಿಲ್ 28ರಿಂದ ಜಾರಿಗೆ ಬರುವಂತೆ ನಿಷೇಧಿಸುವ ತೀರ್ಮಾನವನ್ನು ಇಂಡೊನೇಷ್ಯಾ ಕೈಗೊಂಡಿರುವುದು ಭಾರತದ ಮಟ್ಟಿಗೆ ಆಘಾತಕಾರಿ. ಅಷ್ಟೇ ಅಲ್ಲ, ಇದು ಕುಟುಂಬಗಳ ಮಟ್ಟದಿಂದ ಆರಂಭಿಸಿ ದೇಶದ ಆಡಳಿತದ ಹೊಣೆ ಹೊತ್ತಿರುವ ನಾಯಕರ ಮಟ್ಟದವರೆಗೆ ಈಗಾಗಲೇ ಇರುವ ಕೆಲವು ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸಲಿದೆ. ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾದ ನಂತರದಲ್ಲಿ ದೇಶಕ್ಕೆ ಸೂರ್ಯಕಾಂತಿ ಎಣ್ಣೆ ಪೂರೈಕೆಗೆ ಪೆಟ್ಟು ಬಿದ್ದಿದೆ. ಭಾರತಕ್ಕೆ ಸೂರ್ಯಕಾಂತಿ ಎಣ್ಣೆಯನ್ನು ಉಕ್ರೇನ್ ಮತ್ತು ರಷ್ಯಾ ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದವು. ಯುದ್ಧದ ಪರಿಣಾಮವಾಗಿ ಸಹಜವಾಗಿಯೇ ಅಲ್ಲಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಇದರಿಂದಾಗಿ ಇತರ ಅಡುಗೆ ಎಣ್ಣೆಗಳ ಬೆಲೆಯು ಹೆಚ್ಚಳ ಆಗಿದೆ. ಇದರ ನಡುವೆ, ತಾಳೆ ಎಣ್ಣೆ ರಫ್ತನ್ನು ನಿಷೇಧಿಸಲು ಇಂಡೊನೇಷ್ಯಾ ಸರ್ಕಾರ ತೀರ್ಮಾನ ಕೈಗೊಂಡಿದೆ. ದೇಶಿ ಮಾರುಕಟ್ಟೆಯಲ್ಲಿನ ಪರಿಸ್ಥಿತಿಗೆ ಸ್ಪಂದಿಸಿ, ಅಲ್ಲಿನ ಸರ್ಕಾರವು ಈ ತೀರ್ಮಾನ ಕೈಗೊಂಡಿದೆಯಾದರೂ ಅದರ ಪರಿಣಾಮವು ಭಾರತದಂತಹ ದೇಶಗಳ ಮೇಲೆ ದೊಡ್ಡ ಮಟ್ಟದಲ್ಲಿ ಇರಲಿದೆ. ರಷ್ಯಾ–ಉಕ್ರೇನ್ ಯುದ್ಧ ಆರಂಭವಾಗುವ ಮೊದಲು ಅಲ್ಲಿನ ಬಂದರುಗಳಿಂದ ಸೂರ್ಯಕಾಂತಿ ಎಣ್ಣೆ ಹೊತ್ತ ಒಂದಿಷ್ಟು ಹಡಗುಗಳು ಭಾರತದ ಕಡೆ ಹೊರಟಿದ್ದವು. ಹೀಗಾಗಿ ಮಾರ್ಚ್‌ನಲ್ಲಿ ಉಕ್ರೇನ್‌ನಿಂದ 1.27 ಲಕ್ಷ ಟನ್ ಹಾಗೂ ರಷ್ಯಾದಿಂದ 73,500 ಟನ್ ಸೂರ್ಯಕಾಂತಿ ಎಣ್ಣೆ ಭಾರತಕ್ಕೆ ಬಂದಿದೆ. ಆದರೆ, ಏಪ್ರಿಲ್‌ನಲ್ಲಿ ಉಕ್ರೇನ್‌ನಿಂದ ಭಾರತಕ್ಕೆ ಸೂರ್ಯಕಾಂತಿ ಎಣ್ಣೆಯ ರಫ್ತು ಆಗಿಲ್ಲ ಎಂದು ಅಡುಗೆ ಎಣ್ಣೆಗಳ ವರ್ತಕರ ಸಂಘಟನೆಯಾದ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಮಾಹಿತಿ ನೀಡಿದೆ. ಈಗ ಭಾರತಕ್ಕೆ ರಷ್ಯಾ ಮತ್ತು ಅರ್ಜೆಂಟೀನಾದಿಂದ ಸೂರ್ಯಕಾಂತಿ ಎಣ್ಣೆ ಬರಬೇಕು. ಉಕ್ರೇನ್‌ನಿಂದ ಮತ್ತೆ ಯಾವಾಗ ಸೂರ್ಯಕಾಂತಿ ಎಣ್ಣೆಯ ರಫ್ತು ಆರಂಭವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರವು ಯುದ್ಧ ಕೊನೆಗೊಳ್ಳುವುದನ್ನು ಆಧರಿಸಿದೆ. ಸೂರ್ಯಕಾಂತಿ ಎಣ್ಣೆ ದುಬಾರಿ ಆಗಿರುವ ಕಾರಣದಿಂದಾಗಿ ಗ್ರಾಹಕರಲ್ಲಿ ಒಂದು ವರ್ಗವು ಇತರ ಅಡುಗೆ ಎಣ್ಣೆಗಳ ಕಡೆ ಮುಖ ಮಾಡಿದೆ ಎಂಬ ವರದಿಗಳು ಇವೆ.



> ಕೇಂದ್ರ ಸರ್ಕಾರವೇ ಮುಂದಾಗಿ ಇಂಡೊನೇಷ್ಯಾ ಸರ್ಕಾರದ ಜೊತೆ ಮಾತುಕತೆ ನಡೆಸಿ, ಭಾರತಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ತಾಳೆ ಎಣ್ಣೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು

ದಕ್ಷಿಣ ಭಾರತದಲ್ಲಿ ಹಲವರು ತಾಳೆ ಎಣ್ಣೆ, ಸೋಯಾ ಎಣ್ಣೆ ಮತ್ತು ಶೇಂಗಾ ಎಣ್ಣೆ ಕಡೆ ಮುಖ ಮಾಡಿದ್ದಾರೆ. ಉತ್ತರ ಭಾರತದಲ್ಲಿ ಹಲವು ಗ್ರಾಹಕರು ರೈಸ್‌ಬ್ರಾನ್ ಎಣ್ಣೆ, ಸಂಸ್ಕರಿಸಿದ ಸಾಸಿವೆ ಎಣ್ಣೆ ಬಳಕೆ ಶುರುಮಾಡಿದ್ದಾರೆ. ಇದು ಎಲ್ಲ ಬಗೆಯ ಅಡುಗೆ ಎಣ್ಣೆಗಳ ದರ ಹೆಚ್ಚಳಕ್ಕೆ ಕಾರಣವಾಗಿದೆ. ಈಗ ಇಂಡೊನೇಷ್ಯಾ ದೇಶವು ತಾಳೆ ಎಣ್ಣೆಯ ರಫ್ತನ್ನು ನಿಷೇಧಿಸಲಿರುವುದರಿಂದ, ಒಂದಿಷ್ಟು ಗ್ರಾಹಕರು ಇತರ ಅಡುಗೆ ಎಣ್ಣೆಗಳ ಖರೀದಿಗೆ ಮುಂದಾಗಬಹುದು. ಆಗ, ಎಲ್ಲ ಬಗೆಯ ಅಡುಗೆ ಎಣ್ಣೆಗಳ ದರವು ಇನ್ನಷ್ಟು ದುಬಾರಿ ಆಗುವುದು ಬಹುತೇಕ ಖಚಿತ. 2021ರ ನವೆಂಬರ್‌ನಿಂದ ಈ ವರ್ಷದ ಮಾರ್ಚ್ ಅಂತ್ಯದವರೆಗಿನ ಅಂಕಿ–ಅಂಶಗಳ ಪ್ರಕಾರ, ಭಾರತಕ್ಕೆ ಆಮದಾಗುವ ತಾಳೆ ಎಣ್ಣೆ ಪ್ರಮಾಣದಲ್ಲಿ ಇಂಡೊನೇಷ್ಯಾದ ಪಾಲು ಶೇಕಡ 37ರಷ್ಟು. ಮಲೇಷ್ಯಾ ಮತ್ತು ಥಾಯ್ಲೆಂಡ್ ದೇಶಗಳಿಂದಲೂ ಭಾರತಕ್ಕೆ ತಾಳೆ ಎಣ್ಣೆ ಆಮದು ಆಗುತ್ತಿದ್ದರೂ, ಇಂಡೊನೇಷ್ಯಾದ ತೀರ್ಮಾನದಿಂದ ಆಗಲಿರುವ ಕೊರತೆಯನ್ನು ತುಂಬಿಕೊಡಲು ಬೇರೆ ಯಾರಿಂದಲೂ ಸಾಧ್ಯವಿಲ್ಲ ಎಂಬ ಅಭಿಪ್ರಾಯ ಅಡುಗೆ ಎಣ್ಣೆ ವರ್ತಕರಲ್ಲಿ ಇದೆ. ಹೀಗಾಗಿ, ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವೇ ಮುಂದಾಗಿ ಇಂಡೊನೇಷ್ಯಾ ಸರ್ಕಾರದ ಜೊತೆ ಮಾತುಕತೆ ನಡೆಸಬೇಕು. ಭಾರತಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ತಾಳೆ ಎಣ್ಣೆ ಲಭ್ಯವಾಗುವಂತೆ ಕೇಂದ್ರ ಸರ್ಕಾರ ಮಾತ್ರವೇ ನೋಡಿಕೊಳ್ಳಬಲ್ಲದು. ಮಾರ್ಚ್ ತಿಂಗಳಲ್ಲಿ ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6.95ಕ್ಕೆ ತಲುಪಿದೆ. ಇದರಲ್ಲಿ ಎಣ್ಣೆ ಮತ್ತು ಕೊಬ್ಬಿನ ಅಂಶದ ಪದಾರ್ಥಗಳ ಬೆಲೆ ಏರಿಕೆಯ ಕೊಡುಗೆಯೂ ದೊಡ್ಡಮಟ್ಟದಲ್ಲಿದೆ. ಇಂಡೊನೇಷ್ಯಾದ ತೀರ್ಮಾನದ ಪರಿಣಾಮವಾಗಿ ಅಡುಗೆ ಎಣ್ಣೆಗಳ ಬೆಲೆಯು ಜಾಸ್ತಿ ಆದರೆ, ಒಟ್ಟಾರೆ ಚಿಲ್ಲರೆ ಹಣದುಬ್ಬರ ಪ್ರಮಾಣದ ಮೇಲೆಯೂ ಅದರ ದುಷ್ಪರಿಣಾಮ ಇದ್ದೇ ಇರುತ್ತದೆ. ಅಂದರೆ, ದೇಶದ ಜನರ ತಿಂಗಳ ದಿನಸಿ ಖರ್ಚು ಇನ್ನಷ್ಟು ಹೆಚ್ಚಾಗುತ್ತದೆ. ಚಿಲ್ಲರೆ ಹಣದುಬ್ಬರ ದರವನ್ನು ನಿಯಂತ್ರಣದಲ್ಲಿ ಇರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಹೆಣಗಾಟ ನಡೆಸಿರುವ ಹೊತ್ತಿನಲ್ಲಿ ಎದುರಾಗಿರುವ ಈ ಸಂಕಷ್ಟವು ತೀರಾ ದುರದೃಷ್ಟಕರ.

ದಿನದ ಟ್ವೀಟ್

ಲಂಚದ ಹಾವಳಿ



ಲಂಚ ಕೊಟ್ಟು ಸರ್ಕಾರಿ ಕೆಲಸಕ್ಕೆ ಸೇರಿದವರು ಯಾರೇ ಆದರೂ ಆ ಹಣವನ್ನು ವಾಪಸ್ ಪಡೆಯುವುದಕ್ಕೇ ಮೊದಲ ಕೆಲವು ವರ್ಷಗಳನ್ನು ವ್ಯಯಿಸುತ್ತಾರೆ. ಮುಂದಿನ ಕೆಲವು ವರ್ಷಗಳನ್ನು ತಮಗಾಗಿ ಮತ್ತು ತಮ್ಮ ಗಾಡ್‌ಫಾದರ್‌ಗಳ ಸಲುವಾಗಿ ಹಣ ಮಾಡಲು ಮೀಸಲಿಡುತ್ತಾರೆ. ನಮ್ಮ ಕಾರ್ಯಾಂಗವು ರಾಜಕೀಯ ಆಡಳಿತಕ್ಕಿಂತಲೂ ಹೆಚ್ಚು ಭ್ರಷ್ಟವಾಗಿರುವುದಕ್ಕೆ ಇದು ಪ್ರಮುಖ ಕಾರಣವಾಗಿದೆ.

ವಿನ್ಯಾಸ್ ಶೆಟ್ಟಿ, ಸಿವಿಲ್ ಎಂಜಿನಿಯರ್

ಕಿಡಿನುಡಿ



ಭಾರತದಲ್ಲಿ ಹಣದುಬ್ಬರ ಜಾಸ್ತಿಯಾಗಿದೆ. ಬೇರೆಲ್ಲ ದೇಶಗಳು ಮಾಡುತ್ತಿರುವಂತೆ, ಒಂದಲ್ಲ ಒಂದು ಹಂತದಲ್ಲಿ ಆರ್‌ಬಿಐ ಕೂಡ ರೆಪೊ ದರ ಹೆಚ್ಚಿಸಬೇಕಾಗುತ್ತದೆ. ರೆಪೊ ದರ ಹೆಚ್ಚಿಸುವುದು ವಿದೇಶಿ ಹೂಡಿಕೆದಾರರಿಗೆ ಅನುಕೂಲ ಕಲ್ಪಿಸುವ ರಾಷ್ಟ್ರ ವಿರೋಧಿ ಚಟುವಟಿಕೆ ಅಲ್ಲ ಎಂಬುದನ್ನು ರಾಜಕಾರಣಿಗಳು, ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಅದು ಆರ್ಥಿಕ ಸ್ಥಿರತೆಗಾಗಿ ಮಾಡುವ ಹೂಡಿಕೆ. ಇದರ ಅತಿದೊಡ್ಡ ಲಾಭ ಭಾರತಕ್ಕೇ ಆಗುತ್ತದೆ.

ರಘುರಾಂ ರಾಜನ್, ಆರ್‌ಬಿಐ ಮಾಜಿ ಗವರ್ನರ್

25 ವರ್ಷಗಳ ಹಿಂದೆ

ಶನಿವಾರ, 26-4-1997

• **ಕೇಸರಿಗೆ ಹೈಕೋರ್ಟ್ ನೋಟಿಸ್ ಜಾರಿ**

ನವದೆಹಲಿ, ಏ. 25 (ಪಿಟಿಐ)– ಕಾಂಗ್ರೆಸ್ ಪಕ್ಷದ ಖಜಾಂಚಿಯಾಗಿದ್ದಾಗ ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ ಉಲ್ಲಂಘಿಸಿ ವಿದೇಶಿ ವಂತಿಗೆಯಾಗಿ ಜರ್ಮನಿಯಿಂದ ಮೂರು ಕೋಟಿ ರೂಪಾಯಿ ಸ್ವೀಕರಿಸಿದ್ದಾರೆ ಎಂಬ ಆರೋಪ ಹೊತ್ತಿರುವ ಪಕ್ಷದ ಈಗಿನ ಅಧ್ಯಕ್ಷ ಸೀತಾರಾಂ ಕೇಸರಿ ಅವರಿಗೆ ದೆಹಲಿ ಹೈಕೋರ್ಟ್ ಇಂದು ಷೋಕಾಸು ನೋಟಿಸು ಜಾರಿ ಮಾಡಿದೆ.

• **‘ವಚನದೀಪ್ತಿ’ ಮುಟ್ಟುಗೋಲು**

ಬೆಂಗಳೂರು, ಏ. 25– ಮಾತೆ ಮಹಾದೇವಿ ಅವರು ಸಂಪಾದಿಸಿರುವ ವಿವಾದಾತ್ಮಕ ‘ಬಸವ ವಚನ ದೀಪ್ತಿ’ ಕೃತಿಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಸರ್ಕಾರ ಇಂದು ಆದೇಶ ಹೊರಡಿಸಿದೆ.

ಈ ಕೃತಿಯಲ್ಲಿ ಬಸವಣ್ಣನವರ ವಚನಗಳ ಅಂಕಿತವಾದ ‘ಕೂಡಲ ಸಂಗಮದೇವ’ಕ್ಕೆ ಬದಲಾಗಿ ‘ಲಿಂಗದೇವ’ ಎಂಬ ಕಲ್ಪಿತ ಅಂಕಿತವನ್ನು ಹಾಕಿರುವುದರಿಂದ ವೀರಶೈವರು ಹಾಗೂ ಬಸವಾನುಯಾಯಿಗಳ ಧಾರ್ಮಿಕ ಭಾವನೆಗಳನ್ನು ದುರುದ್ದೇಶದಿಂದ ಅವಮಾನಿಸಿದಂತಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಲ್ಲದೆ ವೀರಶೈವರು ಹಾಗೂ ಬಸವಾನುಯಾಯಿಗಳಲ್ಲಿ ದ್ವೇಷವನ್ನು ಬೆಳೆಸಲು ಎಡೆ ಮಾಡಿರುವುದರಿಂದಾಗಿ ಉಂಟಾಗಿರುವ ಉದ್ರಿಕ್ತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಕೃತಿಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 26-4-1972

• **ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಬಂಧ ಪಾಲನೆ ಸಂವಿಧಾನ ನಮ್ಮದು– ಪಂತ್**

ಬೆಂಗಳೂರು, ಏ. 25– ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧ ಪಾಲನೆಯ ಅವಶ್ಯಕತೆಗಳನ್ನು ಪೂರೈಸುವಷ್ಟರ ಮಟ್ಟಿಗೆ ಭಾರತದ ಸಂವಿಧಾನ ಸಾಮರ್ಥ್ಯ ಗುಣಗಳಿಂದ ಕೂಡಿದೆ ಎಂಬ ಆಡಳಿತ ಸುಧಾರಣಾ ಆಯೋಗದ ಅಭಿಪ್ರಾಯವನ್ನು ಕಳೆದ 22 ವರ್ಷಗಳ ಅನುಭವ ಸಾಧಿಸಿ ತೋರಿಸಿದೆ ಎಂದು ಕೇಂದ್ರ ಗೃಹ ಇಲಾಖೆ ರಾಜ್ಯ ಮಂತ್ರಿ ಶ್ರೀ ಕೆ.ಸಿ. ಪಂತ್ ಇಂದು ಇಲ್ಲಿ ಹೇಳಿದರು.

ಕೇಂದ್ರ ಮತ್ತು ತಮಿಳುನಾಡು ನಡುವಿನ ಸಂಬಂಧವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಕೇಂದ್ರ,ರಾಜ್ಯಗಳ ಸಂಬಂಧದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಶ್ರೀ ಪಂತ್ ಅವರು, ‘ರಾಜ್ಯಗಳ ನಡುವೆ ತಿಕ್ಕಾಟ ಉದ್ಭವಿಸಲು ಅವಕಾಶ ಕೊಡಬಾರದು, ಹಿಂದೆ ರಾಜ್ಯಗಳಲ್ಲಿ ವಿರೋಧಪಕ್ಷಗಳ ಸರ್ಕಾರವಿದ್ದಾಗಲೂ ಯಾವುದೇ ಗಂಭೀರ ತೊಂದರೆಗಳು ಉದ್ಭವಿಸಿರಲಿಲ್ಲ’ ಎಂದರು.

• **ವಿಶ್ವಾಸವಿಟ್ಟಿರುವ ಜನತೆಗೆ ದ್ರೋಹ ಬಗೆಯುವ ಭಯ ವೀರೇಂದ್ರರಿಗೆ ಬೇಡ– ಮುಖ್ಯಮಂತ್ರಿ ಅರಸು**

ಬೆಂಗಳೂರು, ಏ. 25– ‘ಜನತೆ ನನ್ನಲ್ಲಿಟ್ಟಿರುವ ವಿಶ್ವಾಸಕ್ಕೆ ದ್ರೋಹ ಬಗೆಯುತ್ತೇನೆಂಬ ಭಯ ಶ್ರೀ ವೀರೇಂದ್ರ ಪಾಟೀಲರಿಗೆ ಬೇಡ’ ಎಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಸ್ಪಷ್ಟಪಡಿಸಿದ್ದಾರೆ.

ಕೃಷ್ಣಾ ನೀರು ಹಂಚಿಕೆ ವಿವಾದವನ್ನು ಸಂಧಾನದ ಮೂಲಕ ಇತ್ಯರ್ಥ ಮಾಡುವುದನ್ನು ವಿರೋಧಿಸಿ ಪಾಟೀಲರು ಹೇಳಿದ ಮಾತುಗಳಿಗೆ ಉತ್ತರಿಸಿರುವ ಮುಖ್ಯಮಂತ್ರಿ, ಈ ಕ್ಲಿಷ್ಟ ಸಮಸ್ಯೆಯ ಬಗ್ಗೆ ಪಾಟೀಲರು ವಿವಾದ ಎಬ್ಬಿಸಬಾರದಾಗಿತ್ತು ಎಂದಿದ್ದಾರೆ.

ಜ್ಞಾನದಿಂದ ಶಾಂತಿ– ಸಮಾಧಾನ, ಅದರ ಒಲುಮೆಯಿಂದ ಮುತ್ಸದ್ದಿತನ

ಅಂತಃಕಲಹ, ಅಂತಃಸಾಕ್ಷಿ, ಅಭಿವ್ಯಕ್ತಿ



ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ದ್ವೇಷಾಸೂಯೆಗಳು ಇಂದು ಮುಗಿಲು ಮುಟ್ಟುತ್ತಿವೆ. ಪರಸ್ಪರ ಪ್ರೀತ್ಯಾದರಗಳು ಅಧಿಕ ಆಗಬೇಕಾಗಿರುವ ಸಂದರ್ಭದಲ್ಲಿ ರಾಗ– ದ್ವೇಷಗಳು ನುಸುಳುತ್ತ, ಸಮಾಜ ಹಾಗೂ ಸಂಸ್ಥೆಗಳ ಶಾಂತಿಯನ್ನು ಕದಡುತ್ತಿವೆ. ಇಂತಹ ಸ್ಥಿತಿಗೆ ಯಾವ ಕ್ಷೇತ್ರವೂ ಹೊರತಲ್ಲ. ಎಲ್ಲ ಕ್ಷೇತ್ರಗಳಲ್ಲೂ ರಾಗ– ದ್ವೇಷ ಆವರಿಸಿಕೊಂಡಿದೆ.

ಮತೀಯ ಹಾಗೂ ಜಾತೀಯ ಸಂಘರ್ಷಗಳು ಹೆಚ್ಚುತ್ತಿರುವುದು ಉತ್ತಮ ಬೆಳವಣಿಗೆ ಅಲ್ಲ ಎಂಬುದು ಸರ್ವರಿಗೂ ತಿಳಿದಿರುವ ಸಂಗತಿ. ಹಾಗಾದರೆ ವೈಯಕ್ತಿಕ ಹಾಗೂ ಸಾಮಾಜಿಕ ಅಶಾಂತಿಗೆ ಕಾರಣವೇನು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ.

ಮೊದಲ ಕಾರಣವೆಂದರೆ, ಅನವಶ್ಯಕವಾದ ಟೀಕೆ-ಟಿಪ್ಪಣಿಗಳು, ಆರೋಪ- ಪ್ರತ್ಯಾರೋಪಗಳು, ಕೆಸರೆರಚುವ ಆಟದಲ್ಲಿ ಮಗ್ನರಾಗಿರುವುದು, ವಿವೇಚನೆ ಇಲ್ಲದೆ ಅಭಿವ್ಯಕ್ತಿಸುವುದು. ಸ್ವಾತಂತ್ರ್ಯವು ಸರ್ವರಿಗೂ ಇದೆ. ಅಭಿವ್ಯಕ್ತಿಸುವ ಮುನ್ನ ಸಾಧಕ- ಬಾಧಕ ಅರಿತು ಅದನ್ನು ವ್ಯಕ್ತಪಡಿಸಬೇಕಾಗುತ್ತದೆ. ನೂರು ಸಾರಿ ಆಲೋಚಿಸಿ ಪ್ರತಿಪಾದನೆ ಮಾಡುವುದರಿಂದ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಬಹುದು.

ಸರ್ವಜನಾಂಗದಲ್ಲೂ ಪ್ರತಿಭಾನ್ವಿತರು- ಮೇಧಾವಿಗಳು ಇರುತ್ತಾರೆ. ಅವರು ಸಮಾಜದ ಸೊತ್ತು- ಸಂಪತ್ತು. ಮೇಧಾವಿತನ ಅಥವಾ ಮುತ್ಸದ್ದಿತನ ಸುಮ್ಮನೆ ಬರುವುದಿಲ್ಲ. ಅದಕ್ಕೆ ಅಪಾರ ಅಧ್ಯಯನಬಲ, ಅಧ್ಯಾತ್ಮಬಲ ಮತ್ತು ಅನುಭವಬಲ ಬೇಕು. ಈ ಮೂರನ್ನು ಯಾರು ತಮ್ಮ ಬದುಕಿನಲ್ಲಿ ಸಿದ್ಧಿಸಿಕೊಂಡಿರುತ್ತಾರೋ ಅಂಥವರಿಂದ ಸಮಾಜದ ಆರೋಗ್ಯ ಕಾಪಾಡಲ್ಪಡುತ್ತದೆ.

ಹೆಚ್ಚು ಮಾತನಾಡುವುದರಿಂದ ಸಾಮಾಜಿಕ ಆರೋಗ್ಯ ಸುಧಾರಿಸುತ್ತದೆ ಎಂಬುದು ಭ್ರಮೆ. ಈ ಭ್ರಮೆಯಿಂದ ಹೊರಬರಲು ಯತ್ನಿಸಬೇಕು. ಆಗಲೇ ಆ ವ್ಯಕ್ತಿಯು ಮುತ್ಸದ್ದಿ ಅನ್ನಿಸಿಕೊಳ್ಳುವುದು. ಹುಂಬತನವು ಸಮಸ್ಯೆಯನ್ನು ಸೃಷ್ಟಿಸಿದರೆ, ಮುತ್ಸದ್ದಿತನವು ಸಮಸ್ಯೆಯನ್ನು ನಿಯಂತ್ರಿಸುತ್ತದೆ. ಆಗಾಗ ಮೌನಕ್ಕೆ ಒಳಗಾಗುತ್ತ, ಪ್ರಾರ್ಥನೆ ನೆರವೇರಿಸುತ್ತ ಮುತ್ಸದ್ದಿ ರಾಜಕಾರಣ ಮಾಡಿದವರಲ್ಲಿ ರಾಷ್ಟ್ರಪಿತ ಗಾಂಧೀಜಿ ಒಬ್ಬರು. ಅವರು ಅಷ್ಟೇನೂ ಪರಿಣಾಮಕಾರಿ ಭಾಷಣಕಾರರಲ್ಲ ಎಂಬುದು ಗೊತ್ತಿರುವ ಸಂಗತಿ. ಆದರೆ ಅದರಿಂದ ಅವರು ಯಾವ ಬಗೆಯ ಕೀಳರಿಮೆಗೂ ಒಳಗಾಗುತ್ತಿರಲಿಲ್ಲ. ಸಂದರ್ಭಕ್ಕೆ ಬೇಕಾದಷ್ಟು ಮಾತ್ರ ಮಾತುಕತೆ. ಅನವಶ್ಯಕವಾಗಿ ಮಾತನಾಡುವ ಪ್ರಮೇಯವಿಲ್ಲ. ಮಾತು ಮಿತ, ಸಾಧನೆ ಅಮಿತ. ರಾಷ್ಟ್ರವನ್ನು ಮುನ್ನಡೆಸುವ ಶಕ್ತಿ ಅವರಲ್ಲಿತ್ತು.


ಕೆಲವರ ಆಕರ್ಷಣೆ ಮಾತುಗಾರಿಕೆಯಾದರೆ ಮತ್ತೆ ಕೆಲವರ ಆಕರ್ಷಣೆ ಮೌನ. ಗಾಂಧೀಜಿ ಬಹುತೇಕ ಮೌನಾಚರಣೆಗೆ ಒಳಗಾಗುತ್ತಿದ್ದರು. ಕೆಲವರಿಗೆ ಮೌನದ ಮಹತ್ವ ಗೊತ್ತಾಗುವುದಿಲ್ಲ. ಅಂಥವರು ಸದಾ ಬಡಬಡಿಸುತ್ತಿರುತ್ತಾರೆ. ಗಾಂಧೀಜಿಗೆ ಮೌನವು ಸಿದ್ಧಿಸಿತ್ತು.

ಮಾತನಾಡಿ ಮಾಡದಿರುವುದಕ್ಕಿಂತ, ಮಾತನಾಡದೆ ಮಾಡುವ ವಿಧಾನ ಹೆಚ್ಚು ಪರಿಣಾಮಕಾರಿ. ಅಂಥವರಲ್ಲಿ ಅಥಣಿ ಮುರುಘೇಂದ್ರ ಶಿವಯೋಗಿಗಳು ಒಬ್ಬರು. ಅವರೊಬ್ಬ ತ್ಯಾಗಿ, ವಿರಾಗಿ. ಅವರ ತಪಃಪ್ರಭಾವ ಅಗಾಧವಾಗಿತ್ತು. ಸೈದ್ಧಾಂತಿಕವಾಗಿ ಅವರು ಬಸವತತ್ವ ಪಾಲಿಸಿದರು, ಭಾವನಾತ್ಮಕವಾಗಿ ಶಿವತತ್ವವನ್ನು ಅನುಸರಿಸಿದರು. ಮೌನವಾಗಿ ಬಸವತತ್ವ ಅನುಸರಿಸಿದರು. ನೂರಾರು ಸಾಧಕರನ್ನು ಆಶೀರ್ವದಿಸಿದರು. ಅವರಲ್ಲಿ ಚಿತ್ರದುರ್ಗದ ಜಯದೇವ ಶ್ರೀಗಳು, ಜಯವಿಭವ ಸ್ವಾಮಿಗಳು, ಮಲ್ಲಿಕಾರ್ಜುನ ಶ್ರೀಗಳು, ವಾಗೀಶ ಪಂಡಿತಾರಾಧ್ಯರು, ಮೃತ್ಯುಂಜಯಪ್ಪಗಳು, ಹಳ್ಯಾಳದ ಸ್ವಾಮಿಗಳು ಮೊದಲಾದವರು ಸೇರಿದ್ದಾರೆ.

ಹರ್ಡೇಕರ್ ಮಂಜಪ್ಪನವರು ದೇವದಾಸಿ ಪುತ್ರರಾಗಿದ್ದು, ಅವರಿಗೆ ಶಿವಯೋಗಿಗಳು ಇಷ್ಟಲಿಂಗ ದೀಕ್ಷೆಯನ್ನು ಅನುಗ್ರಹಿಸುತ್ತಾರೆ. ದೀಕ್ಷೆ ಪಡೆದಂತಹ ಮಂಜಪ್ಪನವರು ಮೃತ್ಯುಂಜಯಪ್ಪಗಳೊಡಗೂಡಿ ದಾವಣಗೆರೆಯಲ್ಲಿ 111 ವರ್ಷಗಳ ಹಿಂದೆ ‘ಬಸವ ಜಯಂತಿ’ ಪ್ರಾರಂಭಿಸುತ್ತಾರೆ. ಬಸವತತ್ವ ಅನುಷ್ಠಾನದಲ್ಲಿ ಮೌನಕ್ರಾಂತಿ ಮಾಡಿದ ಶಿವಯೋಗಿಗಳು ಪೂಜನೀಯರು, ಮಾರ್ಗದರ್ಶಕರು. ನಡೆ- ನುಡಿಯಲ್ಲಿ ಸಿದ್ಧಹಸ್ತರು.

ಶಿವಯೋಗಿಗಳನ್ನು ಕಾಣಬೇಕೆಂದು ಬಾಲಗಂಗಾಧರ ತಿಲಕರು ಅಥಣಿ ಗಚ್ಚಿನಮಠಕ್ಕೆ ಬರುತ್ತಾರೆ. ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಶಿವಯೋಗಿಗಳು ಅವರನ್ನು ಅಷ್ಟೇ ಅಂತಃಕರಣದಿಂದ ಬರಮಾಡಿಕೊಳ್ಳುತ್ತಾರೆ. ತಿಲಕರು- ದೇಶವು ಬ್ರಿಟಿಷರ ಅಧೀನದಲ್ಲಿದ್ದು, ಗುಲಾಮಗಿರಿಯನ್ನು ಅನುಭವಿಸುತ್ತಿದೆ. ಗಾಂಧೀಜಿ, ಪಟೇಲ್, ಬೋಸ್ ಮುಂತಾದವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಿದ್ದು, ಅದರಲ್ಲಿ ಯಶಸ್ಸು ಸಿಗುವಂತೆ ಆಶೀರ್ವದಿಸಬೇಕೆಂದು ವಿನಂತಿಸಿಕೊಳ್ಳುತ್ತಾರೆ.

ಶಿವಯೋಗಿಗಳು ಒಂದುಕ್ಷಣ ಆಲೋಚಿಸುತ್ತ- ದೇಶಕ್ಕೆ ಸ್ವಾತಂತ್ರ್ಯ ದೊರಕುತ್ತದೆ. ಸ್ವಾತಂತ್ರ್ಯವನ್ನು ನೋಡುವ ಅವಕಾಶವು ನಿ(ನ)ಮಗೆ ದೊರೆಯುವುದಿಲ್ಲ ಎನ್ನುತ್ತಾರೆ. ಆಗ ತಿಲಕರು, ನಾ(ನೀ)ವು ಅದನ್ನು ಅನುಭವಿಸದಿದ್ದರೂ ತೊಂದರೆಯಿಲ್ಲ, ಮುಂದಿನ ಪೀಳಿಗೆಯಾದರೂ ಅದನ್ನು ಅನುಭವಿಸುವಂತೆ ಆಗಲೆಂದು ಕೇಳಿಕೊಳ್ಳುತ್ತಾರೆ. ಅರವಿಂದ ಘೋಷ್, ಪರಮಹಂಸ, ವಿವೇಕಾನಂದರಷ್ಟೇ ಶಿವಯೋಗಿಗಳು ಮಹಾನ್ ಸಾಧಕರಾಗಿದ್ದರು, ತ್ರಿಕಾಲಜ್ಞಾನಿಗಳಾಗಿದ್ದರು. ಅವರ ಆಶೀರ್ವಾದದಂತೆ ಭಾರತವು ಸ್ವಾತಂತ್ರ್ಯ ಪಡೆಯುತ್ತದೆ. ತಿಲಕರು 1920ರಲ್ಲಿ ನಿಧನರಾಗುತ್ತಾರೆ. 1921ರಲ್ಲಿ ಮುರುಘೇಂದ್ರ ಶಿವಯೋಗಿಗಳು ಲಿಂಗೈಕ್ಯರಾಗುತ್ತಾರೆ.



ಶಿವಯೋಗಿಗಳಿಗೆ ಪಂಚಪುರುಷಗಳು ಸಿದ್ಧಿಸಿದ್ದವು. ಅವೆಂದರೆ ವಾಕ್‌ಪುರುಷ, ನೇತ್ರಪುರುಷ, ಹಸ್ತಪುರುಷ, ಪಾದಪುರುಷ ಮತ್ತು ನಡೆಪುರುಷ. ಆ ದಿನಗಳಲ್ಲಿ ವಾಹನದ ಅನುಕೂಲ ಇರುತ್ತಿರಲಿಲ್ಲ. ಅಥಣಿಯಿಂದ ಹೊರಗಡೆ ಕಮಾನು ಬಂಡಿಯಲ್ಲಿ ಪ್ರಯಾಣಿಸುತ್ತಿದ್ದರು. ಅದರಲ್ಲೂ ಬಸವ ಪುರಾಣ ಕೇಳುವಲ್ಲಿ ಎಲ್ಲಿಲ್ಲದ ಉತ್ಸುಕತೆ. ಮಠ ಬಿಟ್ಟು ಎಲ್ಲಿಯೂ ಹೋಗದಿರುವಾಗ, ಬಸವ ಪುರಾಣ ಎಂದಾಕ್ಷಣ ಒಪ್ಪುತ್ತಿದ್ದರು. ಜನರಾದರೂ ಬಸವ ಪುರಾಣ ಏರ್ಪಡಿಸಿ, ತಿಂಗಳಾನುಗಟ್ಟಲೆ ನಡೆಸಿ, ಅದರ ಮಂಗಲೋತ್ಸವಕ್ಕೆ ಶಿವಯೋಗಿಗಳನ್ನು ಬರಮಾಡಿಕೊಳ್ಳುತ್ತಿದ್ದರು.

ಮುರುಘೇಂದ್ರ ಶಿವಯೋಗಿಗಳು ನುಡಿಪ್ರಿಯರಲ್ಲ, ನಡೆ ಧೀರರು. ಗಚ್ಚಿನಮಠದಲ್ಲಿ ಬಸವ ಪುರಾಣ ನಡೆಯುತ್ತಿದ್ದರೂ ರಾತ್ರಿ 8 ಗಂಟೆ ಆಗುತ್ತಲೆ ಶಿವಪೂಜೆಗೆ ಎದ್ದುಹೋಗುತ್ತಿದ್ದರು. ವೇದಿಕೆಯಲ್ಲಿ ಆಶೀರ್ವಚನ ನೀಡಿದವರಲ್ಲ. ನುಡಿಯಿಂದ ದೂರ, ನಡೆಗೆ ಹತ್ತಿರ. ಅವರ ನುಡಿಗಳು ಕೇವಲ ನುಡಿಗಳಲ್ಲ, ಲಿಂಗದ ನುಡಿಗಳು.

ಮಠದಲ್ಲಿ ಮೊಕ್ಕಾಂ ಇದ್ದಾಗ್ಯೂ ಅವರು ಇದ್ದಾರೆ ಎಂಬುದು ಅವರಾಡುವ ಮಾತುಗಳಿಂದ ಗೊತ್ತಾಗುತ್ತಿರಲಿಲ್ಲ. ಅವರ ದೈನಂದಿನ ಶಿವಪೂಜೆ, ಮಧ್ಯಾಹ್ನ ಒಂದು ಗಂಟೆಯ ವಚನ ಪಾರಾಯಣ (ಅನುಸಂಧಾನ) ಇತ್ಯಾದಿಗಳಿಂದ ಅವರ ಇರುವಿಕೆಯನ್ನು ತಿಳಿಯಬಹುದಾಗಿತ್ತು. ಯಾರಾದರೂ ಭೇಟಿಗೆ ಬಂದರೆ ಅಷ್ಟೇ ಮಿತವಾಗಿ, ತಿಳಿಯಾಗಿ, ಹೃದಯಪೂರ್ವಕವಾಗಿ ಮಾತನಾಡುವ ವಿಧಾನವನ್ನು ರೂಢಿಸಿಕೊಂಡಿರುತ್ತಾರೆ. ಬಸವಣ್ಣನವರ ವಚನ-

ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಪಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲಸಂಗಮದೇವನೆಂತೊಲಿವನಯ್ಯಾ?

ಲಿಂಗಮೆಚ್ಚಿ ಅನ್ನುವುದರ ಜತೆಗೆ ಅಂತಃಸಾಕ್ಷಿ ಒಪ್ಪುವಂತೆ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಮಾತುಗಳು ಅಂತಃಸಾಕ್ಷಿ ಮೂಲಕ ಹೊರಬಂದಾಗ ಯಾವ ಗೊಂದಲವಿಲ್ಲ. ಹಾಗೆ ಬರದ ಮಾತುಗಳು ಅಂತಃಕಲಹ ಸೃಷ್ಟಿಸುತ್ತವೆ. ಕಲಹ ಸಾಕು, ಶಾಂತಿ ಬೇಕು. ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯಲ್ಲಿ ಮೌನವು ಇನ್ನಿಲ್ಲದ ಪಾತ್ರ ವಹಿಸುತ್ತದೆ. ಧ್ಯಾನಯುಕ್ತ ಮೌನ. ಮೌನದಿಂದ ಜ್ಞಾನ. ಜ್ಞಾನದಿಂದ ಶಾಂತಿ- ಸಮಾಧಾನ. ಇವುಗಳ ಒಲುಮೆಯಿಂದಾಗಿ ಮುತ್ಸದ್ದಿತನ. ಮುತ್ಸದ್ದಿ ರಾಜಕಾರಣ ಎಲ್ಲ ಕಾಲಕ್ಕೂ ಆದರ್ಶ, ಅನುಕರಣೀಯ.

ಮಾತೇ ಬೇಡವೆಂದವರು ಸಮಾಜದಲ್ಲಿ ಶಿವಯೋಗಿಗಳು ಎಂಬ ಅಭಿಧಾನಕ್ಕೆ ಪಾತ್ರರಾಗುತ್ತಾರೆ. ಮಿತಭಾಷಿಗಳು ಮತ್ತು ಸತ್ಯ ಪರಿಪಾಲಕರು ಜಗತ್ತಿನಲ್ಲಿ ಇತಿಹಾಸ ಸೃಷ್ಟಿಸುತ್ತಾರೆ. ಮುರುಘೇಂದ್ರ ಶಿವಯೋಗಿಗಳು ಲಿಂಗೈಕ್ಯರಾಗಿ ನೂರು ವರ್ಷ ತುಂಬುತ್ತಿದೆ. ಶತಮಾನೋತ್ಸವ ಆಚರಣೆಗೆ ಸಕಲ ಸಿದ್ಧತೆ ನಡೆಯುತ್ತಿದೆ. ಮೇ 21ರಿಂದ 24ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಅಲ್ಲಿನ ಚರಮೂರ್ತಿಗಳಾದ ಶಿವಬಸವ ಸ್ವಾಮಿಗಳೊಟ್ಟಿಗೆ ಮಹೋತ್ಸವ ಸಮಿತಿಯವರು ಆಯೋಜಿಸುತ್ತಿದ್ದಾರೆ.

ಚುರುಮುರಿ



ಪೇಜಿಎಫ್!

• ಲಿಂಗರಾಜು ಡಿ.ಎಸ್.

‘ಇನ್ನಿಲ್ಲಂಗೆ ಬಡಕಂಡೆ, ಅವೇಗ್ಳ ನನ ಮಕ್ಕಳಾ, ಒಂದು ಮಠ ಮಾಡಮು ಒಳ್ಳೆ ಯೇಗ ಇರ್ತದೆ ಅಂತ. ಯಾರೂ ನನ್ನ ಮಾತೇ ಕೇಳ್ಲಿಲ್ಲ’ ಅಂದ್ರು ತುರೇಮಣೆ. ನನಗೆ ರೋಸೋಯ್ತು.

‘ಈ ಗಾಳಿಗಂಟ್ಲು ನನ ಮಗ ಅದೇನು ಕಿತ್ತಾಕ್ಯಾನಂತೆ?’ ಯಂಟಪ್ಪಣ್ಣ ಕೇಳಿತು.

‘ನಮ್ಮ ಯಂಟಪ್ಪಣ್ಣನ ತ್ವಾಟಕ್ಕೆ ಹುಕ್ಕೆ ಹೊಡಿಯೋರು ಸಿಕ್ಕದೆ ನೆಲ ಬೀಳು ಬಿದ್ದೋಗ್ಯದೆ. ಅದೇ ಜಮೀನಲ್ಲಿ ಆಸ್ರಮ ಮಾಡಿ ಯಂಟಪ್ಪಣ್ಣನ್ನೇ ಸ್ವಾಮಿ ಮಾಡಮು, ಏನಂತೀಯ?’ ಅಂತ ಕೇಳಿದ್ರು.

‘ಅಲ್ಲ ಸಾ, ಪಾಪದ ಯಂಟಪ್ಪಣ್ಣನ್ನ ಬಾಳಗೆಡಸಬಕು ಅಂತಿದೀರಾ? ಈಗ ನಿಮ್ಮ ಪ್ಲಾನೇನು?’ ಅಂದು ವಿಚಾರಿಸಿದೆ.

‘ನೋಡ್ಲಾ, ಮಠ ಅಂದ್ರೆ ಹರಕಾಣಿಕೆ-ಚರಗಾಣಿಕೆ ಅಂತ ಭಕ್ತರು ಕಾಸು- ಕರೆಮಣಿ ಕೊಡ್ತರೆ? ಸರ್ಕಾರದ ಗ್ರಾಂಟೂ ಸಿಕ್ತದೆ’ ಅಂದ್ರು.

‘ಗ್ರಾಂಟು ಬೇಕಾದ್ರೆ ಸ್ವಾಮಿಗಳೂ ಈಗ 30 ಪರ್ಸೆಂಟು ಕಮೀಸನ್ ಪೀಕಬೇಕಂತೆ! ‘ರಸೀದಿ ಇದ್ರೆ ಕೊಡಿ’ ಅಂದದ್ದೆ ಬಸಣ್ಣ, ಲಂಚ ತಕ್ಕಂಡೋನು ಪೇಟಿಎಂ ಮಾಡಿಸಿಗ್ಯಂಡು ರಸೀದಿ ಕೊಟ್ಟಾನ?’ ಅಂತಂದೆ.

‘ಲಂಚವೋ ಪರ್ಸೆಂಟೇಜೋ ಕಮೀಶನ್ನೋ ಏನೋ ಒಂದು. ಹ್ಯಂಗಾದ್ರೂ ತಗಂಡಮ್ಯಾಲೆ 30 ಪರ್ಸೆಂಟು ಪೇಜಿಎಫ್ ಅಂತ ಕಟ್ಟಿದ್ರೆ ಅಲಾಯಿದವಾದ ಕಾಸು ಖಾ-ನೂನುಬದ್ಧ ಆಯ್ತದೆ ಅಂದ್ರ ಚಂದ್ರು! ನಾವೂ ಗ್ರಾಂಟು ತಗಂಡು ಪೇಜಿಎಫ್ ಟ್ಯಾಕ್ಸು ಕಟ್ಟಬುಡನ!’ ಅಂದ್ರು ತುರೇಮಣೆ.

‘ಪೇಜಿಎಫ್ ಅಂದ್ರೇನು ಸಾ?’ ಅಂತ ಕೇಳಿದೆ.

‘ಲೋ ಕಕವಾ, ಪೇಜಿಎಫ್ ಅಂದ್ರೆ ಪೇ ಗೋಲ್‌ಮಾಲ್ ಫಂಡ್ಸ್ ಅಂತ ಕನೋ! ಸರ್ಕಾರ ಫಂಡು ದುಡ್ನ ‘ಕರ್ನಾಟಕದ ಮಾದರಿ’ ಅಂತ ಭ್ರಷ್ಟಾಚಾರ ಬಲಿ ಹಾಕಕೆ ಬಳಸಿಕ್ಯತದಂತೆ’ ತುರೇಮಣೆ ವಿವರಿಸಿದರು.

‘ಈ ಅಪಾಪೋಲಿ ನನ ಮಗನ ತೀರು ನೋಡಿರ್ಲ! ಉಗೀರ್ಲಾ ಮಕ್ಕೆ! ಇಂತೇ ಚಲ್ಲುಮಾತಲ್ಲೇ ಕಾಲ ಕಳೆದುಬುಟ್ಟ!’ ಅಂತ ಯಂಟಪ್ಪಣ್ಣ ಕೈಗೆ ಹಳೇ ಮೆಟ್ಟು ತಗಂಡೇಟಿಗೆ ತುರೇಮಣೆ ಪರಾರಿಯಾದರು.

ಚರ್ಚೆ

ಸೀಮಿತ ಆಯ್ಕೆ: ಗ್ರಾಹಕರಿಗೆ ಮಾರಕ

ವ್ಯಾಪಾರಕ್ಕೆ ದಶಕಗಳ ಹಿಂದೆಯೇ ದೇಶದ ಗಡಿ ಮುಕ್ತವಾಗಿಸಿದ ನಮಗೆ, ಇಂದು ನಮ್ಮದೇ ಬೀದಿಯ ವ್ಯಾಪಾರಿಗಳಿಗೆ ಮುಕ್ತ ಅವಕಾಶ ಕಲ್ಪಿಸಲು ಆಗದಿರುವುದು ಏನನ್ನು ಸೂಚಿಸುತ್ತದೆ?

• ಎಚ್.ಕೆ.ಶರತ್

ಗುಣಮಟ್ಟ ಮತ್ತು ಕಡಿಮೆ ಬೆಲೆ... ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಅಸ್ತಿತ್ವ ಕಂಡುಕೊಳ್ಳಲು ಬಯಸುವ ಯಾವುದೇ ಉದ್ದಿಮೆ ಸಂಸ್ಥೆ ತನ್ನ ಗಮನ ಕೇಂದ್ರೀಕರಿಸಬೇಕಿರುವುದು ಈ ಎರಡು ಅಂಶಗಳ ಮೇಲಲ್ಲವೇ? ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಕ್ಕೆ ದೇಶದ ಆರ್ಥಿಕತೆಯನ್ನು ಮುಕ್ತವಾಗಿಸಿದ ನಂತರ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡಿರುವ ಬಹುತೇಕ ಎಲ್ಲರೂ ಗ್ರಾಹಕರನ್ನು ತಮ್ಮೆಡೆಗೆ ಸೆಳೆಯಲು ಪರಿಗಣಿಸುತ್ತಿರುವ ಎರಡು ಮುಖ್ಯ ಸಂಗತಿಗಳು ಇವೇ ಅಲ್ಲವೇ?

ಮಾರುಕಟ್ಟೆಯಲ್ಲಿನ ತೀವ್ರ ಸ್ಪರ್ಧೆಯಿಂದಾಗಿ, ಉತ್ಪನ್ನಗಳ ಖರೀದಿಗೆ ಮುಂದಾಗುವ ಗ್ರಾಹಕನ ಎದುರು ಬಹಳಷ್ಟು ಆಯ್ಕೆಗಳಿವೆ. ಗ್ರಾಹಕನ ಆಯ್ಕೆಯನ್ನು ಅಂತಿಮವಾಗಿ ಪ್ರಭಾವಿಸುವುದು ಕೂಡ ಗುಣಮಟ್ಟ ಮತ್ತು ಕಡಿಮೆ ಬೆಲೆಯೇ ಎಂಬುದನ್ನು ಅರಿಯಲು ಹೆಚ್ಚೇನೂ ತಿಣುಕಾಡಬೇಕಿಲ್ಲ.

ದೇಶದ ಆರ್ಥಿಕತೆಯು ಉದಾರೀಕರಣಕ್ಕೆ ತೆರೆದುಕೊಳ್ಳುವ ಮುನ್ನ ಗ್ರಾಹಕರ ಎದುರು ಇದ್ದದ್ದು ಸೀಮಿತ ಆಯ್ಕೆಗಳು ಮಾತ್ರ. ಆದರೆ ಇಂದು ದೂರಸಂಪರ್ಕ ಕ್ಷೇತ್ರ ಹೊರತುಪಡಿಸಿ ಉಳಿದ ಸೇವೆ ಮತ್ತು ಉತ್ಪನ್ನಗಳನ್ನು ಪೂರೈಸಲು ಮಾರುಕಟ್ಟೆಯಲ್ಲಿ ತೀವ್ರ ಪೈಪೋಟಿ ಇದೆ. ಈ ಪೈಪೋಟಿಯು ಬೆಲೆ ಸಮರಕ್ಕೂ ತಿರುಗಿ, ಗ್ರಾಹಕನಿಗೆ ಕಡಿಮೆ ಬೆಲೆಗೆ ಗುಣಮಟ್ಟದ ಉತ್ಪನ್ನ ಕೊಂಡುಕೊಳ್ಳುವ ಅವಕಾಶ ಒದಗುವುದೂ ಇದೆ.

ಈ ನಡುವೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ದೊಡ್ಡ ಬ್ರ್ಯಾಂಡ್‌ಗಳ ಜೊತೆ ಸೆಣಸಲಾಗದೆ ಸಣ್ಣಪುಟ್ಟ ವ್ಯಾಪಾರಸ್ಥರು ತತ್ತರಿಸುತ್ತಿರುವುದು ಕೂಡ ವಾಸ್ತವ. ಆದರೂ, ಗ್ರಾಹಕರ ಚಿತ್ತ ಕಡಿಮೆ ಬೆಲೆಗೆ ಗುಣಮಟ್ಟದ ಉತ್ಪನ್ನ ಲಭ್ಯವಿರುವತ್ತಲೇ ವಾಲುತ್ತಿರುವುದು ಸಹಜವೆ.

ಮುಕ್ತ ಮಾರುಕಟ್ಟೆಯ ನಿರೀಕ್ಷೆ ಮತ್ತು ನಿಯಮಗಳಿಗೆ ಅನುಗುಣವಾಗಿ ಮೂರು ದಶಕಗಳಿಂದ ಕಟ್ಟಿಕೊಂಡಿರುವ ಈ ಮಾರುವ- ಕೊಳ್ಳುವ ವ್ಯವಸ್ಥೆಯಲ್ಲಿ ಇತ್ತೀಚೆಗೆ ಇಣುಕತೊಡಗಿರುವ ಧರ್ಮಸೂಕ್ಷ್ಮದ ಪ್ರಜ್ಞೆ ಹೆಚ್ಚು ದಿನ ತನ್ನ ಅಸ್ತಿತ್ವ ಕಂಡುಕೊಳ್ಳಲು ಸಾಧ್ಯವೇ? ಧರ್ಮದ ಕಾರಣಕ್ಕೆ ಇವ ನಮ್ಮವನೆಂದು ಭಾವಿಸಿ ಗ್ರಾಹಕನೊಬ್ಬ ಮಾರುಕಟ್ಟೆಯಲ್ಲಿ ತನ್ನೆದುರು ಇರುವ ಆಯ್ಕೆಗಳನ್ನು ನಿರ್ಲಕ್ಷಿಸಬಹುದೇ? ಗುಣಮಟ್ಟ ಮತ್ತು ಕಡಿಮೆ ಬೆಲೆ ಎಂಬ ಸಹಜ ಆಕರ್ಷಣೆಗಳ ಜೊತೆಗೆ ಧರ್ಮವೂ ಕೂಡಿಕೊಂಡರೆ ಇದು ಹೇಗೋ ಮುಂದುವರಿಯಬಹುದೇ ವಿನಾ, ಅಂತಿಮವಾಗಿ ಮಾರುಕಟ್ಟೆಯಲ್ಲಿ ಸೆಣಸಲು ಯಾರೇ ಆದರೂ ಮೊರೆ ಹೋಗಬೇಕಿರುವುದು ಗುಣಮಟ್ಟ ಮತ್ತು ಕಡಿಮೆ ಬೆಲೆ ಎಂಬ ಸೂತ್ರಕ್ಕಲ್ಲವೇ?

ಇತ್ತೀಚೆಗೆ ಬಹಳಷ್ಟು ವಿವಾದ ಸೃಷ್ಟಿಸಿದ ಹಲಾಲ್ ಮತ್ತು ಜಟ್ಕಾ ಕಟ್ ನಿದರ್ಶನವನ್ನೇ ಪರಿಗಣಿಸಿದರೆ, ಮುಸ್ಲಿಮರಿಗೆ ಅವರ ಧಾರ್ಮಿಕ ನಂಬಿಕೆಗಳ ಕಾರಣಕ್ಕೆ ಹಲಾಲ್ ಕಟ್ ಕೂಡ ಮಾಂಸದ ಖರೀದಿಗೆ ಇರುವ ಪ್ರಮುಖ ಮಾನದಂಡವಾದರೆ, ಉಳಿದ ಮಾಂಸಪ್ರಿಯರಿಗೆ ಅಂತಹ ಯಾವುದೇ ಧಾರ್ಮಿಕ ಅಡೆತಡೆಗಳು ಇಲ್ಲದಿರುವುದರಿಂದ ಅವರ ಆಯ್ಕೆಯನ್ನು ಪ್ರಭಾವಿಸುವ ಅಂಶಗಳು ಗುಣಮಟ್ಟ ಮತ್ತು ಕಡಿಮೆ ಬೆಲೆಯೇ. ಸದ್ಯದ ಸಾಮಾಜಿಕ ಸನ್ನಿವೇಶ ಸೃಷ್ಟಿಸುವ ಪ್ರಚೋದನೆಗೆ ಒಳಗಾಗಿ ಈ ಎರಡು ಅಂಶಗಳನ್ನು ಬದಿಗಿರಿಸಿ ಆಯ್ಕೆ ಮಾಡಿಕೊಂಡರೂ, ಅದು ಗ್ರಾಹಕನನ್ನು ಎಲ್ಲಿಯವರೆಗೂ ಪ್ರಭಾವಿಸಬಲ್ಲದು?

ಗ್ರಾಹಕನಿಗೆ ಗುಣಮಟ್ಟದ ಮಾಂಸ ಪೂರೈಸುತ್ತ, ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿರುವ ವ್ಯಾಪಾರಿಗಳೆಡೆಗೆ ಗ್ರಾಹಕರು ಮುಗಿಬೀಳುವುದು ಮುಕ್ತ ಮಾರುಕಟ್ಟೆಯ ಸೂತ್ರದ ಪ್ರಕಾರ ಸಹಜವಲ್ಲವೇ? ಇದನ್ನು ಮುರಿಯಲು ಹೊರಡುವುದರಿಂದ ಕೊನೆಗೂ ನಷ್ಟವಾಗುವುದು ಗ್ರಾಹಕನಿಗಲ್ಲವೇ? ತನ್ನೆದುರು ಇರುವ ಆಯ್ಕೆಗಳು ಸೀಮಿತಗೊಂಡಷ್ಟೂ ಕತ್ತರಿ ಬೀಳುವುದು ಗ್ರಾಹಕನ ಜೇಬಿಗೆ ತಾನೆ? ಇದರೊಂದಿಗೆ ಗುಣಮಟ್ಟದೊಂದಿಗೂ ರಾಜಿಯಾಗಬೇಕಾದ ಸನ್ನಿವೇಶ ಸೃಷ್ಟಿಯಾಗಲೂಬಹುದು.



ದೂರಸಂಪರ್ಕ ಕ್ಷೇತ್ರದಲ್ಲಿನ ಕಳೆದ ಆರೇಳು ವರ್ಷಗಳ ಬೆಳವಣಿಗೆಗಳನ್ನು ಗಮನಿಸಿದರೆ ಇದು ಮನದಟ್ಟಾಗಲಿದೆ. ಸ್ಪರ್ಧಾತ್ಮಕ ಮಾರುಕಟ್ಟೆಯ ಬೆಳವಣಿಗೆಗೆ ಅಗತ್ಯವಿರುವ ನೀತಿ ನಿಯಮಗಳನ್ನು ರೂಪಿಸಿ, ಅಲ್ಲಿ ಸೆಣಸಲು ಸಿದ್ಧರಿರುವ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಬೇಕಿರುವುದು ಆಳುವವರ ಹೊಣೆಗಾರಿಕೆ. ಇದರ ಬದಲು ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಲು ಹೊರಟರೆ ಎಲ್ಲವೂ ಅಯೋಮಯವಾಗಲು ಹೆಚ್ಚು ಸಮಯವೇನೂ ಬೇಕಾಗುವುದಿಲ್ಲ.

ಕಾನೂನು- ಸುವ್ಯವಸ್ಥೆ ಕಾಪಾಡುವ ತನ್ನ ಮೂಲಭೂತ ಹೊಣೆಗಾರಿಕೆಯಿಂದ ಸರ್ಕಾರ ನುಣುಚಿಕೊಂಡರೆ, ಅದು ಉದ್ದಿಮೆ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಾರದೇ? ಧರ್ಮರಕ್ಷಕರೆಂದು ತಮ್ಮನ್ನು ಕರೆದುಕೊಳ್ಳುವ ಕೆಲ ವ್ಯಕ್ತಿಗಳಿಗೆ ಮಾರುಕಟ್ಟೆ ನಿಯಂತ್ರಿಸಲು ಬಿಟ್ಟರೆ, ಮುಕ್ತ ಮಾರುಕಟ್ಟೆಯ ಸೂತ್ರ ಪಾಲಿಸಲು ಸಾಧ್ಯವೇ? ವ್ಯಾಪಾರಕ್ಕಾಗಿ ಮೂರು ದಶಕಗಳ ಹಿಂದೆಯೇ ದೇಶದ ಗಡಿಯನ್ನು ಮುಕ್ತವಾಗಿಸಿದ ನಮಗೆ, ಇಂದು ಕ್ಷುಲ್ಲಕ ಕಾರಣಗಳಿಗಾಗಿ ನಮ್ಮದೇ ಬೀದಿಯ ವ್ಯಾಪಾರಿಗಳಿಗೆ ಮುಕ್ತ ಅವಕಾಶ ಕಲ್ಪಿಸುವುದು ಕೂಡ ಸಾಧ್ಯವಾಗದಿರುವುದು ಏನನ್ನು ಸೂಚಿಸುತ್ತದೆ?

ಈ ಅವಿವೇಕದ ನಂಜಿಗೆ ಬಲಿಯಾಗುವುದು ಕೇವಲ ಒಂದು ಸಮುದಾಯದ ವ್ಯಾಪಾರಸ್ಥರಷ್ಟೇ ಅಲ್ಲ, ಅಂತಿಮವಾಗಿ ಗ್ರಾಹಕರಿಗೂ ಇದರ ಬಿಸಿ ತಟ್ಟಲಿದೆ. ತನ್ನೆದುರು ಇರುವ ಆಯ್ಕೆಗಳನ್ನು ಕಡಿತಗೊಳಿಸಲು ಯತ್ನಿಸುವ ಕೆಲವರ ಅಟಾಟೋಪಕ್ಕೆ ಮಣೆ ಹಾಕದಿರುವ ವಿವೇಕವಷ್ಟೇ ಗ್ರಾಹಕರ ಹಿತ ಕಾಯಬಲ್ಲದು.

ವಾಚಕರ ವಾಣಿ

ಚಿತ್ರೋದ್ಯಮದವರೇ ಪ್ರಾಮಾಣಿಕರು...!

ಎಲ್ಲಾ ಉದ್ಯಮದವರಿಗಿಂತ ಚಿತ್ರೋದ್ಯಮದವರೇ ತುಂಬಾ ಪ್ರಾಮಾಣಿಕರು ಎಂದು ನನಗೆ ಇತ್ತೀಚೆಗೆ ಅನ್ನಿಸುತ್ತಿದೆ. ಚಿತ್ರವೊಂದು ಬಿಡುಗಡೆಯಾಗುತ್ತಿದ್ದಂತೆಯೇ ‘ಇಷ್ಟು ಕೋಟಿ ಗಳಿಕೆಯಾಯ್ತು’, ‘ಅಷ್ಟು ಕೋಟಿ ಗಳಿಕೆ ಆಯ್ತು’ ಎಂದು ಎದೆತಟ್ಟಿ ಕೂಗಿ ಹೇಳುತ್ತಾರೆ. ಬಿಡುಗಡೆಯಾದ ಪ್ರತಿದಿನವೂ ‘ಇಷ್ಟಿಷ್ಟು ಕೋಟಿ ಬಾಚಿದ್ದೇವೆ’ ಎಂದು ಬೊಂಬಡ ಬಜಾಯಿಸುತ್ತಾರೆ... ಎಲ್ಲ ಉದ್ಯಮದವರೂ ಹೀಗೇ ಆದರೆ ಆದಾಯ ತೆರಿಗೆ ಇಲಾಖೆಯವರು ಎಷ್ಟೊಂದು ನೆಮ್ಮದಿಯಾಗಿ ಇರಬಹುದು ಅಲ್ಲವೇ?

ಜೆ.ಬಿ.ಮಂಜುನಾಥ, ಪಾಂಡವಪುರ

ಮರುಪರೀಕ್ಷೆ ನಡೆಸಿ, ಗೌರವ ಕಾಪಾಡಿ

ಸರ್ಕಾರಿ ಹುದ್ದೆಗಳಿಗೆ ಇತ್ತೀಚೆಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ಅಕ್ರಮಗಳ ಮಾಹಿತಿಯು ಇಡೀ ವ್ಯವಸ್ಥೆಯ ಬಗ್ಗೆ ಹೇಸಿಗೆ ತರಿಸುವಂತಿದೆ. ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಳೆದ ತಿಂಗಳು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯು ಅತ್ಯಂತ ಕಳಪೆಮಟ್ಟದ್ದಾಗಿತ್ತು. ಪ್ರತಿಭಾವಂತ ಅಭ್ಯರ್ಥಿಗಳು ಆಯ್ಕೆಯಾಗಬೇಕೆಂದು ಪರೀಕ್ಷೆ ನಡೆಸಿದಂತೆ ಇರಲಿಲ್ಲ.

ಪ್ರಶ್ನೆಗಳು ಕನಿಷ್ಠಪಕ್ಷ ಕೆ-ಸೆಟ್, ನೆಟ್ ಮಟ್ಟದಲ್ಲಿ ಇದ್ದಿದ್ದರೂ ವಿಷಯಜ್ಞಾನ ಹೊಂದಿದ ಉತ್ತಮ ಅಭ್ಯರ್ಥಿಗಳು ಆಯ್ಕೆಯಾಗುವ ಅವಕಾಶ ಹೆಚ್ಚಾಗಿರುತ್ತಿತ್ತು. ಇಂತಹ ಕಳಪೆಮಟ್ಟದ ಪರೀಕ್ಷಾ ವಿಧಾನದಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳು ಎಂತಹ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುತ್ತಾರೋ ಎಂಬುದನ್ನು ಊಹಿಸಿದರೆ ಭಯವಾಗುತ್ತದೆ. 2016ರಲ್ಲಿ ಪ್ರಾಧಿಕಾರ ನಡೆಸಿದ ನೇಮಕಾತಿ ಉತ್ತಮ ಮಟ್ಟದ್ದಾಗಿತ್ತು. ಆಯ್ಕೆಯಾಗದ ಅಭ್ಯರ್ಥಿಗಳಿಗೂ ಒಳ್ಳೆಯ ಪರೀಕ್ಷೆ ಬರೆದ ಅನುಭವವಾಗಿತ್ತು. ಆದರೆ ಪ್ರಸ್ತುತ ನಡೆದ ಸ್ಪರ್ಧಾತ್ಮಕ ಪರೀಕ್ಷೆಯ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಗಮನಹರಿಸಿ, ಮರುಪರೀಕ್ಷೆ ನಡೆಸುವ ಮೂಲಕ ಪ್ರಾಧಿಕಾರದ ಗೌರವವನ್ನು ಕಾಪಾಡಬೇಕು. ಅಲ್ಲದೆ, ವ್ಯವಸ್ಥೆಯ ಬಗ್ಗೆ ಜನರಲ್ಲಿ ಭರವಸೆ ಮೂಡಿಸುವ ಕೆಲಸ ತುರ್ತಾಗಿ ನಡೆಯಬೇಕಿದೆ.

ಭಾನುಪ್ರಕಾಶ್, ಬೆಂಗಳೂರು

ನೈತಿಕ ಶಿಕ್ಷಣ: ನಿರಾಕರಣೆ ಸಲ್ಲ

ಶಾಲೆಯಲ್ಲಿ ನೀತಿ ಪಾಠ ಅಳವಡಿಸಲು ಸರ್ಕಾರ ಚಿಂತನೆ ನಡೆಸಿರುವ ಕುರಿತು ‘ನೀತಿ: ಯಾರಿಂದ ಯಾರು ಕಲಿಯಬೇಕು?’ ಎಂಬ ಅಬ್ದುಲ್ ರೆಹಮಾನ್ ಪಾಷ ಅವರ ಲೇಖನವನ್ನು (ಸಂಗತ, ಪ್ರ.ವಾ., ಏ. 23) ಓದಿದೆ. ಸರಿ, ಆದರೆ ಹಾಗೆಂದು ನಮ್ಮ ಶಾಲೆಗಳಲ್ಲಿ ನೈತಿಕ ಶಿಕ್ಷಣ ನೀಡುವ ನೈತಿಕ ಹಕ್ಕು ಸರ್ಕಾರಕ್ಕೆ ಇಲ್ಲವೆಂದು ಭಾವಿಸಿ, ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವುದನ್ನೇ ನಿರಾಕರಿಸುವುದು ಸರಿಯಲ್ಲ. ಸರ್ಕಾರ ಭ್ರಷ್ಟವಾಗಿರುವುದು ನಿಜ. ಆದರೆ ಶಾಲೆಯಲ್ಲಿ ಕಲಿಯುತ್ತಿರುವ ಭಾವಿ ಪ್ರಜೆಗಳು ನಮ್ಮ ಮಕ್ಕಳೇ ಅಲ್ಲವೆ?! ಅವರಿಗೆ ನೈತಿಕ ಶಿಕ್ಷಣ ನೀಡಿ ಉತ್ತಮ ಪ್ರಜೆಗಳನ್ನಾಗಿಸುವ ಹೊಣೆ ನಮ್ಮ ಶಾಲೆಗಳ ಮೇಲಿದೆ. ಆದ್ದರಿಂದ ನಮ್ಮ ಜನಪದ ಕಥೆಗಳು, ಪರಿಸರ ಸಂರಕ್ಷಣಾ ಮಾಹಿತಿ ನೀಡುವ ಕಥೆಗಳು, ದೇಶಭಕ್ತರ ಕಥೆಗಳನ್ನು ಒಳಗೊಂಡ ನೈತಿಕ ಶಿಕ್ಷಣದ ಅಗತ್ಯ ಇಂದು ತುರ್ತಾಗಿ ಆಗಬೇಕಿದೆ.

ನಮ್ಮ ಸಂವಿಧಾನದ ಜಾತ್ಯತೀತ ಮೌಲ್ಯವನ್ನು ಕಡ್ಡಾಯವಾಗಿ ಕಲಿಸಬೇಕಾದ ಅಗತ್ಯವೂ ಇದೆ. ಸರ್ಕಾರ ನೈತಿಕ ಶಿಕ್ಷಣ ನೀಡಲು ಮುಂದಾಗಿರುವಾಗ ಈ ಥರದ ಪಠ್ಯವನ್ನು ರೂಪಿಸಬೇಕು. ಅದರಿಂದ ಮಾತ್ರ ನಮ್ಮ ಭವಿಷ್ಯವನ್ನು ನಾವು ಉಜ್ವಲಗೊಳಿಸಬಹುದು.

ಹುರುಕಡ್ಲಿಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸರ್ವಸಮ್ಮತ ಹೆಸರಿರಲಿ

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರಿಡುವ ನಿರ್ಧಾರವನ್ನು ಕೈಬಿಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಪತ್ರ ಬರೆದಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 25). ಇದಕ್ಕಾಗಿ ಯಡಿಯೂರಪ್ಪ ಅಭಿನಂದನಾರ್ಹರು. ರಸ್ತೆಗಳು, ಬಸ್ ನಿಲ್ದಾಣಗಳು, ರೈಲ್ವೆ ಮತ್ತು ವಿಮಾನ ನಿಲ್ದಾಣಗಳು, ಹೊಸ ಬಡಾವಣೆಗಳಂತಹ ಸಾರ್ವಜನಿಕ ಸ್ಥಳಗಳಿಗೆ ಹೆಸರಿಡುವಾಗ ಸರ್ಕಾರ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಜಾತಿ, ಧರ್ಮ, ಪಕ್ಷ, ಪಂಗಡ, ಪಂಥ- ಇವೆಲ್ಲವುಗಳ ಆಚೆ ನಿಂತು ಸಮಾಜಮುಖಿಯಾಗಿ ಬದುಕಿದ ಸಾರ್ಥಕ ಜೀವಿಗಳು ಇಂಥ ಸ್ಥಳಗಳ ಹೆಸರಿಗೆ ಅತ್ಯಂತ ಸೂಕ್ತರು. ಶಿವಮೊಗ್ಗ ಜಿಲ್ಲೆ ಈ ಬಗೆಯ ಬಹಳಷ್ಟು ಪುಣ್ಯಜೀವಿಗಳಿಗೆ ಜನ್ಮ ನೀಡಿದೆ. ಅಂಥವರ ಹೆಸರನ್ನು ಪಟ್ಟಿ ಮಾಡಿ, ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಬಿಟ್ಟು, ಅದರ ಆಧಾರದ ಮೇಲೆ ಅಂತಿಮ ತೀರ್ಮಾನ ಕೈಗೊಳ್ಳುವುದು ಸೂಕ್ತ.

ಸರ್ಕಾರ, ಪಕ್ಷ, ಮುಖ್ಯಮಂತ್ರಿ ಇವೆಲ್ಲವೂ ತಾತ್ಕಾಲಿಕ ವ್ಯವಸ್ಥೆಗಳು. ಆದರೆ ಸರ್ಕಾರ ಇಡುವ ಹೆಸರು ಶಾಶ್ವತ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಪನಂಥ ಶ್ರೇಷ್ಠ ಕವಿಗೆ ಆಶ್ರಯ ನೀಡಿದ ಕಾರಣಕ್ಕೆ ಸಾಮಂತ ರಾಜನಾದ ಅರಿಕೇಸರಿ ತಾನೂ ಶ್ರೇಷ್ಠನಾಗಿ ಉಳಿದಂತೆ, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಶಾಶ್ವತ ಹೆಸರು ಇಡುವುದರ ಮೂಲಕ ಈ ತಾತ್ಕಾಲಿಕ ಸರ್ಕಾರವೂ ಶಾಶ್ವತವಾಗಿ ಉಳಿಯುವ ಅವಕಾಶವಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಯಾರಿಗೆ ಶಿಕ್ಷೆ ಆಗಬೇಕು?

ಎಷ್ಟೇ ಅರ್ಹತೆ ಇದ್ದರೂ ಎಷ್ಟೇ ಪ್ರಯತ್ನಪಟ್ಟರೂ ‘ಹಣ ನೀಡಿದರೆ ಮಾತ್ರ ಹುದ್ದೆ’ ಅನ್ನುವ ಪರಿಸ್ಥಿತಿಯನ್ನು ತಂದಿಟ್ಟಿರುವ, ವ್ಯವಸ್ಥೆಯಲ್ಲಿ ಇದ್ದುಕೊಂಡು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿರುವ ಭ್ರಷ್ಟಾಚಾರಿ ಭಿಕ್ಷುಕರಿಗೆ ಶಿಕ್ಷೆ ಆಗುವುದರ ಜೊತೆಗೆ ಅವರ ಮಕ್ಕಳಿಗೂ ಶೈಕ್ಷಣಿಕ ಅನರ್ಹತೆಯಂತಹ ಶಿಕ್ಷೆ ಘೋಷಣೆ ಆಗಬೇಕು. ಆಗಮಾತ್ರ ಇನ್ನೊಬ್ಬರ ಮಕ್ಕಳ ಭವಿಷ್ಯದ ಜತೆ ಆಟ ಆಡುವುದರ ಪರಿಣಾಮ ಅವರಿಗೆ ತಿಳಿಯುತ್ತದೆ.

ದುಡ್ಡು ನೀಡಿದರೆ ಮಾತ್ರ ಹುದ್ದೆ ಸಿಗುತ್ತದೆ ಎನ್ನುವ ವಿಷಯ ತಿಳಿದು, ಬದುಕಿಗಾಗಿ ಮಾಡಿಟ್ಟ ಜಾಗವನ್ನು ಮಗನ ಭವಿಷ್ಯದ ಸಲುವಾಗಿ ಮಾರಿಯೋ ಮಗಳ ಮದುವೆಗೆ ಮಾಡಿಟ್ಟ ಒಡವೆ ಮಾರಿಯೋ ತಂದೆತಾಯಿ ಹೇಗೋ ಹಣವನ್ನು ಹೊಂದಿಸುತ್ತಾರೆ. ಇಂತಹ ದುಃಸ್ಥಿತಿಯನ್ನು ತಂದಿಟ್ಟವರಿಗೆ ಶಿಕ್ಷೆಯಾಗಬೇಕೋ ಅಥವಾ ಇದ್ದುದೆಲ್ಲವನ್ನೂ ಕಳೆದುಕೊಂಡು ಹುದ್ದೆಯೂ ಸಿಗದ ಅಭ್ಯರ್ಥಿಗೆ ಹಾಗೂ ಅವನಿಗೆ ಸಹಕರಿಸಿದ ತಂದೆ ತಾಯಿಗೆ ಶಿಕ್ಷೆ ಆಗಬೇಕೋ?! ಇನ್ನೊಂದೆಡೆ, ತಮ್ಮ ಮಕ್ಕಳಿಗೆ ಆ ಹುದ್ದೆ ಪಡೆಯುವ ಅರ್ಹತೆ ಇಲ್ಲದಿದ್ದರೂ ಅವರನ್ನು ಅಧಿಕಾರದಲ್ಲಿ ಮೆರೆಸುವ ಸಲುವಾಗಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುವ ವ್ಯಕ್ತಿಗಳಿಗೆ ಎಂತಹ ಶಿಕ್ಷೆ ಆಗಬೇಕು?

ರೇಖಾ ನಾಯಕ್, ಅಂಕೋಲಾ, ಉತ್ತರ ಕನ್ನಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಸಾರ ಹಕ್ಕು ಮಾರಾಟದಿಂದ ₹50 ಸಾವಿರ ಕೋಟಿ ಆದಾಯ ನಿರೀಕ್ಷೆ

ಅಕ್ಷಯಪಾತ್ರೆ ಐಪಿಎಲ್



● ಗಿರೀಶ ದೊಡ್ಡಮನಿ

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಅಗಾಧವಾಗಿ ಬೆಳೆಯುತ್ತಲೇ ಇದೆ. ಮುಟ್ಟಿದ್ದೆಲ್ಲವೂ ಚಿನ್ನ ಎಂಬಂತಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಆದಾಯ ಆಗಸಮುಖಿಯಾಗುತ್ತಿದೆ.

ಮುಂದಿನ ವರ್ಷದಿಂದ ಆರಂಭವಾಗುವ ಐದು ವರ್ಷಗಳ ಮಾಧ್ಯಮ ಪ್ರಸಾರ ಹಕ್ಕು ಮಾರಾಟದಿಂದ ಆದಾಯದ ಮೇಲೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಣ್ಣು ನೆಟ್ಟಿದೆ. ₹50 ಸಾವಿರ ಕೋಟಿ ಆದಾಯದ ನಿರೀಕ್ಷೆಯಲ್ಲಿದೆ. ಇದು ಹಿಂದೆಂದಿಗಿಂತಲೂ ಹೆಚ್ಚು. ಹೈಜಂಪ್‌ನಲ್ಲಿ ಒಂದೊಂದೇ ಜಿಗಿತದ ನಂತರ ಸರಳಿನ ಎತ್ತರವನ್ನು ಇಷ್ಟಿಷ್ಟೇ ಏರಿಸಿಕೊಂಡು ಹೋಗುವ ಮಾದರಿಯಲ್ಲಿ ಐಪಿಎಲ್ ಪ್ರಸಾರ ಹಕ್ಕು ಮಾರಾಟದ ದೊರೆಯುವ ವರಮಾನವೂ ಜಿಗಿತ ಕಂಡಿದೆ.

‘ಸುಪ್ರಸಿದ್ಧವಾದ ನಾಟಕ, ಸುಂದರವಾದ ಬ್ಯಾಲೆ, ಒಪೆರಾ ಮತ್ತು ನೃತ್ಯದ ಹಾಗೆಯೇ ಕ್ರಿಕೆಟ್ ಕೂಡ ಅಗ್ರಮಾನ್ಯ ನಾಟಕವಾಗಿದೆ. ಮನರಂಜನೆ ಕಣಜ ಇದು’ ಎಂದು ಲೇಖಕ ಸಿ.ಎಲ್.ಆರ್. ಜೇಮ್ಸ್ ಆರು ದಶಕಗಳ ಹಿಂದೆ ಹೇಳಿದ್ದರು. ಅವರ ಆ ಮಾತು ಐಪಿಎಲ್‌ಗೆ ಅಕ್ಷರಶಃ ಸಲ್ಲುತ್ತದೆ.

2008ರಲ್ಲಿ ಆರಂಭವಾದ ಈ ಟೂರ್ನಿ ಈಗ ಕಾರ್ಪೊರೇಟ್ ಸಂಸ್ಥೆಗಳಿಗೆ ಅತ್ಯಂತ ಪ್ರಿಯವಾದ ಮಾಧ್ಯಮ. ಮಕ್ಕಳು ದೊಡ್ಡವರೆಲ್ಲರನ್ನೂ ಆಕರ್ಷಿಸುವ ಕೋಟಿ ಕೋಟಿ ಜನರನ್ನು ಒಂದೂವರೆ ತಿಂಗಳು ಸೆಳೆದಿರಿಸಿಕೊಳ್ಳುವ ದೊಡ್ಡ ಹಂಗಾಮವಾಗಿ ಐಪಿಎಲ್ ಬೆಳೆದಿದೆ. ಈ ಹಂಗಾಮವನ್ನು ಆದಾಯವಾಗಿ ಪರಿವರ್ತಿಸಿಕೊಳ್ಳುವ ಚಾಣಾಕ್ಷತನವೂ ಬಿಸಿಸಿಐಗೆ ಇದೆ. ಇದರಿಂದಾಗಿಯೇ ಜಗತ್ತಿನ ಶ್ರೀಮಂತ ಕ್ರೀಡಾ ಸಂಸ್ಥೆಗಳಲ್ಲಿ ಒಂದಾಗಿದೆ. ಕೊರೊನಾ ಕಾಲಘಟ್ಟದಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾದ ಕ್ರಿಕೆಟ್ ಸಂಸ್ಥೆಗಳು ಆರ್ಥಿಕ ಮುಗ್ಗಟ್ಟಿನಿಂದ ಪರದಾಡಿದ್ದವು. ಆದರೆ, ಬಿಸಿಸಿಐಗೆ ಬರುವ ಆದಾಯದಲ್ಲಿ ಒಂದಿಷ್ಟು ಖೋತಾ ಆಗಿದ್ದು ಬಿಟ್ಟರೆ, ನಷ್ಟವೇನೂ ಆಗಿರಲಿಲ್ಲ. 2023ರಿಂದ 2027ರ ಅವಧಿಯ ಮಾಧ್ಯಮ ಪ್ರಸಾರದ ಹಕ್ಕು ಮಾರಾಟಕ್ಕೆ ಬಿಸಿಸಿಐ ಬಿಡ್ ಆಹ್ವಾನಿಸಿದೆ. ಸ್ಟಾರ್ ಸ್ಪೋರ್ಟ್ಸ್, ಸೋನಿ, ರಿಲಯನ್ಸ್ ಸಮೂಹ, ಅಮೆಜಾನ್ ಪ್ರೈಮ್ ಸಂಸ್ಥೆಗಳು ಪ್ರಸಾರ ಹಕ್ಕು ಪಡೆದುಕೊಳ್ಳಲು ಪೈಪೋಟಿಗಿಳಿದಿವೆ.

2008-09	2017
₹8,200 ಕೋಟಿ	₹16,200 ಕೋಟಿ
ಸೋನಿ ಪಿಕ್ಚರ್ಸ್ (10 ವರ್ಷ)	ಸ್ಟಾರ್ ಸ್ಪೋರ್ಟ್ಸ್ (5 ವರ್ಷ)

ಟೈಟಲ್ ಪ್ರಾಯೋಜಕತ್ವ

ಪ್ರಾಯೋಜಕರು	ಅವಧಿ	ಆದಾಯ (ವಾರ್ಷಿಕ ₹ ಕೋಟಿಗಳಲ್ಲಿ)
ಡಿಎಲ್‌ಎಫ್	2008-12	40
ಪೆಪ್ಸಿ	2013-2015	79.4
ವಿವೊ	2016-17	100
ವಿವೊ	2018-2019	439.8
ಡ್ರೀಮ್ ಇಲೆವನ್	2020	222
ವಿವೊ	2021	439.8
ಟಾಟಾ	2022-2023	498

ದುಪ್ಪಟ್ಟು ಬಿಡ್



ಕಳೆದ ಬಾರಿ ಸ್ಟಾರ್ ಇಂಡಿಯಾ ಪಡೆದ ಬಿಡ್‌ಗಿಂತಲೂ ಈ ಬಾರಿ ದುಪ್ಪಟ್ಟು ಮೊತ್ತದ (₹**33,000** ಕೋಟಿ) ಮೂಲಬೆಲೆಯನ್ನು ನಿಗದಿ ಮಾಡಲಾಗಿದೆ ಎಂದು ಬಿಸಿಸಿಐ ಖಜಾಂಚಿ ಅರುಣ ಧುಮಾಲ್ ಮಾಹಿತಿ ನೀಡಿದ್ದಾರೆ.

- ಪ್ಯಾಕೇಜ್ ಎ (ಭಾರತ ಉಪಖಂಡದ ಟಿ.ವಿ ಪ್ರಸಾರ ಹಕ್ಕುಗಳು) : ಪಂದ್ಯವೊಂದಕ್ಕೆ ₹**49** ಕೋಟಿ
- ಪ್ಯಾಕೇಜ್ ಬಿ (ಭಾರತ ಉಪಖಂಡದ ಡಿಜಿಟಲ್ ಹಕ್ಕುಗಳು) : ಪಂದ್ಯವೊಂದಕ್ಕೆ ₹**33** ಕೋಟಿ
- ಪ್ಯಾಕೇಜ್ ಸಿ (ನಾನ್ ಎಕ್ಸ್‌ಕ್ಲೂಸಿವ್ ಡಿಜಿಟಲ್ ಹಕ್ಕುಗಳು) : ₹**16** ಕೋಟಿ
- ಪ್ಯಾಕೇಜ್ ಡಿ (ಜಗತ್ತಿನ ಇತರ ಭಾಗದ ಟಿ.ವಿ ಪ್ರಸಾರ ಮತ್ತು ಡಿಜಿಟಲ್ ಹಕ್ಕುಗಳು) : ಪ್ರತಿ ಪಂದ್ಯಕ್ಕೆ ₹ **3** ಕೋಟಿ
- ಇವು ಬಿಸಿಸಿಐ ನಿಗದಿ ಮಾಡಿದ ಮೂಲಬೆಲೆ

‘ನಾವು ಮೌಲ್ಯದ ಕುರಿತು ಲೆಕ್ಕಾಚಾರ ಅಥವಾ ಆದಾಯದ ಗುರಿಯನ್ನು ಹೊಂದಿಲ್ಲ. ಅದನ್ನು ಮಾರುಕಟ್ಟೆ ನಿರ್ಧರಿಸುತ್ತದೆ. ಪಾರದರ್ಶಕ, ನ್ಯಾಯಯುತ ಮತ್ತು ಎಲ್ಲರನ್ನೂ ಒಳಗೊಳ್ಳುವಿಕೆಯ ಟೆಂಡರ್ ಆಹ್ವಾನಿಸುವುದಷ್ಟೇ ನಮ್ಮ ಕರ್ತವ್ಯ’ ಎಂದು ಧುಮಾಲ್ ಹೇಳಿದ್ದಾರೆ.

ಬಿಡ್‌ಗೆ ಸಂಬಂಧಿಸಿದ ಅರ್ಜಿ ದಾಖಲೆಗಳನ್ನು ಪಡೆಯಲು ₹ 25 ಲಕ್ಷ ಶುಲ್ಕ ಪಾವತಿಸಬೇಕು.

ಜೂನ್ 12ಕ್ಕೆ ಹಕ್ಕುಗಳು ಯಾರಿಗೆ ಸಿಗಲಿವೆ ಎಂಬುದು ನಿರ್ಧಾರವಾಗಲಿದೆ.

ಕ್ರಿಕೆಟ್-ಮಾಧ್ಯಮ ಸಂಬಂಧ: ಕ್ರಿಕೆಟ್ ಬೆಳವಣಿಗೆಯಲ್ಲಿ ಮಾಧ್ಯಮಗಳ ಪಾತ್ರ ಬಹುದೊಡ್ಡದು. ಇಂಗ್ಲೆಂಡ್‌ನಲ್ಲಿ ಜನಿಸಿದ ಈ ಕ್ರೀಡೆಯ ಜನಪ್ರಿಯತೆಗೆ ಇಂಗ್ಲಿಷ್ ಬರಹಗಾರರ ಕಾಣಿಕೆ ದೊಡ್ಡದು. ನೆವಿಲ್ ಕಾರ್ಡಸ್, ಸಿ.ಎಲ್.ಆರ್. ಜೇಮ್ಸ್ ಮತ್ತಿತರ ಲೇಖಕರ ಬರಹಗಳು ಕ್ರಿಕೆಟ್‌ನ ಸೌಂದರ್ಯಕ್ಕೆ ನಿದರ್ಶನಗಳಾಗಿವೆ. ಟಿ.ವಿ ಬಂದ ಮೇಲೆ ಕ್ರಿಕೆಟ್ ಮತ್ತು ಮಾಧ್ಯಮ ಬಾಂಧವ್ಯ ಮತ್ತಷ್ಟು ನಿಕಟವಾಯಿತು. ಆದರೆ, ಕ್ರಿಕೆಟ್ ಜೊತೆಗೆ ಉಳಿದ ಕ್ರೀಡೆಗಳನ್ನೂ ಅಪಾರವಾಗಿ ಪ್ರೀತಿಸುವ ಯುರೋಪಿಗಿಂತ ಭಾರತದಲ್ಲಿ ಈ ಸಂಬಂಧ ಇನ್ನೂ ಗಾಢವಾಯಿತು.

ಕಪಿಲ್ ದೇವ್ ಬಳಗವು 1983ರಲ್ಲಿ ಏಕದಿನ ವಿಶ್ವಕಪ್ ಜಯಿಸಿದ ನಂತರ ಕ್ರಿಕೆಟ್ ಮಗ್ಗಲು ಬದಲಾಯಿಸಿತು. ಭಾರತದಲ್ಲಿ ಕ್ರಿಕೆಟ್ ಅಭಿಮಾನಿಗಳ ಸಂಖ್ಯೆ ಕೋಟಿಗಳ ಲೆಕ್ಕದಲ್ಲಿ ಏರಿಕೆಯಾಯಿತು. ಕಪಿಲ್ ಪ್ರಭಾವ ಬಿರುಗಾಳಿಯಂತೆ ಬೀಸಿತು. ಗಲ್ಲಿ ಕ್ರಿಕೆಟ್ ಆರಂಭವಾದವು. ಕ್ರಿಕೆಟ್ ವೀಕ್ಷಿಸಲು ಮನೆಗೊಂದು ಟಿ.ವಿ ತರಲೇಬೇಕು ಎಂಬ ಮನೋಭಾವ ದೇಶದ ಮಧ್ಯಮವರ್ಗದಲ್ಲಿ ಆರಂಭವಾಯಿತು. 1990ರ ದಶಕದಲ್ಲಿ ಸಚಿನ್ ತೆಂಡೂಲ್ಕರ್ ಎಂಬ ಎಳೆಯ ಪ್ರತಿಭೆಯ ಉದಯ ಕ್ರಿಕೆಟ್ ಜನಪ್ರಿಯತೆಯನ್ನು ಮತ್ತಷ್ಟು ಉತ್ತುಂಗಕ್ಕೇರಿಸಿತು. ಅಲ್ಲಿಯವರೆಗೆ ವೀಕ್ಷಕ ವಿವರಣೆಗಾಗಿ ಕಿವಿ ಕಚ್ಚಿಕೊಂಡಿದ್ದ ಪಾಕೆಟ್ ರೇಡಿಯೊಗಳು ಮೆಲ್ಲಗೆ ಸ್ಥಾನ ಕಳೆದುಕೊಳ್ಳತೊಡಗಿದವು. ದೂರದರ್ಶನ ವಾಹಿನಿ (ಆಗ ಇದ್ದಿದ್ದು ಅದೊಂದೇ ವಾಹಿನಿ) ಮನೆ ಮತ್ತು ಮನಸ್ಸುಗಳಿಗೆ ಹತ್ತಿರವಾಯಿತು. ಆಗ, ಅತ್ಯಂತ ಜನಪ್ರಿಯವಾಗಿದ್ದ ರಾಮಾಯಣ ಮತ್ತು ಮಹಾಭಾರತ ಧಾರಾವಾಹಿಗಳಿಗಿಂತಲೂ ಕ್ರಿಕೆಟ್‌ಗೇ ಹೆಚ್ಚಿನ ಜನಪ್ರಿಯತೆ ಇತ್ತು. ಟಿ.ವಿ ಸೆಟ್‌ಗಳನ್ನು ಮಾರಾಟ ಮಾಡಲು ಎಲೆಕ್ಟ್ರಾನಿಕ್ ಅಂಗಡಿಗಳು, ಕಂಪೆನಿಗಳು ಕ್ರಿಕೆಟ್ ಆಟವನ್ನೇ ನೆಚ್ಚಿಕೊಂಡವು. ತಮ್ಮ ಮಳಿಗೆಗಳ ಮುಂದೆ ದೊಡ್ಡ ಗಾಜಿನ ಪೆಟ್ಟಿಗೆಗಳಲ್ಲಿ ಹತ್ತಾರು ಟಿ.ವಿಗಳನ್ನು ಇಟ್ಟು ಕ್ರಿಕೆಟ್ ಪಂದ್ಯದ ನೇರಪ್ರಸಾರ ತೋರಿಸಲಾಗುತ್ತಿತ್ತು. ಅವುಗಳ ಮುಂದೆ ನೂರಾರು ಜನರು ಮೈಮರೆತು ನಿಂತು ವೀಕ್ಷಿಸುತ್ತಿದ್ದರು. ಕಿಸೆ ಕಳ್ಳತನವಾದರೂ ಕಾಲು ಸೋತು ಹೋದರೂ ಪ್ರತಿಯೊಂದು ಎಸೆತವನ್ನು ಆನಂದಿಸುವುದನ್ನು ಬಿಡುತ್ತಿರಲಿಲ್ಲ. 1992ರಲ್ಲಿ ಜಾಗತೀಕರಣವೂ ಕ್ರಿಕೆಟ್‌ಗೆ ವರದಾನವಾಯಿತು. ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಕಾಲಿಟ್ಟವು. ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಪ್ರಚಾರ ಮಾಡಲು ಈ ಕಂಪನಿಗಳಿಗೆ ಕ್ರಿಕೆಟ್ ದೊಡ್ಡ ವೇದಿಕೆಯಾಗಿ ದೊರೆಯಿತು.

1999–2000ನೇ ಇಸವಿಯಲ್ಲಿ ಮ್ಯಾಚ್ ಫಿಕ್ಸಿಂಗ್ ಕಳಂಕದಿಂದ ಕ್ರಿಕೆಟ್ ಕಥೆ ಮುಗಿಯಿತು ಎಂದವರು ಬಹಳಷ್ಟು ಜನ. ಆದರೆ ಸೊರಗತೊಡಗಿದ್ದ ಕ್ರಿಕೆಟ್‌ಗೆ ಸೌರವ್ ಗಂಗೂಲಿ, ಸಚಿನ್ ತೆಂಡೂಲ್ಕರ್, ಅನಿಲ್ ಕುಂಬ್ಳೆ, ಶ್ರೀನಾಥ್, ಲಕ್ಷ್ಮಣ್ ಅವರಂತಹ ದಿಗ್ಗಜರು ಜೀವ ತುಂಬಿದರು. ಇದೇ ಹೊತ್ತಿಗೆ ಪ್ರಸಾರಕ್ಕೆ ಸಂಬಂಧಿಸಿ ಉಪಗ್ರಹ ತಂತ್ರಜ್ಞಾನದಲ್ಲಿ ಭಾರಿ ಬದಲಾವಣೆಯೂ ಆಯಿತು. ರೂಪರ್ಟ್ ಮುರ್ಡೊಕ್ ತನ್ನ ಸ್ಟಾರ್ ವಾಹಿನಿಗಳ ಗುಚ್ಛದೊಂದಿಗೆ ಭಾರತಕ್ಕೆ ಕಾಲಿಟ್ಟರು.

ಕ್ರಿಕೆಟ್ ಮಾಧ್ಯಮ ಹಕ್ಕುಗಳಿಗೆ ದೂರದರ್ಶನಕ್ಕೆ ಅದೇ ಮೊದಲಿಗೆ ಪೈಪೋಟಿ ಎದುರಾಯಿತು. ಅದರ ನಂತರದ್ದು ಇತಿಹಾಸ. ಕ್ರಿಕೆಟ್‌ಗಾಗಿಯೇ ಹತ್ತಾರು ವಾಹಿನಿಗಳು ಹುಟ್ಟಿಕೊಂಡವು. ಈಗ, ವಿಶ್ವದ ಮೂಲೆಮೂಲೆಯಲ್ಲಿ ನಡೆಯುವ ಕ್ರಿಕೆಟ್ ಪಂದ್ಯಗಳನ್ನು ದಿನಪೂರ್ತಿ ತೋರಿಸಲಾಗುತ್ತಿದೆ. ಸ್ಟಾರ್ ಕ್ರಿಕೆಟ್, ನಿಯೋ ಕ್ರಿಕೆಟ್, ಇಎಸ್‌ಪಿಎನ್, ಸೋನಿ ಸಿಕ್ಸ್ ಅದರಲ್ಲಿ ಪ್ರಮುಖವಾಗಿವೆ. ಬಿಸಿಸಿಐ ಈ ಎಲ್ಲ ಬೆಳವಣಿಗೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಂಡು ಬೆಳೆಯಿತು.

ಐಪಿಎಲ್ ರಂಗಪ್ರವೇಶವಾದ ಮೇಲಂತೂ ದುಡ್ಡಿನ ಪ್ರವಾಹವೇ ಹರಿದುಬರತೊಡಗಿತು. ಟಿ20 ಕ್ರಿಕೆಟ್‌ನ ಹೊಡಿ ಬಡಿ ಆಟ ಯುವಸಮುದಾಯವನ್ನು ಆಕರ್ಷಿಸಿತು. ಇದು ಟಿ.ವಿ ವಾಹಿನಿಗಳಿಗೆ ವರದಾನವಾಯಿತು. ಮುಸ್ಸಂಜೆಯ ಮನರಂಜನೆಯ ಸಮಯ ಕ್ರಿಕೆಟ್‌ಗೆ ಮೀಸಲಾಯಿತು. ಇದರೊಂದಿಗೆ ಬೇರೆ ಕ್ರೀಡೆಗಳಲ್ಲಿಯೂ ಲೀಗ್ ಪರಂಪರೆ ಆರಂಭವಾಯಿತು.

ಆನ್‌ಲೈನ್ ಯುಗ

ಡಿಜಿಟಲ್ ಕ್ರಾಂತಿಯೂ ಕ್ರಿಕೆಟ್‌ಗೆ ಲಕ್ಷ್ಮೀಕಟಾಕ್ಷವಾಗಿ ಪರಿಣಮಿಸಿದೆ. ಅದರಲ್ಲಿಯೂ ಕಳೆದ ಎರಡು ವರ್ಷ ಕೊರೊನಾ ಕಾಲದಲ್ಲಿ ಡಿಜಿಟಲ್ ವೇದಿಕೆಗಳ ಬಳಕೆ ದುಪ್ಪಟ್ಟು, ಮೂರು ಪಟ್ಟಾಗಿದೆ. ಈ ಅವಕಾಶವನ್ನು ಹಾಟ್‌ಸ್ಟಾರ್ ಆ್ಯಪ್ ಮೂಲಕ ಬಳಸಿಕೊಳ್ಳುವಲ್ಲಿ ಬಿಸಿಸಿಐ ಯಶಸ್ವಿಯಾಯಿತು. ಅಧಿಕೃತ ಪ್ರಸಾರದ ಹಕ್ಕುಗಳು ಈ ಆ್ಯಪ್‌ಗೆ ಇದೆ.

ದಶಕಗಳ ಹಿಂದೆ ಪಾಕೆಟ್ ರೇಡಿಯೊದಲ್ಲಿ ಕಾಮೆಂಟ್ರಿ ಕೇಳುತ್ತಿದ್ದ ಮಾದರಿಯಲ್ಲಿ ಈಗ ಜೇಬಿನಲ್ಲಿ ಟಿವಿಯನ್ನೇ ತೆಗೆದುಕೊಂಡು ಹೋಗುವ ಅವಕಾಶವನ್ನೂ ಈ ಆ್ಯಪ್ ನೀಡಿದೆ. ಆದ್ದರಿಂದ ಡಿಜಿಟಲ್ ವೇದಿಕೆಗಾಗಿಯೇ ಪ್ರತ್ಯೇಕ ಬಿಡ್ ಹಣವನ್ನು ಘೋಷಿಸಿದೆ. ಹಾಗಾಗಿಯೇ ಎಲ್ಲ ಡಿಜಿಟಲ್ ದಿಗ್ಗಜರು ಈಗ ಮುಗಿಬಿದ್ದಿದ್ದಾರೆ. ಟಿ.ವಿಯ ಟಿಆರ್‌ಪಿಗೆ ಈ ವೇದಿಕೆಗಳು ಮೆಲ್ಲಗೆ ಕನ್ನ ಕೊರೆಯುತ್ತಿವೆ. ವೆಬ್‌ಸೈಟ್ ಮತ್ತು ಆ್ಯಪ್‌ಗಳ ಜನಪ್ರಿಯತೆ ಮೆಲ್ಲಗೆ ಏರುತ್ತಿದೆ.

ಕಳೆದವಾರ ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದ ಕೊನೆಯಲ್ಲಿ ಮಹೇಂದ್ರಸಿಂಗ್ ಧೋನಿಯ ಆಟವನ್ನು ಆ್ಯಪ್‌ನಲ್ಲಿ ನೋಡಿದವರ ಸಂಖ್ಯೆ 83 ಲಕ್ಷ ಎಂದು ವೆಬ್‌ಸೈಟ್ ಮಾಹಿತಿ ನೀಡಿದೆ. ಈ ಬಾರಿ ಹತ್ತು ತಂಡಗಳು ಇರುವುದರಿಂದ ಪಂದ್ಯಗಳ ಸಂಖ್ಯೆಯೂ ಹೆಚ್ಚಿದೆ. ಈ ಎಲ್ಲ ಬೆಳವಣಿಗೆಗಳೂ ಮಂಡಳಿಯ ಬೊಕ್ಕಸವನ್ನು ತುಂಬಿಸುತ್ತಿವೆ. ಆಟಗಾರರು ಮತ್ತು ಫ್ರಾಂಚೈಸಿಗಳಿಗೂ ಕೋಟಿ ಕೋಟಿ ಹಣ ಲಭಿಸುತ್ತಿದೆ.





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 104

ಧಾನ್ಯಾರ್ಚನೆ ಫಲಗಳು

ಶಿವನ ಪುಷ್ಪಾರ್ಚನೆ ವಿಧಿಯನ್ನು ಹೇಳುವಾಗ ‘ಜಪಾಕುಸುಮ, ಕರವೀರಪುಷ್ಪಗಳಿಂದ ಶಿವನನ್ನರ್ಚಿಸಿದರೆ ಶತ್ರುಗಳು ನಾಶವಾಗುವರು. ರೋಗ ಪರಿಹಾರವಾಗುವುದು. ಅಗಸೇ ಹೂವಿನಿಂದ ಶಿವನನ್ನರ್ಚಿಸಿದರೆ ವಿಷ್ಣುಪ್ರಿಯನಾಗುವನು. ಶಮೀಪತ್ರಗಳಿಂದ ಅರ್ಚಿಸಿದರೆ ಮುಕ್ತಿಯು ಲಭಿಸುವುದು. ದಾಸವಾಳದಿಂದ ಅರ್ಚಿಸಿದರೆ ಅಲಂಕಾರ ಲಭಿಸುವುದು. ಜಾಜೀಪುಷ್ಪದಿಂದ ಉತ್ತಮವಾದ ವಾಹನಗಳು ಲಭಿಸುವುವು. ಮಲ್ಲಿಗೆಹೂವಿನಿಂದ ಅರ್ಚಿಸಿದರೆ ಉತ್ತಮ ಸ್ತ್ರೀಯು ಲಭಿಸುವಳು. ಯೂಥಿಕಾಕುಸುಮದಿಂದ ಅರ್ಚಿಸಿದರೆ ಸ್ಥಿರವಾದ ಗಾರ್ಹಸ್ಥ್ಯವು ಲಭಿಸುವುದು. ಕರ್ಣಿಕಾರಕುಸುಮಗಳಿಂದ ಶಿವನನ್ನರ್ಚಿಸಿದರೆ ಉತ್ತಮವಾದ ವಸ್ತ್ರಗಳು ಲಭಿಸುವುವು’ ಎಂದು ಬ್ರಹ್ಮನು ವಿವರಿಸುತ್ತಾನೆ.

ನಿರ್ಗುಂಡೀಕುಸುಮಗಳಿಂದ ಶಿವನನ್ನು ಅರ್ಚಿಸಿದರೆ ಮನಶ್ಶುದ್ಧಿಯಾಗುವುದು. ಲಕ್ಷ ಬಿಲ್ವಪತ್ರಗಳಿಂದ ಅರ್ಚಿಸಿದರೆ ಸಕಲ ಇಷ್ಟಾರ್ಥಗಳು ಸಿದ್ಧಿಸುವುವು. ಅಲಂಕಾರವಾದ ಪುಷ್ಪಹಾರಗಳನ್ನು ಅರ್ಪಿಸಿದರೆ ಹೆಚ್ಚಾದ ಸುಖವು ಲಭಿಸುವುದು. ಆಯಾಯ ಋತುಗಳಲ್ಲಿ ಜನಿಸುವ ಪುಷ್ಪಗಳಿಂದ ಅರ್ಚಿಸಿದರೆ ಮುಕ್ತಿಯು ಲಭಿಸುವುದು. ಕಮಲಪುಷ್ಪಗಳಿಂದ ಶಿವನನನ್ನರ್ಚಿಸಿದರೆ ಶತ್ರುನಾಶವಾಗುವುದು. ಕೆಂಡಸಂಪಿಗೆ, ಕೆಂದಗೆ (ತಾಳೆ)ಹೂವುಗಳನ್ನು ಹೊರತು ಮಿಕ್ಕ ಎಲ್ಲಾ ಹೂವುಗಳೂ ಶಿವನಿಗೆ ಪ್ರಿಯವಾದುವು. ಹಾಗೇ ನೋಡಿದರೆ, ಶಿವನಿಗೆ ಪ್ರಿಯವಲ್ಲದುದು ಯಾವುದೂ ಇಲ್ಲ – ಎಂದ ಬ್ರಹ್ಮ, ಪುಷ್ಪಾರ್ಚನೆ ನಂತರ ಧಾನ್ಯಗಳ ಫಲಗಳ ವಿವರವನ್ನು ನೀಡುತ್ತಾನೆ.

‘ಎಲೈ ನಾರದನೇ, ಈಗ ಶಂಕರನ ಪೂಜೆಯಲ್ಲಿ ಯಾವ ಯಾವ ಧಾನ್ಯಗಳು ಪ್ರಶಸ್ತವಾಗಿರುವುದು? ಎಂತೆಂತಹ ಫಲಗಳನ್ನರ್ಪಿಸಬೇಕು? ಅವುಗಳ ಪರಿಮಾಣವೆಷ್ಟು? ಇವೆಲ್ಲವನ್ನೂ ಹೇಳುವೆನು, ಭಕ್ತಿಯಿಂದ ಕೇಳು’ ಎಂದು ಧಾನ್ಯಗಳ ಫಲಗಳನ್ನು ಹೇಳತೊಡಗುತ್ತಾನೆ.

ಶಿವನ ಮೇಲೆ ಭಕ್ತಿಯಿಂದ ಅಕ್ಷತವಾದ ತಂಡುಲವನ್ನು ಅರ್ಪಿಸಿದರೆ ಸಂಪತ್ತು ಅಭಿವೃದ್ಧಿಯಾಗುವುದು. ಆರು ಪ್ರಸ್ಥ (ಬಳ್ಳ) ತಂಡುಲವನ್ನಾಗಲೀ ಎರಡು ಲಕ್ಷ ಪಲ ತುಂಡುಲವನ್ನಾಗಲೀ ಶಿವನ ಮೇಲೆ ಅರ್ಪಿಸಬೇಕು. ಲಿಂಗದಲ್ಲಿ ಪ್ರಧಾನವಾಗಿ ರುದ್ರನನ್ನ ಸುಂದರವಾದ ವಸ್ತ್ರದಿಂದ ಅಲಂಕರಿಸಿ ಅಲ್ಲಿ ಶಿವನಿಗೆ ಅಕ್ಷತ-ತಂಡುಲಗಳನ್ನು ಅರ್ಪಿಸಬೇಕು. ತುಂಡುಲದ ಮೇಲೆ ಬಿಲ್ವಫಲವನ್ನು ಇರಿಸಿ, ಗಂಧ ಪುಷ್ಪ ಧೂಪಗಳಿಂದ ಪೂಜಿಸಿದರೆ ಇಷ್ಟಸಿದ್ಧಿಯಾಗುವುದು.

ಎರಡು ಪ್ರಾಜಾಪತ್ಯ, ಅಂದರೆ ಹದಿನೆಂಟು ಮಾಷಪ್ರಮಾಣ (ಮಾಷವೆಂದರೆ ಎರಡು ಗುಲಗಂಜಿ ತೂಕ) ಬೆಳ್ಳಿಯನ್ನು ಅಥವಾ ತನ್ನ ಶಕ್ತಿಗನುಸಾರವಾದ ಯಾವುದಾದರೂ ದಕ್ಷಿಣೆಯನ್ನು ಪೂಜೆ ಉಪದೇಶಿಸಿದ ಗುರುವಿಗೆ ಕೊಡಬೇಕು. ಹನ್ನೆರಡು ಸುಜನರಿಗೆ ಭೋಜನವನ್ನು ಮಾಡಿಸಬೇಕು. ಹೀಗೆ ಒಂದು ಲಕ್ಷದ ನೂರೆಂಟು ಪೂಜೆಗಳನ್ನು ವಿಧಿವತ್ತಾಗಿ ಮಾಡಿದರೆ ಸಕಲ ಸಿದ್ಧಿಯೂ ಲಭಿಸುವುದು. ಒಂದು ಲಕ್ಷ ಪಲ ಎಳ್ಳನ್ನು ಶಿವನಿಗೆ ಅರ್ಪಿಸಿದರೆ ಮಹಾಪಾಪಗಳು ನಾಶವಾಗುವುವು. ಹನ್ನೊಂದು ಪಲ ಎಳ್ಳನ್ನ ಅರ್ಪಿಸಿದರೆ ಲಕ್ಷ ಪಲಗಳನ್ನು ಅರ್ಪಿಸಿದಂತಾಗುವುದು. ಲಕ್ಷ ಯವಗಳಿಂದ ಶಿವನನ್ನು ಪೂಜಿಸಬೇಕು. ಎಂಟೂವರೆ ಪ್ರಸ್ಥ (ಕೊಳಗ) ಮತ್ತು ಎರಡು ಪಲಗಳ ಅಳತೆಯುಳ್ಳ ಯವಗಳಿಂದ ಪೂಜಿಸಿದರೆ ಲಕ್ಷಪೂಜೆಯಾಗುವುದು. ಈ ಯವಪೂಜೆಯನ್ನು ಮಾಡಿದರೆ ಸ್ವರ್ಗಸುಖವು ಲಭಿಸುವುದು.


ಲಕ್ಷ ಗೋಧಿಯ ಕಾಳುಗಳಿಂದ ಶಿವನನ್ನು ಪೂಜಿಸಿದರೆ ಪ್ರಜಾಭಿವೃದ್ಧಿ ಆಗುವುದು. ಲಕ್ಷ ಹೆಸರುಗಳಿಂದ ಅರ್ಚಿಸಿದರೆ ಸುಖವು ಲಭಿಸುವುದು. ಅರ್ಧದ್ರೋಣವೆಂದರೆ ಒಂದು ಲಕ್ಷ ಗೋಧಿ ಕಾಳುಗಳು. ಏಳೂವರೆ ಪ್ರಸ್ಥ ಮತ್ತು ಎರಡು ಪಲಮುದ್ಗಗಳಿಗೆ ಒಂದು ಲಕ್ಷ ಹೆಸರುಗಳಾಗುವುವು. ಲಕ್ಷ ಪ್ರಿಯಂಗು(ಜೀರಿಗೆ)ಗಳಿಂದ ಶಿವನನ್ನರ್ಚಿಸಿದರೆ ಸಕಲ ಸುಖವೂ ಧರ್ಮಾರ್ಥಕಾಮಗಳೂ ಲಭಿಸುವುವು. ಒಂದು ಪ್ರಸ್ಥ ಪ್ರಿಯಂಗುಗಳಿಗೆ ಒಂದು ಲಕ್ಷ ಸಂಖ್ಯೆಯಾಗುವುದು. ಪೂಜೆಯ ನಂತರ ಹನ್ನೆರಡು ಜನರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಬೇಕು.

ಲಕ್ಷ ಸಾಸಿವೆಗಳಿಂದ ಶಿವನನ್ನರ್ಚಿಸಿದರೆ ಶತ್ರುನಾಶವಾಗುವುದು. ಇಪ್ಪತ್ತು ಪಲ ಸಾಸಿವೆಗಳಿಗೆ ಲಕ್ಷ ಸಾಸಿವೆಗಳಾಗುವುದು. ವಿಧಿವತ್ತಾಗಿ ಪೂಜಿಸಿದರೆ ಶತ್ರುನಾಶವಾಗುವುದರಲ್ಲಿ ಸಂಶಯವಿಲ್ಲ. ತೊಗರಿಗಿಡದ ಪತ್ರಗಳಿಂದಲೂ ಶಿವನನ್ನರ್ಚಿಸಬೇಕು. ಸಜ್ಜನರಿಗೆ ಅವರು ಅಪೇಕ್ಷಿಸಿದ ಹಸು ಅಥವಾ ಹೋರಿಯನ್ನೂ ದಾನಮಾಡಬೇಕು. ಮೆಣಸಿನಕಾಯಿಗಳಿಂದ ಶಿವನನ್ನರ್ಚಿಸಿದರೆ ಶತ್ರುಗಳು ನಾಶವಾಗುವರು. ಮೆಣಸಿನ ಪತ್ರಗಳಿಂದ ಶಿವನನ್ನಲಂಕರಿಸಿ ಪೂಜಿಸಿದರೆ ಸಕಲ ಇಷ್ಟಾರ್ಥಗಳನ್ನೂ ಸುಖಗಳನ್ನೂ ಪಡೆಯಬಹುದು – ಎಂದು ಬ್ರಹ್ಮನು ನಾರದನಿಗೆ ಹೇಳುತ್ತಾನೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಚಿತ್ರ ವಿವರಣೆಯೊಂದು ವಾಟ್ಸ್‌ಆ್ಯಪ್‌ನಲ್ಲಿ ವೈರಲ್ ಆಗಿದೆ. ತಮಿಳುನಾಡಿನಲ್ಲಿ ಬೇರೆ ಬೇರೆ ಧರ್ಮಗಳ ಧಾರ್ಮಿಕ ಕೇಂದ್ರಗಳಿಗೆ ಪ್ರತ್ಯೇಕ ವಿದ್ಯುತ್ ದರ ವಿಧಿಸಲಾಗುತ್ತದೆ ಎಂದು ಆ ಚಿತ್ರದಲ್ಲಿ ಹೇಳಲಾಗಿದೆ. ‘ತಮಿಳುನಾಡಿನ ಧಾರ್ಮಿಕ ಕೇಂದ್ರಗಳ ವಿದ್ಯುತ್ ದರ’ ಎಂಬ ತಲೆಬರಹವನ್ನು ಈ ಚಿತ್ರಕ್ಕೆ ನೀಡಲಾಗಿದೆ. ಹಿಂದೂ ದೇವಾಲಯಗಳು ಒಂದು ಯೂನಿಟ್ ವಿದ್ಯುತ್‌ಗೆ ₹8 ನೀಡಬೇಕು. ಆದರೆ ಚರ್ಚ್ ಮತ್ತು ಮಸೀದಿಗಳು ಒಂದು ಯೂನಿಟ್ ವಿದ್ಯುತ್‌ಗೆ ₹2.85 ನೀಡಬೇಕು ಎಂದು ಈ ಚಿತ್ರದಲ್ಲಿ ಬರೆಯಲಾಗಿದೆ.



ಈ ಮಾಹಿತಿ ಸುಳ್ಳು ಎಂದು ‘ದಿ ಲಾಜಿಕಲ್ ಇಂಡಿಯನ್’ ವೇದಿಕೆ ವರದಿ ಮಾಡಿದೆ. ವಿದ್ಯುತ್ ದರವನ್ನು ಧರ್ಮದ ಆಧಾರದಲ್ಲಿ ತಮಿಳುನಾಡು ಸರ್ಕಾರ ನಿಗದಿಪಡಿಸಿಲ್ಲ. ವಿದ್ಯುತ್ ದರವನ್ನು 2017ರ ಆಗಸ್ಟ್‌ನಲ್ಲಿ ಕಡೆಯ ಬಾರಿಗೆ ಪರಿಷ್ಕರಿಸಲಾಗಿದೆ. ಪರಿಷ್ಕೃತ ಪಟ್ಟಿಯಲ್ಲಿ ಧರ್ಮದ ಆಧಾರದಲ್ಲಿ ದರ ನಿಗದಿ ಆಗಿಲ್ಲ. 2020ರಲ್ಲಿಯೂ ಇಂಥದ್ದೇ ವದಂತಿ ತಮಿಳುನಾಡಿನಲ್ಲಿ ಹಬ್ಬಿತ್ತು ಎಂದು ಕೆಲ ಫೇಸ್‌ಬುಕ್ ಪೋಸ್ಟ್‌ಗಳಿಂದ ತಿಳಿದುಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಕಾಮ-ಮೋಹಗಳ ಮೇಲೆ ಜಯ

ಮೂರನಂ ದಂಡಿಸಿರೆ ಗೌರಿಯಿಂ ಭಯವೇನು? |
ಚಾರುಸಹಕಾರಿಯವಳೆಂದು ಶಿವನೊಲಿದನ್ ||
ಮೀರೆ ಮೋಹವನು ಸಂಸಾರದಿಂ ಭಯವೇನು ? |
ದಾರಿ ಕೆಳೆಯದು ನಿನಗೆ – ಮಂಕುತಿಮ್ಮ || 614 ||

ಪದ-ಅರ್ಥ: ಮಾರ = ಕಾಮ, ದಂಡಿಸಿರೆ = -ದಂಡಿಸಿರುವಾಗ, ಗೌರಿಯಿಂ = ಗೌರಿಯಿಂದ, ಚಾರುಸಹಕಾರಿಯವಳೆಂದು = ಚಾರು(ಮನೋಹರ, ಸುಂದರ) + ಸಹಕಾರಿಯವಳು + ಎಂದು, ಮೀರೆ = ಗೆದ್ದ ಮೇಲೆ, ಕೆಳೆಯದು = ಸ್ನೇಹಿತನದು, ಮಾರ್ಗದರ್ಶಿಯದು.

ವಾಚ್ಯಾರ್ಥ: ಮನ್ಮಥನನ್ನೇ ಕೊಂದ ಮೇಲೆ ಗೌರಿಯಿಂದ ಯಾವ ಭಯ? ಆಕೆ ಮನೋಹರಳಾದ ಸಹಭಾಗಿನಿ ಎಂದು ಶಿವ ಒಲಿದಿದ್ದಾನೆ. ಮೋಹವನ್ನು ಮೀರಿದ ಮೇಲೆ ಸಂಸಾರದಿಂದ ಯಾವ ಭಯ. ಇದು ನಿನಗೆ ಮಾರ್ಗದರ್ಶಿಯಾದದ್ದು.

ವಿವರಣೆ: ಭಿಕ್ಷುಕ ಭಿಕ್ಷಾಪಾತ್ರೆ ಹಿಡಿದುಕೊಂಡು ಊರು ದಾಟಿ ಮರುಭೂಮಿಯಲ್ಲಿ ನಡೆದಿದ್ದ. ಅಲ್ಲಿ ಒಂದೆಡೆಗೆ ತುಂಬ ಜನ. ನೂರಾರು ಸೇವಕರು. ಅಲ್ಲೊಂದು ಡೇರೆ. ಅದನ್ನು ನೆಲಕ್ಕೆ ಊರಲು ಬಳಸಿದ ಗೂಡು ಚಿನ್ನದ್ದು. ಡೇರೆಯ ಸುತ್ತ ಒಂದು ಸಮೃದ್ಧ ಪರಿಸರವೇ ನಿಂತಿದೆ. ಭಿಕ್ಷುಕ ಕೇಳಿದ. ‘ಯಾರು ಆ ಡೇರೆಯಲ್ಲಿ ಇರುವವರು’. ‘ಅವರೊಬ್ಬ ಸೂಫೀ ಸಂತರು’ ಎಂಬ ಉತ್ತರ ಬಂತು. ಸಂತರೇ? ಈ ಪರಿಯ ಶ್ರೀಮಂತಿಕೆ ಬೇಕೇ ಸಂತರಿಗೆ. ಭಿಕ್ಷುಕ ಡೇರೆಯೊಳಗೆ ಹೋದ. ಎಲ್ಲೆಲ್ಲೂ ಸಂಪತ್ತು ಸೂರೆಯಾಗಿದೆ. ಅದೇನು ಚೆಂದದ ಆಭರಣಗಳು! ಚೆಂದದ ಬೆಡಗಿಯರು! ತರತರಹದ ಶ್ರೀಮಂತಿಕೆಯ ಭಕ್ಷ್ಯ, ಭೋಜ್ಯಗಳು! ಮತ್ತೊಂದು ಆವರಣದಲ್ಲಿ ಹಂಸತೂಲಿಕಾ ತಲ್ಪದ ಮೇಲೆ ಒಬ್ಬ ಮನುಷ್ಯ ಮಲಗಿದ್ದಾನೆ. ಅವನ ಮೈಮೇಲೆ ಅತ್ಯಂತ ಬೆಲೆಬಾಳುವ ಆಭರಣಗಳು, ಬಟ್ಟೆಗಳು: ಭಿಕ್ಷುಕ ಕೇಳಿದ, ‘ನೀವು ಸಂತರೇ? ಸಂತರಾದರೆ ಏಕಿಷ್ಟು ಮೋಹ? ನನ್ನ ಜೊತೆಗೆ ಬರುತ್ತೀರಾ?’. ಸಂತ ಎದ್ದ, ‘ನಡೆ ಹೋಗೋಣ’, ಎಂದ. ಸರಸರನೇ ತನ್ನ ಆಭರಣಗಳು, ಬೆಲೆಬಾಳುವ ವಸ್ತುಗಳನ್ನು ಕಳೆದು ನಡೆದೇ ಬಿಟ್ಟ. ಭಿಕ್ಷುಕನಿಗೆ ಆಶ್ಚರ್ಯ! ಒಂದು ಮೈಲಿ ಹೋದ ಮೇಲೆ ಭಿಕ್ಷುಕ ಗಾಬರಿಯಿಂದ ಹೇಳಿದ, ‘ಮತ್ತೇ ನಿಮ್ಮ ಡೇರೆಗೆ ಹೋಗೋಣ ನಡೆಯಿರಿ. ನನ್ನ ಭಿಕ್ಷಾ ಪಾತ್ರೆಯನ್ನು ಅಲ್ಲಿಯೇ ಮರೆತು ಬಂದಿದ್ದೇನೆ’. ಸಂತ ನಕ್ಕ. ‘ನೋಡಿದೆಯಾ? ನೀನು ಭಿಕ್ಷಾ ಪಾತ್ರೆಯನ್ನು ಬಿಡಲಾರೆ. ನಾನು ಆ ಎಲ್ಲ ಐಶ್ವರ್ಯವನ್ನು ಬಿಟ್ಟು ನಿರುಮ್ಮಳವಾಗಿ ಬಂದಿದ್ದೇನೆ’. ಭಿಕ್ಷುಕ ಕೇಳಿದ, ‘ಇದು ಹೇಗೆ ಸಾಧ್ಯ?’. ಸಂತ, ‘ಒಂದು ಸಲ ವಸ್ತುಗಳ ಬಗೆಗಿನ ಮೋಹ ಹೊರಟುಹೋದರೆ, ಸುತ್ತ ರಾಶಿ ಬಿದ್ದಿದ್ದರೂ ಅವು ನಮ್ಮನ್ನು ಸೆಳೆಯಲಾರವು. ವಸ್ತುಗಳು ನಮ್ಮನ್ನು ಸೆಳೆಯುವುದಿಲ್ಲ, ಮೋಹ ಸೆಳೆಯುತ್ತದೆ’. ಭಿಕ್ಷುಕ ಆ ಮಾತನ್ನು ಒಪ್ಪಿದ.

ಇದರ ಹಾಗೆ ಒಂದು ಸಲ ಕಾಮವನ್ನು ಜಯಿಸಿಬಿಟ್ಟರೆ, ಯಾವ ಅಪೇಕ್ಷೆಯೂ, ತೊಂದರೆ ಕೊಡಲಾರದು. ಕಗ್ಗದ ಮೊದಲ ಮಾತೇ ಅದು. ಮನ್ಮಥನನ್ನೇ ಗೆದ್ದ ಮೇಲೆ ಹೆಣ್ಣೆಂಬ ಮಾಯೆ ಶಿವನನ್ನು ಕಾಡೀತೇ? ಅದರಲ್ಲೂ ಗೌರಿ ಕೇವಲ ಒಬ್ಬ ಸ್ತ್ರೀಯಲ್ಲ. ಆಕೆ ಅವನ ಕಾರ್ಯದಲ್ಲಿ ಸಹಕಾರಿಯಾದವಳು, ಸಮಾನಮನಸ್ಕಳಾದವರು. ಅದಕ್ಕೇ ಆಕೆಗೆ ಒಲಿದ.

ಸಂಸಾರದ ಸಂಕಟ ಇರುವುದೇ ಮೋಹದಲ್ಲಿ,
ಅತಿಯಾದ ಆಸೆಯಲ್ಲಿ,
ಸಂಸಾರವೆಂಬ ಅರಣ್ಯದೊಳು ಬಿದ್ದೆನು
ಮೋಹವೆಂಬ ಹುಲಿ ಬಂದು ಹಿಡಿಯಿತ್ತಯ್ಯ ಎನ್ನ
ನಿಮ್ಮ ಮಹಾಜ್ಞಾನ ಶಸ್ತ್ರದಲ್ಲಿ,
ಈ ಮೋಹವೆಂಬ ಹುಲಿಯ ಕೊಂದು ನಿಮ್ಮತ್ತ
ತೆಗೆದುಕೊಳ್ಳಾ
ಅಪ್ರಮಾಣ ಕೂಡಲಸಂಗಮದೇವಾ.

ವಚನಕಾರ ಬಾಲಸಂಗಯ್ಯ ಹೇಳಿದಂತೆ ಜ್ಞಾನದಿಂದ ಮೋಹವನ್ನು ಗೆದ್ದರೆ ಸಂಸಾರದಿಂದ ಯಾವ ತೊಂದರೆಯೂ ಇಲ್ಲ. ಆಗ ಸಂಸಾರದ ಭಯವೇಕೆ? ಈ ದಾರಿ ಮಾರ್ಗದರ್ಶಿಯಾದದ್ದು. ಕಾಮವನ್ನು ಗೆದ್ದ ಶಿವ, ಮೋಹವನ್ನು ಜ್ಞಾನದಿಂದ ಗೆದ್ದ ಸಾಧಕರ ಮಾರ್ಗ ನಮಗೆ ಮಾರ್ಗದರ್ಶಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಏಕಾದಶಿ ಗಂ. 24-49 ನಕ್ಷತ್ರ: ಶತಭಿಷಾ ಗಂ. 16-56 ಯೋಗ: ಬ್ರಹ್ಮ ಗಂ. 24-16, ಕರಣ: ಬವ ಗಂ. 13-10, ಮೇಷ ಮಾಸದ 12 ನೇ ದಿನ. ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-15 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 24 ರಂಜಾನ್ ದಿನ ವಿಶೇಷ : ಶ್ರೀ ವಲ್ಲಭಾಚಾರ್ಯ ಜಯಂತಿ, ವಾರುತಿನಿ ಏಕಾದಶಿ ಅದೃಷ್ಟ ಸಂಖ್ಯೆ: 2, 8

ಮೇಷ: ದವಸ ಧಾನ್ಯ ಹಾಗೂ ಮಸಾಲ ಸಾಮಗ್ರಿಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲ. ತಾವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವರು.

ವೃಷಭ: ಅಧಿಕಾರಿ ವರ್ಗದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಜನಸಾಮಾನ್ಯರಿಂದ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರ ದೊರಕುತ್ತವೆ. ಆರೋಗ್ಯದಲ್ಲಿ ವಾಯು ಸಂಬಂಧವಾಗಿ ತೊಂದರೆಗಳು ಕಾಣಿಸಿಕೊಳ್ಳಬಹುದು.

ಮಿಥುನ: ವಾಹನ ಮಾರಾಟಗಳಿಂದ ಉತ್ತಮ ಆದಾಯ. ರಾಜಕೀಯದಲ್ಲಿ ಯಾವುದೇ ರೀತಿಯ ಬದಲಾವಣೆ ಈ ದಿನದಲ್ಲಿ ಸರಿಯಲ್ಲ. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಶುಭದಿನ.

ಕರ್ಕಾಟಕ: ಶೈಕ್ಷಣಿಕ ರಂಗದಲ್ಲಿನ ನಿಮ್ಮ ಚಟುವಟಿಕೆಗಳಿಂದ ಉತ್ತಮ ಹೆಸರು ಗಳಿಸಬಹುದು. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸಕಾಲ. ದೇವರ ಸೇವೆಯಿಂದ ನಿಮ್ಮ ಅದೃಷ್ಟ ಈ ದಿನ ಇಮ್ಮಡಿಗೊಳ್ಳಲಿದೆ.

ಸಿಂಹ: ಪೆಟ್ರೋಲಿಯಂ ಉತ್ಪನ್ನಗಳಿಂದ ಹೆಚ್ಚಿನ ಆದಾಯ. ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಹೆಚ್ಚು ಗಮನಹರಿಸ ಬೇಕಾಗುವುದು. ನಿಮಗೆ ಇಂದು ನಿರೀಕ್ಷೆಗೂ ಮೀರಿದ ಆದಾಯ.

ಕನ್ಯಾ: ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ. ಅಲಂಕಾರಿಕ ವಸ್ತುಗಳಿಗಾಗಿ ಹೆಚ್ಚಿನ ಖರ್ಚು. ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರುವುದು ಈ ದಿನದ ನಿಮ್ಮ ಮೂಲ ಮಂತ್ರವಾಗಿರಲಿ.

ತುಲಾ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಸೂಕ್ತ ರೀತಿಯಲ್ಲಿ ಅವಕಾಶ ಸಿಗುವುದು. ಭೂಮಿಗೆ ಸಂಬಂಧಿಸಿದ ವ್ಯವಹಾರಗಳಿಂದ ಲಾಭ ಗಳಿಸಬಹುದು. ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ.

ವೃಶ್ಚಿಕ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಸಂಧಾನ ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು. ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮ.

ಧನು: ಉದ್ಯೋಗಕ್ಕಾಗಿ ನಡೆಸಿದ ತೀವ್ರ ಪ್ರಯತ್ನ ಈ ದಿನ ಫಲ ನೀಡಲಿದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ. ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ ಬರಲಿದೆ.

ಮಕರ: ದೈನಂದಿನ ವಿಚಾರಗಳಲ್ಲಿ ನಡೆದಿರುವ ಸಣ್ಣಪುಟ್ಟ ಬದಲಾವಣೆಯಿಂದ ನೆಮ್ಮದಿ ಕಳೆದುಕೊಳ್ಳುವಿರಿ. ಅಧಿಕಾರಿ ವರ್ಗದವರ ಉತ್ತೇಜನದಿಂದಾಗಿ ಕೆಲಸಗಳಲ್ಲಿ ಜಯ ಲಭಿಸಲು ಸುಲಭವಾಗುವುದು.

ಕುಂಭ: ದೈವಬಲ ಉಂಟಾಗಿದ್ದು ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ಸಾಗಲಿದೆ. ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ, ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಸರ್ಕಾರದ ಕೆಲಸಗಳಿಂದ ಅನುಕೂಲ.

ಮೀನ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಅನುಕೂಲಕರ ವಾತಾವರಣ. ನಿಮ್ಮ ಅಧಿಕಾರಿಗಳ ಮನಸ್ಥಿತಿಯನ್ನು ಅರಿತುಕೊಂಡು ನಿಮ್ಮ ಬೇಡಿಕೆಯನ್ನು ನೆರವೇರಿಸಿಕೊಳ್ಳುವ ಪ್ರಯತ್ನ ಮಾಡಿ.


ಪದಬಂಧ 4939 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭ್ರಾಂತಿಯನ್ನು ಹೋಗಲಾಡಿಸುವುದು (6)
4.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
5.ವ್ಯವಹಾರ ಕುಶಲನೀತ (3)
7.ಶ್ರೇಷ್ಠ ಅಥವಾ ಅತಿಶಯವೆಂದರೂ ಸರಿಯೇ (3)
9.ನನಗದು ಬೇಕು ಎಂದಾಗ ಕೈಯಲ್ಲಿರುವ ಹಣ (3)
12.ಟಾರ ರಸ್ತೆ ಬದಿಯಲ್ಲಿನ ಮೋರಿ (3)
13.ಕನ್ನಡಿಗ ಧರಿಸಿದ ಚಾಳೀಸು (4)
15.ಮೂರ್ತಿ ಪೂಜೆಯಿದು (6)

ಮೇಲಿಂದ ಕೆಳಕ್ಕೆ

1.ಚಾರನ ಕೆಟ್ಟ ನಡವಳಿಕೆ (4)
2.ನಡುಗುವುದನ್ನು ನೋಡಿದಾಗ ಈ ಮಂದಹಾಸವೇ? (2)
3.ಸ್ಮರಣೆಗೆ ಬಾರದಿರುವುದು (3)
6.ತಪ್ಪನ್ನು ಮನ್ನಿಸುವುದು (4)
7.ಉಮೇದುವಾರ ತೋರಿದ ಹುರುಪು! (3)
8.ಈತ ಲಗ್ನವಾಗುತ್ತಿರುವವ (4)
10.ರಾಜನ ಗೃಹವಿದು (4)
11.ಕುತ್ತು ಕೊನೆಗಿಟ್ಟು ತೋರಿದ ಸಾಮರ್ಥ್ಯ (3)
14.ಕವಿತೆ ಬರೆಯುವವನು (2)



4938ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸೂಕ್ಷ್ಮದರ್ಶಕ 4.ವಾರ್ಧಕ್ಯ 5.ಸುಗಮ 6.ನಲಿವು 8.ಹಸು 9.ರಾವು 11.ಪರಮ 14.ನಖಾಗ್ರ 15.ತಪಸ್ವಿ 16.ಜಲಜನಕ

ಮೇಲಿಂದ ಕೆಳಕ್ಕೆ: 1.ಸೂಕ್ಷ್ಮದೃಷ್ಟಿ 2.ದನಿಗೂಡಿಸು 3.ಕಸುವು 4.ವಾಮನ 7.ಲಿಲಾವು 8.ಹಗುರ 9.ರಾಜಾಧಿರಾಜ 10.ಅಕರ್ಷಕ 12.ಮನಸ್ವಿ 13.ಅಗ್ರಜ

ಸುಡೊಕು 5325

9		5				4		
	8		7		5		1	9
7		1		6		2		8
							3	2
3	6		5		7	8	9	
		8					4	7
		7		5		1		3
5			9		8		2	4
2		3					8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5324 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಷೇರುಪೇಟೆ ವಹಿವಾಟು ▼617



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,171
ಇಂದಿನ ಅಂತ್ಯ	16,953
▼	218
ದಿನದ ಕನಿಷ್ಠ	17,054

ವಿನಿಮಯ ದರ

$ ಡಾಲರ್	76.64
£ ಪೌಂಡ್	97.75
€ ಯುರೊ	82.35
¥ ಯೆನ್ (100ಕ್ಕೆ)	59.99

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹375
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹375

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1640)
ಸೋಯಾ (ರಿಫೈನ್ಡ್)	₹1580 (1600)
ಸೂರ್ಯಕಾಂತಿ (ರಿಫೈನ್ಡ್)	₹1890 (1870)
ಪಾಮೋಲಿನ್	₹1512 (1525)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹700-1000
ಸಣ್ಣ	₹400-700

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹164
ಆರ್‌ಎಸ್‌ಎಸ್-5	₹158
ಗುಡ್ ಲಾಟ್	₹154





28ರಿಂದ ತಾಳೆ ಎಣ್ಣೆ ರಫ್ತಿಗೆ ನಿಷೇಧ, ಬೆಲೆ ಏರಿಕೆ ಆತಂಕ • ಭಾರತದ ಮೇಲೆ ಕೆಟ್ಟ ಪರಿಣಾಮ

ಇಂಡೊನೇಷ್ಯಾ ಜೊತೆ ಮಾತುಕತೆಗೆ ಸಲಹೆ



ಕೋಲ್ಕತ್ತ (ಪಿಟಿಐ): 'ತಾಳೆ ಎಣ್ಣೆ ರಫ್ತನ್ನು ಏಪ್ರಿಲ್ 28ರಿಂದ ನಿಷೇಧಿಸಲು ಇಂಡೊನೇಷ್ಯಾ ಸರ್ಕಾರ ತೀರ್ಮಾನ ಮಾಡಿರುವುದರಿಂದಾಗಿ ಭಾರತದ ಮೇಲೆ ಕೆಟ್ಟ ಪರಿಣಾಮ ಉಂಟಾಗಲಿದೆ. ಹೀಗಾಗಿ, ಕೇಂದ್ರ ಸರ್ಕಾರ ಹಾಗೂ ಇಂಡೊನೇಷ್ಯಾ ಸರ್ಕಾರದ ನಡುವೆ ತಕ್ಷಣವೇ ಮಾತುಕತೆ ನಡೆಯಬೇಕು' ಎಂದು ಅಡುಗೆ ಎಣ್ಣೆಗಳ ವರ್ತಕರ ರಾಷ್ಟ್ರೀಯ ಸಂಘಟನೆಯಾಗಿರುವ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಸಲಹೆ ಮಾಡಿದೆ.

ವಿಶ್ವದಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ತಾಳೆ ಎಣ್ಣೆ ಉತ್ಪಾದನೆ ಮಾಡುವ ದೇಶ ಇಂಡೊನೇಷ್ಯಾ. ಭಾರತದ ವಾರ್ಷಿಕ ತಾಳೆ ಎಣ್ಣೆ ಅಗತ್ಯದ ಶೇಕಡ 50ರಷ್ಟನ್ನು ಇಂಡೊನೇಷ್ಯಾ ಪೂರೈಸುತ್ತಿದೆ. ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆಯನ್ನು ನಿಯಂತ್ರಿಸುವ ಉದ್ದೇಶದಿಂದ ಆ ದೇಶವು ತಾಳೆ ಎಣ್ಣೆ ರಫ್ತನ್ನು ಮುಂದಿನ ಆದೇಶದವರೆಗೆ ನಿಷೇಧಿಸುತ್ತಿರುವುದಾಗಿ ಪ್ರಕಟಿಸಿದೆ.

'ಅಡುಗೆ ಎಣ್ಣೆ ರಫ್ತು ನಿಷೇಧದ ವಿಚಾರವಾಗಿ ನಮ್ಮ ಸರ್ಕಾರವು ಇಂಡೊನೇಷ್ಯಾ ಸರ್ಕಾರದ ಜೊತೆ ಅತ್ಯುನ್ನತ ರಾಜತಾಂತ್ರಿಕ ಮಟ್ಟದಲ್ಲಿ ಮಾತುಕತೆ ಶುರು ಮಾಡಬೇಕು. ರಫ್ತು ನಿಷೇಧವು ದೇಶದ ಆಂತರಿಕ ಮಾರುಕಟ್ಟೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆ. ಇಂಡೊನೇಷ್ಯಾ ಸ್ಥಾನವನ್ನು ತುಂಬಲು ಬೇರೆ ಯಾರಿಂದಲೂ ಸಾಧ್ಯವಿಲ್ಲ' ಎಂದು ಎಸ್‌ಇಎ ಮಹಾನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

'ಅಡುಗೆ ಎಣ್ಣೆಗಳ ಉದ್ಯಮವು ಈ ನಿಷೇಧವನ್ನು ನಿರೀಕ್ಷಿಸಿರಲಿಲ್ಲ. ನಿಷೇಧದ ಪರಿಣಾಮವು ದೇಶಿ ಮಾರುಕಟ್ಟೆಯಲ್ಲಿ ತಕ್ಷಣವೇ ಕಾಣಿಸಿಕೊಳ್ಳಲಿದೆ' ಎಂದು ಹೇಳಿದ್ದಾರೆ. ಇಂಡೊನೇಷ್ಯಾ ಸರ್ಕಾರವು ತಾಳೆ ಎಣ್ಣೆ ರಫ್ತಿನ ಮೇಲೆ ಒಂದಿಷ್ಟು ತೆರಿಗೆ ವಿಧಿಸಬಹುದು ಎಂಬ ನಿರೀಕ್ಷೆ ಉದ್ಯಮಕ್ಕೆ ಇತ್ತು.

'ಭಾರತದಲ್ಲಿ ವಾರ್ಷಿಕ 2.25 ಕೋಟಿ ಟನ್ ಅಡುಗೆ ಎಣ್ಣೆ ಬಳಸಲಾಗುತ್ತದೆ. ಇದರಲ್ಲಿ ಗರಿಷ್ಠ 95 ಲಕ್ಷ ಟನ್ ಅಡುಗೆ ಎಣ್ಣೆಯು ದೇಶದಲ್ಲಿಯೇ ಉತ್ಪಾದನೆ ಆಗುತ್ತದೆ. ಇನ್ನುಳಿದದ್ದು ಆಮದು ಆಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಕಚ್ಚಾ ಎಣ್ಣೆಗೆ ನಿರ್ಬಂಧವಿಲ್ಲ'

ಜಕಾರ್ತಾ (ರಾಯಿಟರ್ಸ್): ರಫ್ತು ನಿಷೇಧವು ರಿಫೈನ್ಡ್ ತಾಳೆ ಎಣ್ಣೆಗೆ ಅನ್ವಯವಾಗುತ್ತದೆ, ಕಚ್ಚಾ ತಾಳೆ ಎಣ್ಣೆಗೆ ಅಲ್ಲ ಎಂದು ಇಂಡೊನೇಷ್ಯಾದ ಕೃಷಿ ಸಚಿವಾಲಯ ಸೋಮವಾರ ಹೇಳಿದೆ.

ಕಚ್ಚಾ ತಾಳೆ ಎಣ್ಣೆಗೆ ನಿಷೇಧದಿಂದ ವಿನಾಯಿತಿ ನೀಡುವುದರಿಂದ ರಫ್ತಿಗೆ ತುಸು ಅನುಕೂಲ ಆಗುತ್ತದೆ. ಆದರೆ, ಇಂಡೊನೇಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತಿದ್ದುದು ರಿಫೈನ್ಡ್ ತಾಳೆ ಎಣ್ಣೆ. ಇದರ ರಫ್ತಿಗೆ ನಿಷೇಧ ಇದೆ. ಇಂಡೊನೇಷ್ಯಾ ದೇಶವು 2021ರಲ್ಲಿ ಪ್ರತಿ ತಿಂಗಳು ಸರಿಸುಮಾರು 6.20 ಲಕ್ಷ ಟನ್ ರಿಫೈನ್ಡ್ ತಾಳೆ ಎಣ್ಣೆಯನ್ನು, 1 ಲಕ್ಷ ಟನ್ ಕಚ್ಚಾ ತಾಳೆ ಎಣ್ಣೆಯನ್ನು ರಫ್ತು ಮಾಡಿದೆ. ಭಾರತ, ಪಾಕಿಸ್ತಾನ ಮತ್ತು ಸ್ಪೇನ್ ದೇಶಗಳು ಹೆಚ್ಚಿನ ಪ್ರಮಾಣದಲ್ಲಿ ತಾಳೆ ಎಣ್ಣೆ ಖರೀದಿಸಿವೆ.

ರಿಫೈನ್ಡ್ ತಾಳೆ ಎಣ್ಣೆ ಸಿದ್ಧಪಡಿಸಲು ಕಚ್ಚಾ ಎಣ್ಣೆ ಬೇಕಿರುವ ಕಾರಣ, ಅದನ್ನು ರಫ್ತು ನಿರ್ಬಂಧದ ಪಟ್ಟಿಗೆ ಸೇರಿಸಬಹುದು ಎಂಬ ಅನುಮಾನವು ಮಾರುಕಟ್ಟೆ ತಜ್ಞರಲ್ಲಿ ಇದೆ.

ರಷ್ಯಾ ತೈಲ ಖರೀದಿ ದುಪ್ಪಟ್ಟು

ನವದೆಹಲಿ (ರಾಯಿಟರ್ಸ್): ರಷ್ಯಾ ದೇಶವು ಉಕ್ರೇನ್ ಮೇಲೆ ಆಕ್ರಮಣ ನಡೆಸಿದ ನಂತರದಲ್ಲಿ ಭಾರತವು ರಷ್ಯಾದಿಂದ ಖರೀದಿ ಮಾಡಿರುವ ಕಚ್ಚಾ ತೈಲದ ಪ್ರಮಾಣವು, 2021ರಲ್ಲಿ ಅಲ್ಲಿಂದ ಖರೀದಿಸಿದ್ದ ಕಚ್ಚಾ ತೈಲಕ್ಕಿಂತ ಎರಡು ಪಟ್ಟು ಹೆಚ್ಚು.

ಯುದ್ಧ ಆರಂಭವಾದ ನಂತರದಲ್ಲಿ ಭಾರತದ ತೈಲ ಸಂಸ್ಕರಣಾ ಕಂಪನಿಗಳು ಕನಿಷ್ಠ 4 ಕೋಟಿ ಬ್ಯಾರೆಲ್ ಕಚ್ಚಾ ತೈಲವನ್ನು ರಷ್ಯಾದಿಂದ ಖರೀದಿಸಿವೆ. ಹಿಂದಿನ ವರ್ಷದಲ್ಲಿ ಭಾರತದ ಕಂಪನಿಗಳು ರಷ್ಯಾದಿಂದ ಖರೀದಿಸಿದ್ದ ಕಚ್ಚಾ ತೈಲದ ಒಟ್ಟು ಪ್ರಮಾಣದ 1.6 ಕೋಟಿ ಬ್ಯಾರೆಲ್ ಆಗಿತ್ತು ಎಂದು ಸುದ್ದಿಸಂಸ್ಥೆ ಲೆಕ್ಕ ಹಾಕಿದೆ.

'ಬೆಲೆ ಏರಿಕೆಯ ಏಟಿಗೆ ಗ್ರಾಹಕರು ಈಡಾಗದಂತೆ ನೋಡಿಕೊಳ್ಳಲು ನಾವು ಸಾಧ್ಯವಾದಷ್ಟೂ ಯತ್ನಿಸುತ್ತೇವೆ. ಆದರೆ, ನಾವು ನಮ್ಮ ಲಾಭವನ್ನೂ ನೋಡಿಕೊಳ್ಳಬೇಕು. ಹೀಗಾಗಿ ನಾವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದ್ದೇವೆ' ಎಂದು ತೈಲ ಸಂಸ್ಕರಣಾ ಕಂಪನಿಯೊಂದರ ಅಧಿಕಾರಿಯೊಬ್ಬರು ತಿಳಿಸಿದರು. ಭಾರತದ ಕಂಪನಿಗಳು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸುತ್ತಿವೆ.

ರಿಲಯನ್ಸ್ ಕಂಪನಿಯು ಇದುವರೆಗೆ ರಷ್ಯಾದಿಂದ 1.5 ಕೋಟಿ ಬ್ಯಾರೆಲ್ ರಷ್ಯಾ ತೈಲ ಖರೀದಿಸಿದೆ. ಈ ವಿಚಾರವಾಗಿ ರಿಲಯನ್ಸ್ ಪ್ರತಿಕ್ರಿಯೆ ಲಭ್ಯವಾಗಿಲ್ಲ. ರಷ್ಯಾದ ರೋಸ್‌ನೆಫ್ಟ್ ಹೂಡಿಕೆಯೂ ಇರುವ ನಯಾರಾ ಎನರ್ಜಿ ಕಂಪನಿ ಗರಿಷ್ಠ 90 ಲಕ್ಷ ಬ್ಯಾರೆಲ್ ರಷ್ಯಾ ತೈಲ ಖರೀದಿಸಿದೆ. ಈ ವಿಚಾರವಾಗಿ ನಯಾರಾ ಕಂಪನಿಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚನ್ನಗಿರಿ	
ರಾಶಿ	47099-49049
ದಾವಣಗೆರೆ	
ರಾಶಿ	35169-48669
ಕಾರ್ಕಳ	
ಹೊಸತು	40000-45000
ಕುಮಟಾ	
ಚಿಪ್ಪು	26609-31019
ಕೋಕ	20109-30009
ಫ್ಯಾಕ್ಟರಿ	10109-19379
ಹಳೆಚಾಲಿ	48099-50209
ಹೊಸಚಾಲಿ	35019-39399
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	13699-30209
ಚಾಲಿ	32099-38699
ಕೋಕ	14319-33633
ಕೆಂಪುಗೋಟು	26969-38699
ರಾಶಿ	32099-48529
ಸಿಪ್ಪೆಗೋಟು	5690-22392
ಶಿವಮೊಗ್ಗ	
ಬೆಟ್ಟೆ	50519-53900
ಗೊರಬಲು	18500-36609
ರಾಶಿ	42129-48458
ಸರಕು	55109-78100
ಸಿದ್ದಾಪುರ	
ಬಿಳಿಗೋಟು	24199-31299
ಕೋಕ	21889-31391
ಹೊಸಚಾಲಿ	35099-40309
ಕೆಂಪುಗೋಟು	26699-34899
ರಾಶಿ	45219-48369
ತಟ್ಟಿಬೆಟ್ಟೆ	35689-46099
ಶಿರಸಿ	
ಬೆಟ್ಟೆ	33009-48099
ಬಿಳಿಗೋಟು	22809-32599
ಚಾಲಿ	28090-40899
ರಾಶಿ	39619-49899
ತುಮಕೂರು	
ರಾಶಿ	48100-48900
ಯಲ್ಲಾಪುರ	
ಆಪಿ	54200-57179
ಬಿಳಿಗೋಟು	26899-33812
ಚಾಲಿ	36299-40809
ಕೋಕ	18899-30399
ಕೆಂಪುಗೋಟು	32899-36969
ರಾಶಿ	48699-53980
ತಟ್ಟಿಬೆಟ್ಟೆ	38999-47539

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16,000	16,100	227.15 ಸೆಂಟ್ಸ್
ಎಸಿ	8540	8,200	8,600	
ಆರ್‌ಪಿ	9600	9,500	9,550	ಲಂಡನ್
ಆರ್‌ಸಿ	4375	4,100	4,300	2116 ಡಾಲರ್ಸ್

ಕೊಬ್ಬರಿ ಧಾರಣೆ

ಪುತ್ತೂರು(ಇತರೆ)	₹4500-10500
ತುರುವೇಕೆರೆ	₹17150-17150

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹345-708
ದ್ವಿತಳಿ (ಬಿ.ವಿ)	₹414-835

ಮೇ 4ರಿಂದ ಎಲ್‌ಐಸಿ ಐಪಿಒ?



ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ವಿಮಾ ಕಂಪನಿಯಾಗಿರುವ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ಮೇ 4ರಿಂದ 9ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರಲಿದೆ ಎಂದು ಮೂಲಗಳು ತಿಳಿಸಿವೆ.

ಈ ಐಪಿಒ ಮೂಲಕ ಕೇಂದ್ರ ಸರ್ಕಾರವು ಎಲ್‌ಐಸಿಯ ಶೇಕಡ 3.5ರಷ್ಟು ಷೇರುಗಳನ್ನು ಮಾರಾಟ ಮಾಡಲಿದೆ. ಇದರಿಂದ ಬೊಕ್ಕಸಕ್ಕೆ ₹ 21 ಸಾವಿರ ಕೋಟಿ ಬರಲಿದೆ. ಎಲ್‌ಐಸಿ ಮಾರುಕಟ್ಟೆ ಮೌಲ್ಯವು ₹ 6 ಲಕ್ಷ ಕೋಟಿ ಎಂದು ಅಂದಾಜು ಮಾಡಲಾಗಿದೆ.

ಷೇರುಪೇಟೆ ಕುಸಿತ: ಎರಡು ದಿನಗಳಲ್ಲಿ ₹6.47 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ಎರಡು ವಹಿವಾಟಿನ ದಿನಗಳಲ್ಲಿ ದೇಶದ ಷೇರು ಮಾರುಕಟ್ಟೆಗಳಲ್ಲಿ ಆಗಿರುವ ಕುಸಿತದ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತಿನ ಮೌಲ್ಯವು ಒಟ್ಟು ₹ 6.47 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

ಸೋಮವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 617 ಅಂಶ ಇಳಿಕೆಯಾಗಿ, 56,579ಕ್ಕೆ ತಲುಪಿತು. ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 714 ಅಂಶ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಸೋಮವಾರ 218 ಅಂಶ ಕುಸಿದಿದೆ.

'ದೇಶದ ಷೇರು ಮಾರುಕಟ್ಟೆಗಳಲ್ಲಿ ಅಸ್ಥಿರ ವಹಿವಾಟು ಮುಂದುವರಿಯಲಿದೆ ಎಂಬುದು ನಮ್ಮ ನಿರೀಕ್ಷೆ. ಹಣದುಬ್ಬರ ಹೆಚ್ಚಳ ಹಾಗೂ ಅದರಿಂದ ಕಂಪನಿಗಳ ಲಾಭಾಂಶದ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ಆತಂಕ ವ್ಯಕ್ತವಾಗಿದೆ. ಅಮೆರಿಕದ ಫೆಡರಲ್ ರಿಸರ್ವ್ ಶೀಘ್ರದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಬಡ್ಡಿ ದರ ಹೆಚ್ಚಿಸಬಹುದು ಎಂಬ ಕಳವಳವೂ ಇದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕವು ಶೇ 1.88ರಷ್ಟು, ಮಿಡ್ ಕ್ಯಾಪ್ ಸೂಚ್ಯಂಕವು ಶೇ 1.86ರಷ್ಟು ಇಳಿಕೆ ಕಂಡಿದೆ.



'ಚೀನಾದಲ್ಲಿ ಕೆಲವೆಡೆ ಲಾಕ್‌ಡೌನ್ ಜಾರಿಗೆ ಬಂದಿರುವ ಕಾರಣ ಕಚ್ಚಾ ತೈಲದ ಬೆಲೆ ಕುಸಿಯಿತು. ದೇಶದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂದಕ್ಕೆ ಪಡೆಯುವುದು ನಿಂತಿಲ್ಲ. ಇದರ ಜೊತೆಗೆ ಇತರ ಜಾಗತಿಕ ಅನಿಶ್ಚಿತತೆಗಳು ಕೂಡ ಮಾರುಕಟ್ಟೆಯಲ್ಲಿ ಕರಡಿಯ ಹಿಡಿತ ಬಲವಾಗುವಂತೆ ಮಾಡಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಚೀನಾದ ಷೇರುಪೇಟೆಗಳಲ್ಲಿ ಕೂಡ ಸೋಮವಾರ ಕುಸಿತ ಕಂಡುಬಂದಿದೆ. ಟೋಕಿಯೊ, ಹಾಂಗ್‌ಕಾಂಗ್, ಸೋಲ್ ಮಾರುಕಟ್ಟೆಗಳೂ ಕುಸಿದಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 4.44ರಷ್ಟು ಕಡಿಮೆ ಆಗಿ, 101.92 ಡಾಲರ್‌ಗೆ ತಲುಪಿದೆ.

ಚಿನ್ನದ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಸೋಮವಾರ ಪ್ರತಿ 10 ಗ್ರಾಂಗೆ ₹ 316ರಷ್ಟು ಕಡಿಮೆ ಆಗಿ, ₹ 51,872ಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಕಡಿಮೆ ಆಗಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 1,010ರಷ್ಟು ಕಡಿಮೆ ಆಗಿ ₹ 65,443ಕ್ಕೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

25-4-2022

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1650)
ಒಂದು ವಾರದ ಡೆಲಿವರಿ	1665 (1645)
ಸೋಯಾ ಕಚ್ಚಾ	1565 (1580)
ಪಾಮ್ ವಾರದ ಡೆಲಿವರಿ	1510 (1523)
ಸೂರ್ಯಕಾಂತಿ ಎಣ್ಣೆ ಕಚ್ಚಾ	18500 (1850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,750 (52,300)
ಬೆಳ್ಳಿ ಕೆ.ಜಿ 65,200 (66,500)

ಆವರಣದಲ್ಲಿ ಶನಿವಾರದ ಧಾರಣೆ

ಅನಧಿಕೃತ ಧ್ವನಿವರ್ಧಕ ತೆರವಿಗೆ ಆದೇಶ

ಲಖನೌ: ರಾಜ್ಯದ ವಿವಿಧ ಧಾರ್ಮಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಬಳಸುತ್ತಿರುವ ಧ್ವನಿವರ್ಧಕಗಳನ್ನು ತೆರವುಗೊಳಿಸಬೇಕು ಎಂದು ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ. ಮಸೀದಿಗಳಲ್ಲಿ 'ಆಜಾನ್' ಕರೆಗೆ, ಧಾರ್ಮಿಕ ಸ್ಥಳಗಳಲ್ಲಿ 'ಭಜನೆ'ಗಾಗಿ ಧ್ವನಿವರ್ಧಕ ಬಳಸಲಾಗುತ್ತದೆ.

ಏಪ್ರಿಲ್ 30ರೊಳಗೆ ಅನಧಿಕೃತ ಧ್ವನಿವರ್ಧಕಗಳನ್ನು ತೆರವುಗೊಳಿಸಬೇಕು ಹಾಗೂ ಈ ಬಗ್ಗೆ ಸಮಗ್ರ ವರದಿಯನ್ನು ಸಲ್ಲಿಸಬೇಕು ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಪೊಲೀಸರಿಗೆ ಸೂಚಿಸಿದ್ದಾರೆ.

ಅನುಮತಿ ಪಡೆದಿದ್ದರೆ ಶಬ್ದದ ಪ್ರಮಾಣ ಕಾನೂನು ಮಿತಿಯಲ್ಲಿರಬೇಕು ಎಂದೂ ಆದೇಶಿಸಲಾಗಿದೆ. ಆಜಾನ್‌ಗೆ ಧ್ವನಿವರ್ಧಕ ಬಳಸುವುದು ವಿವಾದಕ್ಕೆಡೆಯಾದ ಬೆನ್ನಲ್ಲೇ ರಾಜ್ಯದ ವಿವಿಧ ಮಸೀದಿ, ದೇವಸ್ಥಾನದಲ್ಲಿ ಅನಧಿಕೃತವಾಗಿ ಬಳಸುತ್ತಿದ್ದ ಧ್ವನಿವರ್ಧಕಗಳನ್ನು ಕಳೆದ ಕೆಲವು ದಿನಗಳಿಂದ ತೆರವುಗೊಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾದಿಂದ ಮತ್ತೆ 15 ತಮಿಳರು ಭಾರತಕ್ಕೆ

ರಾಮೇಶ್ವರಂ (ಪಿಟಿಐ): ನಾಲ್ಕು ಶಿಶುಗಳು ಸೇರಿದಂತೆ ಇನ್ನೂ 15 ಮಂದಿ ಶ್ರೀಲಂಕಾ ತಮಿಳರು ದೋಣಿ ಮೂಲಕ ತಮ್ಮ ದೇಶವನ್ನು ತೊರೆದು ಸೋಮವಾರ ಇಲ್ಲಿಗೆ ಬಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಂಕಾ ತಮಿಳರ ಗುಂಪೊಂದು ಧನುಷ್ಕೋಡಿಯಿಂದ ಅರಿಸಲ್ಮುನೈ ಪ್ರದೇಶವನ್ನು ತಲುಪಿದೆ ಎಂಬ ಮಾಹಿತಿ ಬಂದ ನಂತರ ಪೊಲೀಸ್ ಸಿಬ್ಬಂದಿ ಅವರನ್ನು ಮಂಡಪಂನಲ್ಲಿರುವ ಪುನರ್ವಸತಿ ಶಿಬಿರಕ್ಕೆ ಕರೆದೊಯ್ದಿದ್ದಾರೆ. ಲಂಕಾದಲ್ಲಿ ತೀವ್ರ ಆರ್ಥಿಕ ಸಂಕಷ್ಟ ತಲೆದೋರಿದ ಬಳಿಕ ತಮಿಳುನಾಡಿಗೆ ಬಂದವರ ಸಂಖ್ಯೆ ಇದೀಗ 75ಕ್ಕೆ ಏರಿದೆ.

ರಾಣಾ ದಂಪತಿ ವಿರುದ್ಧದ ಎಫ್‌ಐಆರ್ ವಜಾಕ್ಕೆ ಹೈಕೋರ್ಟ್ ನಕಾರ



ಸಂಸದೆ ನವನೀತ್ ಕೌರ್ ರಾಣಾ ಮತ್ತು ಪತಿ, ಶಾಸಕ ರವಿ ರಾಣಾ

ಮುಂಬೈ (ಪಿಟಿಐ): ಹನುಮಾನ್ ಚಾಲೀಸಾ ವಿವಾದಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಸಂಸದೆ ನವನೀತ್ ಕೌರ್ ರಾಣಾ ಮತ್ತು ಅವರ ಪತಿ, ಶಾಸಕ ರವಿ ರಾಣಾ ಅವರು ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಪೊಲೀಸ್ ಅಧಿಕಾರಿಗೆ ತಮ್ಮ ಕರ್ತವ್ಯ ನಿರ್ವಹಿಸದಂತೆ ತಡೆದ ಆರೋಪದ ಮೇರೆಗೆ ಮುಂಬೈನ ಖಾರ್ ಪೊಲೀಸರು ರಾಣಾ ದಂಪತಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಇದನ್ನು ರದ್ದುಗೊಳಿಸುವಂತೆ ಕೋರಿ ದಂಪತಿ ಸೋಮವಾರ ಬೆಳಿಗ್ಗೆ ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದರು.

ನ್ಯಾ. ಪಿ.ಬಿ.ವರಾಲೆ ಮತ್ತು ಎಸ್.ಎಂ.ಮೋದಕ್ ಅವರನ್ನೊಳಗೊಂಡ ನ್ಯಾಯಪೀಠವು, ರಾಣಾ ದಂಪತಿಯ ಅರ್ಜಿಯನ್ನು ವಜಾಗೊಳಿಸಿತು.

ಟ್ವಿಟರ್ ಸ್ವಾಧೀನ; ಮಸ್ಕ್ ಮಾತುಕತೆ ಆರಂಭ

ವಾಷಿಂಗ್ಟನ್ (ಎಪಿ): ಟ್ವಿಟರ್ ಕೊಂಡುಕೊಳ್ಳಲು ಮುಂದಾಗಿರುವ ಟೆಸ್ಲಾ ಸಿಇಒ ಎಲಾನ್ ಮಸ್ಕ್ ಮತ್ತು ಟ್ವಿಟರ್ ಮಂಡಳಿ ನಡುವೆ ಸೋಮವಾರ ಬೆಳಿಗ್ಗೆ ಮಾತುಕತೆ ನಡೆದಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಒಪ್ಪಂದ ಏರ್ಪಟ್ಟು ಬಳಿಕ ಅದು ರದ್ದಾದರೆ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಎರಡೂ ಕಡೆಯ ಸದಸ್ಯರು ಚರ್ಚೆ ನಡೆಸಿದರು.

'₹ 3.56 ಲಕ್ಷ ಕೋಟಿ ನೀಡಿ ಟ್ವಿಟರ್‌ಅನ್ನು ಕೊಂಡುಕೊಳ್ಳಲು ನಾನು ತಯಾರಿದ್ದೇನೆ' ಎಂದು ಕಳೆದ ವಾರವೇ ಮಸ್ಕ್ ಹೇಳಿದ್ದರು ಮತ್ತು ಟ್ವಿಟರನ್ನು ತಮಗೆ ಮಾರಾಟ ಮಾಡುವಂತೆ ಸಂಸ್ಥೆ ಮೇಲೆ ಒತ್ತಡ ಹೇರಿದ್ದರು.

ಇದಕ್ಕೂ ಮೊದಲು ಟ್ವಿಟರ್ ಸ್ವಾಧೀನದ ವಿರುದ್ಧ ಕ್ರಮಗಳನ್ನು ತೆಗೆದುಕೊಂಡಿತ್ತು. ಆದರೆ ಮಸ್ಕ್ ಅವರು ಉತ್ತಮ ಮೊತ್ತದ ಹಣ ನೀಡಿ ಸ್ವಾಧೀನಪಡಿಸಿಕೊಳ್ಳಲು ಮುಂದಾದ ಕಾರಣ ಟ್ವಿಟರ್ ಮಂಡಳಿ ಮಸ್ಕ್ ಅವರ ಜೊತೆ ಮಾತುಕತೆಗೆ ಮುಂದಾಗಿದೆ ಎಂದು ವಾಲ್‌ಸ್ಟ್ರೀಟ್ ಜರ್ನಲ್ ತಿಳಿಸಿದೆ.

'ಅಕ್ರಮ ಕಾಲೊನಿಗಳ ತಡೆಗೆ ಯೋಜನೆ ರೂಪಿಸಿ'

ನವದೆಹಲಿ (ಪಿಟಿಐ): ದೇಶದಾದ್ಯಂತ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಅಕ್ರಮ ಕಾಲೊನಿಗಳು ನಗರಾಭಿವೃದ್ಧಿಗೆ ಮಾರಕವಾಗಿವೆ ಎಂದು ಹೇಳಿದ ಸುಪ್ರೀಂ ಕೋರ್ಟ್, ಈ ಅಕ್ರಮ ಕಾಲೊನಿಗಳು ತಲೆ ಎತ್ತದಂತೆ ತಡೆಯಲು ರಾಜ್ಯ ಸರ್ಕಾರಗಳ ಸಮಗ್ರ ಕ್ರಿಯಾ ಯೋಜನೆ ರೂಪಿಸಬೇಕು ಎಂದು ಸೋಮವಾರ ಸೂಚಿಸಿತು.

ಸುಳ್ಳು ಮಾಹಿತಿ: 16 ಯೂಟ್ಯೂಬ್ ಚಾನೆಲ್‌ಗೆ ನಿರ್ಬಂಧ

ನವದೆಹಲಿ(ಪಿಟಿಐ): ಭಾರತದ ರಾಷ್ಟ್ರೀಯ ಭದ್ರತೆ, ವಿದೇಶಾಂಗ ಸಂಬಂಧಗಳು ಸೇರಿದಂತೆ ಇನ್ನಿತರ ವಿಚಾರಗಳ ಕುರಿತು ಸುಳ್ಳು ಮಾಹಿತಿ ಹರಡುತ್ತಿದ್ದ ಫೇಸ್‌ಬುಕ್ ಖಾತೆ ಹಾಗೂ 16 ಯೂಟ್ಯೂಬ್ ಚಾನೆಲ್‌ಗಳ ಮೇಲೆ ಭಾರತ ಸರ್ಕಾರ ನಿರ್ಬಂಧ ಹೇರಿದೆ. ಇದರಲ್ಲಿ ನೆರೆಯ ಪಾಕಿಸ್ತಾನದಿಂದ ನಿರ್ವಹಿಸಲಾಗುತ್ತಿದ್ದ 6 ಯೂಟ್ಯೂಬ್ ಚಾನೆಲ್‌ಗಳೂ ಸೇರಿವೆ.



ಕೀವ್‌ಗೆ ರಹಸ್ಯ ಭೇಟಿ ನೀಡಿದ್ದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಬ್ಲಿಂಕೆನ್ ಹೇಳಿಕೆ

‘ರಷ್ಯಾಕ್ಕೆ ಸೋಲು; ಉಕ್ರೇನ್‌ಗೆ ಯಶಸ್ಸು’

ಕೀವ್ (ಎಪಿ): ಕೀವ್ ನಗರಕ್ಕೆ ರಹಸ್ಯ ಭೇಟಿ ನೀಡಿದ ನಂತರ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಜೆ. ಬ್ಲಿಂಕೆನ್ ‘ಯುದ್ಧದಲ್ಲಿ ಗುರಿ ಸಾಧಿಸಲು ರಷ್ಯಾ ವಿಫಲವಾಗಿದೆ, ಉಕ್ರೇನ್ ಯಶಸ್ವಿಯಾಗುತ್ತಿದೆ’ ಎಂದು ಹೇಳಿದ್ದಾರೆ.

ಫೆಬ್ರುವರಿ 24ರಂದು ರಷ್ಯಾ, ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆ ಆರಂಭಿಸಿದ ನಂತರ, ಉಕ್ರೇನ್ ರಾಜಧಾನಿ ಕೀವ್‌ಗೆ ಅಮೆರಿಕದ ಉನ್ನತಮಟ್ಟದ ನಾಯಕರು ಮೊದಲ ಬಾರಿಗೆ ಭೇಟಿ ನೀಡಿದ್ದಾರೆ.

‘ಅಮೆರಿಕವು 30 ಕೋಟಿ ಡಾಲರ್‌ಗೂ (₹2,280 ಕೋಟಿ) ಹೆಚ್ಚಿನ ಮೊತ್ತದ ವಿದೇಶಿ ಸೇನಾ ನೆರವನ್ನು ಉಕ್ರೇನ್‌ಗೆ ಒದಗಿಸಲಿದೆ. ಹಾಗೆಯೇ 16.5 ಕೋಟಿ ಡಾಲರ್ (₹1,254 ಕೋಟಿ) ಮೊತ್ತದ ಮದ್ದುಗುಂಡುಗಳನ್ನು ಮಾರಾಟ ಮಾಡಲು ಅನುಮೋದಿಸಿದೆ’ ಎಂದು ಬ್ಲಿಂಕೆನ್, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಅವರ ಸಲಹೆಗಾರರಿಗೆ ತಿಳಿಸಿದರು.

‘ಉಕ್ರೇನ್ ಸರ್ಕಾರ ಮತ್ತು ಅಲ್ಲಿನ ಜನತೆಗೆ ಬಲವಾದ ಬೆಂಬಲವನ್ನು ನೇರವಾಗಿ ನೀಡಲು ನಮಗೆ ಅವಕಾಶವಿದೆ. ಇದು ನಮ್ಮ ತೀರ್ಮಾನವೂ ಹೌದು. ಕೀವ್‌ನಲ್ಲಿ ಮುಖಾಮುಖಿ ಮಾತುಕತೆ ವೇಳೆ ಎಲ್ಲವನ್ನೂ ವಿವರಿಸಿದ್ದು ಪ್ರಮುಖ ಕ್ಷಣ. ಝೆಲೆನ್‌ಸ್ಕಿ ಮತ್ತು ಅವರ ಸಲಹೆಗಾರರೊಂದಿಗೆ ಮೂರು ತಾಸಿನ ಸಂಭಾಷಣೆ ನಡೆಯಿತು’ ಎಂದು ಬ್ಲಿಂಕೆನ್, ಪೋಲೆಂಡ್ ಗಡಿ ಬಳಿ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸುಧಾರಿತ ಶಸ್ತ್ರಾಸ್ತ್ರಗಳು ಸೇರಿ ಹೆಚ್ಚುವರಿ ಸೇನಾ ನೆರವು ಮತ್ತು ಆರ್ಥಿಕ ನೆರವು ಕಲ್ಪಿಸುವುದಾಗಿ ಅಮೆರಿಕದ ಪ್ರತಿನಿಧಿಗಳು ಕೀವ್‌ನಿಂದ ವಾಪಸಾಗುವಾಗ ಉಕ್ರೇನ್‌ಗೆ ವಾಗ್ದಾನ ಮಾಡಿದರು. ಅಮೆರಿಕದ ಈ ಅಭೂತಪೂರ್ವ ನೆರವಿಗೆ ಝೆಲೆನ್‌ಸ್ಕಿ ಕೃತಜ್ಞತೆ ಸಲ್ಲಿಸಿದರು.

ಇದೇ ವೇಳೆ ಅಮೆರಿಕ, ‘ಉಕ್ರೇನ್‌ನಲ್ಲಿ ರಷ್ಯಾ ವಿಫಲವಾಗಿದೆ, ಅದು ನಿರೀಕ್ಷಿತ ವೇಗದಲ್ಲಿ ಮುನ್ನುಗ್ಗಲು ಸಾಧ್ಯವಾಗುತ್ತಿಲ್ಲ. ಉಕ್ರೇನ್ ಯುದ್ಧದಲ್ಲಿ ರಷ್ಯಾ ಸೇನಾಪಡೆಗಳ ಸಾಮರ್ಥ್ಯದ ಕೊರತೆಯೂ ಎದ್ದುಕಾಣಿಸಿದೆ’ ಎಂದು ಹೇಳಿದೆ.



ಲಾಯ್ಡ್ ಆಸ್ಟಿನ್ ಮತ್ತು ಆ್ಯಂಟನಿ ಬ್ಲಿಂಕೆನ್, ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಭೇಟಿ ಮಾಡಿ, ಹೆಚ್ಚುವರಿ ಶಸ್ತ್ರಾಸ್ತ್ರ ನೆರವಿನ ವಾಗ್ದಾನ ನೀಡಿದರು (ಉಕ್ರೇನ್ ರಕ್ಷಣಾ ಸಚಿವಾಲಯ ಟ್ವೀಟರ್‌ನಲ್ಲಿ ಬಿಡುಗಡೆ ಮಾಡಿರುವ ಚಿತ್ರ)



ರಷ್ಯಾ ತನ್ನ ಸೇನಾಪಡೆಯನ್ನು ಮರು ಸಂಘಟಿಸಲು ಸಾಧ್ಯವಾಗದಂತೆ ಅದನ್ನು ದುರ್ಬಲಗೊಳಿಸಲು ಅಮೆರಿಕ ಬಯಸಿದೆ. ಇದು ನಮ್ಮ ದಿಟ್ಟ ನಿಲುವು

ಲಾಯ್ಡ್ ಆಸ್ಟಿನ್
ಅಮೆರಿಕ ರಕ್ಷಣಾ ಕಾರ್ಯದರ್ಶಿ

ಅಮೆರಿಕಕ್ಕೆ ರಷ್ಯಾ ಎಚ್ಚರಿಕೆ

ಲಂಡನ್ (ರಾಯಿಟರ್ಸ್): ಉಕ್ರೇನ್‌ಗೆ ಹೆಚ್ಚಿನ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪೂರೈಸದಂತೆ ಅಮೆರಿಕಕ್ಕೆ ರಷ್ಯಾ ಕಠಿಣ ಎಚ್ಚರಿಕೆ ನೀಡಿದೆ.

‘ಅಮೆರಿಕದಿಂದ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಪೂರೈಕೆ ಆಗುವುದನ್ನು ನಾವು ಸಹಿಸುವುದಿಲ್ಲ. ಇದನ್ನು ಕೊನೆಗೊಳಿಸಲು ಒತ್ತಾಯಿಸಿದ್ದೇವೆ. ಈ ಬಗ್ಗೆ ರಷ್ಯಾಕ್ಕಿರುವ ಕಳವಳದ ಬಗ್ಗೆಯೂ ಅಧಿಕೃತವಾದ ರಾಜತಾಂತ್ರಿಕ ಪತ್ರವನ್ನು ವಾಷಿಂಗ್ಟನ್‌ಗೆ ಕಳುಹಿಸಲಾಗಿದೆ’ ಎಂದು ವಾಷಿಂಗ್ಟನ್‌ನಲ್ಲಿ ಇರುವ ರಷ್ಯಾ ರಾಯಭಾರಿ ಅನಾಟೊಲಿ ಆಂಟೊನೊವ್, ರಷ್ಯಾದ ಸರ್ಕಾರಿ ಸ್ವಾಮ್ಯದ ‘ರೊಸ್ಸಿಯಾ 24 ಟಿ.ವಿ ಚಾನೆಲ್’ಗೆ ತಿಳಿಸಿದ್ದಾರೆ.

ಸೋಮವಾರದ ಬೆಳವಣಿಗೆ

- ಉಕ್ರೇನಿನ ಪ್ರಮುಖ ಐದು ರೈಲು ನಿಲ್ದಾಣಗಳ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. ಇದರಿಂದ ನಾಗರಿಕರ ಸ್ಥಳಾಂತರಕ್ಕೆ ಅಡ್ಡಿಯಾಗಿದೆ– ಉಕ್ರೇನ್
- ಉಕ್ರೇನ್‌ನ ಎರಡು ಡ್ರೋನ್‌ಗಳನ್ನು ಗಡಿ ಬಳಿ ಹೊಡೆದುರುಳಿಸಲಾಗಿದೆ– ರಷ್ಯಾ ಸೇನೆ
- ಉಕ್ರೇನ್ ಮೇಲೆ ಮತ್ತೊಮ್ಮೆ ಇಸ್ಕಾಂಡರ್ ಕ್ಷಿಪಣಿಗಳನ್ನು ಬಳಸಿರುವ ವಿಡಿಯೊ ತುಣುಕನ್ನು ರಷ್ಯಾ ಸೇನೆ ಬಿಡುಗಡೆ ಮಾಡಿದೆ
- ರಷ್ಯಾ ಹೊಸ ಕ್ಷಿಪಣಿಗಳನ್ನು ಉಡಾಯಿಸುತ್ತಿದ್ದಂತೆ ಉಕ್ರೇನಿನಾದ್ಯಂತ ವಾಯು ದಾಳಿ ಸೈರನ್ ಮೊಳಗಿದವು. ವಿನಿಟ್ಸಯಾ ಮತ್ತು ಲುವಿವ್ ನಗರಗಳಲ್ಲಿ ಭಾರಿ ಸ್ಫೋಟಗಳು ಸಂಭವಿಸಿ 5 ಮಂದಿ ಮೃತಪಟ್ಟಿದ್ದಾರೆ
- ರಷ್ಯಾದ ಬ್ರಿಯಾನ್‌ಸ್ಕ್ ನಗರದ ಬೃಹತ್ ತೈಲ ಸಂಗ್ರಹಣಾ ಘಟಕಕ್ಕೆ ಬೆಂಕಿ ಹೊತ್ತಿಕೊಂಡಿದೆ – ರಷ್ಯಾದ ತುರ್ತು ಸೇವೆಗಳ ಸಚಿವಾಲಯದ ಮಾಹಿತಿ
- ವಾರದ ಹಿಂದೆ ರಷ್ಯಾದ ಸೇನಾ ಸಂಶೋಧನಾ ಕೇಂದ್ರದಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಈವರೆಗೆ ಮೃತಪಟ್ಟವರ ಸಂಖ್ಯೆ 17ಕ್ಕೆ ಏರಿದೆ
- ರಷ್ಯಾದ ಪಡೆಗಳು ರುಬಿನ್ನೆ, ಪೊಪಾಸ್ನಾ, ಸಿವಿರೊಡೊನೆಟ್‌ಸ್ಕ್, ಮರಿಂಕಾ ಮತ್ತು ಅವ್ದೀಕಾದಲ್ಲಿ ರಕ್ಷಣೆ ಭೇದಿಸಲು ಯತ್ನಿಸಿದವು. ಇಝಿಮ್ ಪಟ್ಟಣದಿಂದ ಬಾರ್ವಿಂಕೋವ್ ಮತ್ತು ಸ್ಲೋವಿಯನ್‌ಸ್ಕ್ ಕಡೆಗೆ ಮುನ್ನುಗ್ಗಲು ಪ್ರಯತ್ನಿಸುತ್ತಿವೆ– ಉಕ್ರೇನ್ ರಕ್ಷಣಾ ಸಚಿವಾಲಯ
- ರಷ್ಯಾದ ಪ್ರಮುಖ ಪತ್ರಕರ್ತರ ಹತ್ಯೆಗೆ ಪಾಶ್ಚಾತ್ಯ ರಾಷ್ಟ್ರಗಳು ರೂಪಿಸಿದ್ದ ಸಂಚನ್ನು ನಮ್ಮ ಬೇಹುಗಾರಿಕಾ ಸಂಸ್ಥೆ ವಿಫಲಗೊಳಿಸಿದೆ– ಅಧ್ಯಕ್ಷ ಪುಟಿನ್
- ಉಕ್ರೇನಿನ ಬುಚಾ ನಗರದಲ್ಲಿ ರಷ್ಯಾ ಪಡೆಗಳು ನಾಗರಿಕರ ಹತ್ಯೆಗೆ ಮೊದಲ ಮಹಾಯುದ್ಧದ ಅವಧಿಯ ಅಸ್ತ್ರಗಳನ್ನು ಪ್ರಯೋಗಿಸಿದೆ–ವೈದ್ಯರ ಹೇಳಿಕೆ ಉಲ್ಲೇಖಿಸಿ ‘ದಿ ಗಾರ್ಡಿಯನ್’ ಪತ್ರಿಕೆ ವರದಿ

‘ಅಜೋವ್‌ಸ್ಟಾಲ್ ಸುತ್ತ ಕದನವಿರಾಮ’

ಮಾಸ್ಕೊ (ಎಎಫ್‌ಪಿ): ಮರಿಯುಪೋಲ್‌ನ ಬೃಹತ್ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಸುರಂಗಗಳಲ್ಲಿ ಉಕ್ರೇನ್ ಪಡೆಗಳೊಂದಿಗೆ ಆಶ್ರಯ ಪಡೆದಿರುವ ನೂರಾರು ನಾಗರಿಕರ ಸ್ಥಳಾಂತರಕ್ಕಾಗಿ ಸ್ಥಾವರದ ಸುತ್ತಲೂ ರಷ್ಯಾ ಸೇನೆ ಸೋಮವಾರ ಕದನ ವಿರಾಮ ಘೋಷಿಸಿದೆ.

‘ಇದೇ ಏಪ್ರಿಲ್ 25ರಂದು ಮಧ್ಯಾಹ್ನ 2 ಗಂಟೆಗೆ (ಮಾಸ್ಕೊ ಸ್ಥಳೀಯ ಕಾಲಮಾನ) ಏಕಪಕ್ಷೀಯವಾಗಿ ಆಕ್ರಮಣ ಸ್ಥಗಿತಗೊಳಿಸಿದೆ. ಸೇನಾ ಪಡೆಗಳನ್ನು ದೂರಕ್ಕೆ ಕರೆಸಿಕೊಂಡು, ನಾಗರಿಕರ ಸುರಕ್ಷಿತ ಸ್ಥಳಾಂತರ ಖಾತ್ರಿಪಡಿಸಲಾಗುವುದು’ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

‘ನಾಗರಿಕರು ಬಯಸಿದ ದಿಕ್ಕುಗಳಿಗೆ ಅವರನ್ನು ಸ್ಥಳಾಂತರಿಸಬಹುದು. ಸ್ಥಳಾಂತರದ ಸಿದ್ಧತೆಯನ್ನು ಬಿಳಿ ಬಾವುಟ ತೋರಿಸುವ ಮೂಲಕ ಉಕ್ರೇನ್ ಅಧಿಕಾರಿಗಳು ಖಚಿತಪಡಿಸಬೇಕು. ಕದನ ವಿರಾಮದ ಮಾಹಿತಿಯನ್ನು ಅಜೋವ್‌ಸ್ಟಾಲ್‌ನ ರೇಡಿಯೊಗಳಲ್ಲಿ ಪ್ರತಿ 30 ನಿಮಿಷಗಳಿಗೊಮ್ಮೆ ತಿಳಿಸಲಾಗುತ್ತದೆ’ ಎಂದು ಅದು ಹೇಳಿದೆ. ಉಕ್ರೇನ್ ಇದನ್ನು ಅಲ್ಲಗಳೆದಿದೆ.

ಕಾಂಗ್ರೆಸ್ ಚಿಂತನ ಶಿಬಿರಕ್ಕೆ ಆರು ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚಿಂತನ ಶಿಬಿರಕ್ಕೆ ಸಂಬಂಧಿಸಿ ರಚಿಸಿರುವ ಆರು ಪ್ರಮುಖ ಸಮಿತಿಗಳಲ್ಲಿ ಜಿ–23ರ (ನಾಯಕತ್ವಕ್ಕೆ ಸಂಬಂಧಿಸಿ ಭಿನ್ನಮತ ಹೊಂದಿರುವವರು) ಏಳು ಮುಖಂಡರು ಸ್ಥಾನ ಪಡೆದಿದ್ದಾರೆ. ಭೂಪೀಂದರ್ ಹೂಡಾ ಮತ್ತು ಮುಕುಲ್ ವಾಸ್ನಿಕ್ ಅವರಿಗೆ ಕ್ರಮವಾಗಿ ಕೃಷಿ ಮತ್ತು ಸಂಘಟನೆ ಸಮಿತಿಗಳ ನೇತೃತ್ವ ವಹಿಸಲಾಗಿದೆ. ಗುಲಾಂ ನಬಿ ಆಜಾದ್ ಮತ್ತು ಶಶಿ ತರೂರ್ ಅವರಿಗೆ ರಾಜಕೀಯ ಸಮಿತಿಯಲ್ಲಿ ಸ್ಥಾನ ನೀಡಲಾಗಿದೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಸಮಿತಿಯ ಅಧ್ಯಕ್ಷ.

ರಾಜಕೀಯ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಆರ್ಥಿಕತೆ, ಸಂಘಟನೆ, ರೈತರು ಮತ್ತು ಕೃಷಿ, ಯುವ ಜನರು ಮತ್ತು ಸಬಲೀಕರಣ ಎಂಬ ಹೆಸರಿನ ಸಮಿತಿಗಳನ್ನು ರಚಿಸಲಾಗಿದೆ. ರಾಜಸ್ಥಾನದ ಉದಯಪುರದಲ್ಲಿ ಮೇ 13ರಿಂದ ನಡೆಯಲಿರುವ ಮೂರು ದಿನಗಳ ಶಿಬಿರದಲ್ಲಿ ಮಂಡಿಸುವುದಕ್ಕಾಗಿ ಆಯಾ ಸಮಿತಿಯು ಪ್ರಬಂಧಗಳನ್ನು ಸಿದ್ಧಪಡಿಸಬೇಕು. ಈ ವಿಷಯಗಳ ಮೇಲಿನ ಚರ್ಚೆಗೆ ನೇತೃತ್ವ ಒದಗಿಸಬೇಕು.

ಕರ್ನಾಟಕದ ನಾಲ್ವರು ಮುಖಂಡರು ಸಮಿತಿಗಳಲ್ಲಿ ಸ್ಥಾನ ಪಡೆದಿದ್ದಾರೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ರಾಜೀವ್ ಗೌಡ ಅವರು ಆರ್ಥಿಕತೆ ಸಮಿತಿಯಯಲ್ಲಿದ್ದಾರೆ. ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತು ಶಾಸಕ ಕೃಷ್ಣ ಬೈರೇಗೌಡ ಅವರು ಯುವಜನರು ಮತ್ತು ಸಬಲೀಕರಣ ಸಮಿತಿಯಲ್ಲಿ ಇದ್ದಾರೆ.

ಖರ್ಗೆ ನೇತೃತ್ವದ ರಾಜಕೀಯ ಸಮಿತಿಯಲ್ಲಿ ಆಜಾದ್ ಮತ್ತು ತರೂರ್ ಅವರಲ್ಲದೆ, ಅಶೋಕ್ ಚವಾಣ್, ಎನ್. ಉತ್ತಮಕುಮಾರ್ ರೆಡ್ಡಿ, ಗೌರವ್ ಗೊಗೊಯಿ, ಸಪ್ತಗಿರಿ ಉಲಕ, ಪವನ್ ಖೇರ ಮತ್ತು ರಾಗಿಣಿ ನಾಯ್ಕ್ ಅವರಿದ್ದಾರೆ.

ಜಿ–23ರ ಪ್ರಮುಖ ಮುಖಂಡರಾದ ಆನಂದ್ ಶರ್ಮಾ ಮತ್ತು ಮನೀಶ್ ತಿವಾರಿ ಅವರು ಆರ್ಥಿಕತೆ ಸಮತಿಯಲ್ಲಿ ಸ್ಥಾನ ಪಡೆದಿದ್ದಾರೆ. ಪಿ.ಚಿದಂಬರಂ ಅವರು ಈ ಸಮಿತಿಗೆ ಅಧ್ಯಕ್ಷ. ಸಿದ್ದರಾಮಯ್ಯ ಅವರಲ್ಲದೆ, ಸಚಿನ್ ಪೈಲಟ್, ಪ್ರಣಿತಿ ಶಿಂಧೆ, ಗೌರವ್ ವಲ್ಲಭ್ ಮತ್ತು ಸುಪ್ರಿಯಾ ಶ್ರೀನಾತೆ ಅವರು ಈ ಸಮಿತಿ ಇತರ ಸದಸ್ಯರು.

ಸಂಘಟನಾತ್ಮಕ ವಿಚಾರಗಳ ಬಗೆಗಿನ ಸಮಿತಿಗೆ ಮುಕುಲ್ ವಾಸ್ನಿಕ್ ಮುಖ್ಯಸ್ಥ. ಇವರು ಜಿ–23ರಲ್ಲಿ ಇದ್ದರು. ಆದರೆ, ಈಗ ಈ ಗುಂಪಿನಿಂದ ದೂರವಾಗಿದ್ದಾರೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಮಿತಿಯ ನೇತೃತ್ವವನ್ನು ಸಲ್ಮಾನ್ ಖುರ್ಷಿದ್ ಅವರಿಗೆ ವಹಿಸಲಾಗಿದೆ. ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ವಾರಿಂಗ್ ಅವರನ್ನು ಯುವ ಜನರು ಮತ್ತು ಸಬಲೀಕರಣ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ.

ಕಿಶೋರ್ ಸೇರ್ಪಡೆ ಅನಿಶ್ಚಿತ

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಯಾವುದೇ ಸ್ಪಷ್ಟತೆ ಮೂಡಿಲ್ಲ. ಆದರೆ, ಪಕ್ಷದ ವ್ಯವಹಾರಗಳಲ್ಲಿ ಅವರ ಭಾಗವಹಿಸುವಿಕೆ ಬಗ್ಗೆ ಕೆಲವರಲ್ಲಿ ಅಸಮಾಧಾನ ಹೆಚ್ಚಿದೆ ಎಂದು ಹೇಳಲಾಗುತ್ತಿದೆ.

ತೆಲಂಗಾಣ ಮುಖ್ಯಮಂತ್ರಿ ಮತ್ತು ಟಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ ಅವರನ್ನು ಕಿಶೋರ್ ಅವರು ಭೇಟಿಯಾಗಿರುವುದು, ಕಾಂಗ್ರೆಸ್‌ನಲ್ಲಿರುವ ಕಿಶೋರ್ ವಿರೋಧಿಗಳಿಗೆ ಅಸ್ತ್ರವಾಗಿ ಒದಗಿ ಬಂದಿದೆ.

ಚುನಾವಣಾ ಕಾರ್ಯತಂತ್ರ ರೂಪಿಸುವ ‘ಐ–ಪ್ಯಾಕ್’ ಸಂಸ್ಥೆಯ ಜತೆಗೆ ತಮಗೆ ಯಾವುದೇ ಸಂಬಂಧ ಇಲ್ಲ ಎಂದು ಕಿಶೋರ್ ಹೇಳುತ್ತಿದ್ದಾರೆ. ಆದರೆ, ಐ–ಪ್ಯಾಕ್ ಕಿಶೋರ್ ಅವರೇ ಸ್ಥಾಪಿಸಿದ ಸಂಸ್ಥೆ. ಹೀಗಾಗಿ, ಕಿಶೋರ್ ಅವರ ಈ ಪ್ರತಿಪಾದನೆಯು ಕಾಂಗ್ರೆಸ್‌ನ ಕೆಲವು ಮುಖಂಡರಿಗೆ ಮನವರಿಕೆ ಆಗಿಲ್ಲ. ತೃಣಮೂಲ ಕಾಂಗ್ರೆಸ್, ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಜತೆಗೆ ಕಿಶೋರ್ ಹೊಂದಿರುವ ಸಂಬಂಧವನ್ನೂ ಕಾಂಗ್ರೆಸ್‌ನ ಕೆಲವರು ಪ್ರಸ್ತಾಪಿಸುತ್ತಿದ್ದಾರೆ.

ಟಿಆರ್‌ಎಸ್ ಜತೆಗೆ ಸಂಪರ್ಕ ಹೊಂದಿರುವ ಕಿಶೋರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದನ್ನು ತೆಲಂಗಾಣದ ಕಾಂಗ್ರೆಸ್ ಮುಖಂಡರು ಬಹಿರಂಗವಾಗಿಯೇ ವಿರೋಧಿಸಿದ್ದಾರೆ. ತೆಲಂಗಾಣ ಮುಖಂಡರ ಅತೃಪ್ತಿಯನ್ನು ಆ ರಾಜ್ಯದ ಕಾಂಗ್ರೆಸ್ ಉಸ್ತುವಾರಿ ಮಾಣಿಕ್ಕಂ ಟ್ಯಾಗೋರ್ ಎರಡು ಬಾರಿ ಪ್ರಸ್ತಾಪಿಸಿದ್ದಾರೆ. ‘ನಮ್ಮ ಶತ್ರುವಿನ ಜತೆಗೆ ಗೆಳೆತನ ಹೊಂದಿರುವವರನ್ನು ಎಂದಿಗೂ ನಂಬಬಾರದು’ ಎಂದು ಅವರು ಇತ್ತೀಚೆಗೆ ಟ್ವೀಟ್ ಮಾಡಿದ್ದರು.

ಕಿಶೋರ್ ಅವರ ಕಾಂಗ್ರೆಸ್ ಸೇರ್ಪಡೆ ಕುರಿತು ನಿರ್ಧರಿಸಲು ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ಕಿಶೋರ್ ಸೇರ್ಪಡೆ ವಿರುದ್ಧ ವರದಿ ನೀಡಿದೆ ಎನ್ನಲಾಗುತ್ತಿದೆ. ಇದು ಗೊತ್ತಾದ ಕಾರಣಕ್ಕಾಗಿಯೇ ಕಿಶೋರ್ ಅವರು ಚಂದ್ರಶೇಖರ ರಾವ್ ಅವರನ್ನು ಭೇಟಿಯಾಗಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ರಕ್ಷಣಾ ವೆಚ್ಚ: 3ನೇ ಸ್ಥಾನದಲ್ಲಿ ಭಾರತ

ನವದೆಹಲಿ (ಪಿಟಿಐ): ರಕ್ಷಣಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ವ್ಯಯಿಸುತ್ತಿರುವ ವಿಶ್ವದ ಐದು ದೇಶಗಳಲ್ಲಿ ಭಾರತವು ಮೂರನೇ ಸ್ಥಾನದಲ್ಲಿದೆ. 2021ನೇ ಸಾಲಿನಲ್ಲಿ 5,874 ಲಕ್ಷ ಕೋಟಿ ಹಣವನ್ನು (76.6 ಬಿಲಿಯನ್ ಡಾಲರ್) ಭಾರತ ಈ ಕ್ಷೇತ್ರಕ್ಕಾಗಿ ವ್ಯಯಿಸಿದೆ.

ಇದು, 2020ನೇ ಸಾಲಿನಲ್ಲಿ ವ್ಯಯಿಸಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 0.9ರಷ್ಟು ಹೆಚ್ಚಾಗಿದೆ. ರಕ್ಷಣಾ ವಲಯಕ್ಕೆ ಹೆಚ್ಚು ಮೊತ್ತ ವ್ಯಯಿಸುತ್ತಿರುವ ದೇಶಗಳ ಪೈಕಿ ಅಮೆರಿಕ, ಚೀನಾ ಮೊದಲ ಎರಡು ಸ್ಥಾನಗಳಲ್ಲಿದ್ದರೆ, 4 ಮತ್ತು 5ನೇ ಸ್ಥಾನದಲ್ಲಿ ಕ್ರಮವಾಗಿ ಇಂಗ್ಲೆಂಡ್, ರಷ್ಯಾ ಇವೆ.

ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿ ಸ್ಟಾಕ್‌ಹೋಂ ಅಂತರರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆಯು ಸೋಮವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಅಂಶವಿದೆ.

ಜಿಗ್ನೇಶ್ ಮೇವಾನಿ ಮರುಬಂಧನ

ಕೋಕ್ರಜಾರ್ (ಅಸ್ಸಾಂ) (ಪಿಟಿಐ): ಟ್ವೀಟ್ ಪ್ರಕರಣದಲ್ಲಿ ಜಾಮೀನು ಪಡೆದು ಬಿಡುಗಡೆಗೊಂಡ ಗುಜರಾತ್‌ನ ಶಾಸಕ ಜಿಗ್ನೇಶ್ ಮೇವಾನಿ ಅವರನ್ನು ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಮತ್ತೆ ಬಂಧಿಸಲಾಗಿದೆ.

ಪ್ರಧಾನಿ ವಿರುದ್ಧ ಆಕ್ಷೇಪಾರ್ಹ ಟ್ವೀಟ್ ಆರೋಪದಡಿ ಮೇವಾನಿ ಅವರನ್ನು ಅಸ್ಸಾಂನ ಪೊಲೀಸರು ಏ.19 ರಂದು ಬಂಧಿಸಿದ್ದರು. ಕೋರ್ಟ್ ಈ ಬಗ್ಗೆ ಜಾಮೀನು ನೀಡಿತ್ತು. ಸರ್ಕಾರಿ ಸೇವೆಗೆ ಅಡ್ಡಿ ಆರೋಪಗಳಿಗೆ ಸಂಬಂಧಿಸಿ ಮೇವಾನಿ ವಿರುದ್ಧ ನಾಲ್ಕು ದಿನಗಳ ಹಿಂದೆ ಮತ್ತೊಂದು ಪ್ರಕರಣ ದಾಖಲಿಸಲಾಗಿತ್ತು, ಈ ಹಿನ್ನೆಲೆಯಲ್ಲಿ ಅವರನ್ನು ಮತ್ತೆ ಬಂಧಿಸಲಾಗಿದೆ.

ಈ ಮೊದಲು ಕೋಕ್ರಜಾರ್ ಜೆಎಂಎಫ್‌ಸಿ ನ್ಯಾಯಾಧೀಶರು ಜಾಮೀನು ನೀಡಿದ್ದರು.

370ನೇ ವಿಧಿ ರದ್ದು: ಬೇಸಿಗೆ ರಜೆ ಬಳಿಕ ‘ಸುಪ್ರೀಂ’ ವಿಚಾರಣೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿಯ ನಿಬಂಧನೆಗಳನ್ನು ತೆಗೆದುಹಾಕಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಬೇಸಿಗೆ ರಜೆಯ ನಂತರ ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಅರ್ಜಿದಾರರೊಬ್ಬರ ಪರ ವಾದಿಸಿದ ಹಿರಿಯ ವಕೀಲ ಶೇಖರ್ ನಾಫಡೆ ಅವರ ಮನವಿಗಳನ್ನು ಆಲಿಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು, ಬೇಸಿಗೆ ರಜೆಯ ಬಳಿಕ ಈ ಅರ್ಜಿಗಳನ್ನು ಆಲಿಸುವುದಾಗಿ ಹೇಳಿದರು.

ಜಮ್ಮು–ಕಾಶ್ಮೀರದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆಯುತ್ತಿದೆ. ಹೀಗಾಗಿ ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸುವಂತೆ ವಕೀಲ ನಾಫಡೆ ಅವರು ಕೋರಿದರು.

‘ಇದು 370ನೇ ವಿಧಿಯ ವಿಷಯ. ಕ್ಷೇತ್ರ ಪುನರ್ ವಿಂಗಡಣೆಯೂ ನಡೆಯುತ್ತಿದೆ’ ಎಂದು ಹಿರಿಯ ವಕೀಲರು ತಿಳಿಸಿದರು.

ಆಗ ‘ಈ ಕುರಿತು ನೋಡೋಣ’ ಎಂದ ಸಿಜೆಐ ಅವರು, ‘ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ವಿಚಾರಣೆ ನಡೆಯಬೇಕಾದ ವಿಷಯ ಇದಾಗಿದೆ. ನಾನು ಪೀಠವನ್ನು ಪುನರ್ ರಚಿಸಬೇಕಿದೆ’ ಎಂದರು.

‘ವಾಣಿಜ್ಯ, ತಂತ್ರಜ್ಞಾನ ಮಂಡಳಿ ಸ್ಥಾಪನೆ’

ನವದೆಹಲಿ (ಪಿಟಿಐ): ಭೌಗೋಳಿಕ ರಾಜಕೀಯ ಬದಲಾವಣೆಯ ಹಿನ್ನೆಲೆಯಲ್ಲಿ ವಿಶ್ವಾಸಾರ್ಹ ತಂತ್ರಜ್ಞಾನ ಮತ್ತು ಭದ್ರತೆಯ ಸವಾಲುಗಳನ್ನು ಎದುರಿಸಲು ಐರೋಪ್ಯ ಒಕ್ಕೂಟ ಮತ್ತು ಭಾರತದ ನಡುವೆ ವಾಣಿಜ್ಯ ಮತ್ತು ತಂತ್ರಜ್ಞಾನ ಮಂಡಳಿ ಸ್ಥಾಪಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು ಒಪ್ಪಿಗೆ ಸೂಚಿಸಿದ್ದಾರೆ.
ರಷ್ಯಾ ಮತ್ತು ಉಕ್ರೇನ್ ಬಿಕ್ಕಟ್ಟಿನ ನಡುವೆ ಎರಡು ದಿನಗಳ ಭೇಟಿಗಾಗಿ ಭಾರತಕ್ಕೆ ಬಂದಿರುವ ಉರ್ಸುಲಾ ವಾನ್ ಡೆರ್ ಲೇಯೆನ್ ಅವರೊಂದಿಗೆ ಪ್ರಧಾನಿ ಮೋದಿ ಅವರು ಸೋಮವಾರ ನಡೆಸಿದ ಮಾತುಕತೆಯ ವೇಳೆ ಈ ನಿರ್ಧಾರ ಪ್ರಕಟಿಸಲಾಗಿದೆ.

ಚೀನಾ: 3 ಹಂತದಲ್ಲಿ ಸೋಂಕು ಪತ್ತೆ ಪರೀಕ್ಷೆ

ಬೀಜಿಂಗ್(ರಾಯಿಟರ್ಸ್): ಕೊರೊನಾ ನಿಯಂತ್ರಣಕ್ಕೆ ಶಾಂಘೈನಲ್ಲಿ ಕಠಿಣ ನಿರ್ಬಂಧ ಮುಂದುವರಿದಿರುವ ಬೆನ್ನಲ್ಲೇ, ಹೆಚ್ಚು ಸೋಂಕು ಕಂಡುಬಂದ ಚವೊಯಾಂಗ್‌ನ 35 ಲಕ್ಷ ಜನರನ್ನು 3 ಹಂತದಲ್ಲಿ ಕೋವಿಡ್ ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆಗೆ ಚೀನಾ ಸರ್ಕಾರ ಸೋಮವಾರ ಚಾಲನೆ ನೀಡಿದೆ.

ನಗರದಲ್ಲಿ ಕೊರೊನಾ ಸೋಂಕು ವ್ಯಾಪಕವಾಗುತ್ತಿದೆ. ಹೀಗಾಗಿ ನಗರದ ನಿವಾಸಿಗಳು ಮತ್ತು ಕೆಲಸಕ್ಕಾಗಿ ಬರುವ ಕಾರ್ಮಿಕರು ಮತ್ತು ನೌಕರರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಶುಕ್ರವಾರದಿಂದ ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ 47 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಚವೊಯಾಂಗ್ ಜಿಲ್ಲೆಯೊಂದರಲ್ಲೇ ಪತ್ತೆಯಾಗಿವೆ. ಚೀನಾದಲ್ಲಿ ಭಾನುವಾರ ಪತ್ತೆಯಾದ 20,190 ಪ್ರಕರಣಗಳಲ್ಲಿ ಬಹುತೇಕ ಲಕ್ಷಣ ರಹಿತವಾಗಿವೆ.

2.6 ಕೋಟಿ ಜನ ಇರುವ ಶಾಂಘೈನಲ್ಲಿ 2472 ಪ್ರಕರಣಗಳು ವರದಿಯಾಗಿವೆ. ಇದಲ್ಲದೆ 16,983 ಮಂದಿಯಲ್ಲಿ ಯಾವುದೇ ಲಕ್ಷಣಗಳು ಇಲ್ಲದೆ ಇದ್ದರೂ ಸೋಂಕು ಪತ್ತೆಯಾಗಿದೆ. ಶಾಂಘೈನಲ್ಲಿ ಭಾನುವಾರ 51 ಮಂದಿ ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ.

ಆಹಾರ, ಅಗತ್ಯ ವಸ್ತುಗಳಿಗೆ ಮುಗಿಬಿದ್ದ ಜನ: ಸಾಮೂಹಿಕ ಕೋವಿಡ್ ಪರೀಕ್ಷೆಗೆ ಚಾಲನೆ ನೀಡಿದ ಬೆನ್ನಲ್ಲೇ, ಶಾಂಘೈ ರೀತಿ ಜಿಲ್ಲೆಯಲ್ಲೂ ಲಾಕ್‌ಡೌನ್ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಭೀತಿ ರಾಜಧಾನಿ ಬೀಜಿಂಗ್ ಜನರನ್ನು ಕಾಡುತ್ತಿದೆ. ಇದರಿಂದ ಶಾಂಘೈ ರೀತಿ ಆಹಾರದ ಹಾಹಾಕಾರ ಎದುರಾಗಲಿದೆ ಎಂಬ ಸಂಕಷ್ಟಕ್ಕೆ ಸಿಲುಕಿರುವ ಜನರು, ಆಹಾರ, ದಿನಸಿ ಸೇರಿದಂತೆ ಇನ್ನಿತರ ಅಗತ್ಯ ವಸ್ತುಗಳ ಖರೀದಿಗಾಗಿ ಜನ ಮಾಲ್‌ಗಳಿಗೆ ಮುಗಿಬಿದ್ದಿದ್ದಾರೆ. ಮಾಲ್‌ಗಳು, ಕಚೇರಿಗಳ ಆವರಣದಲ್ಲಿ ಜನರ ಉದ್ದದ ಸಾಲುಗಳು ಸಾಮಾನ್ಯವಾಗಿತ್ತು.



ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಸೋಮವಾರ ನಡೆದ ಕೊರೊನಾ ಸೋಂಕು ಪತ್ತೆ ಪರೀಕ್ಷೆಯಲ್ಲಿ ಜನರು ಪಾಲ್ಗೊಂಡಿದ್ದರು – ಎಎಫ್‌ಪಿ ಚಿತ್ರ

2,541 ಜನರಲ್ಲಿ ಸೋಂಕು ದೃಢ

ನವದೆಹಲಿ (ಪಿಟಿಐ): ದೇಶದಾದ್ಯಂತ ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳಲ್ಲಿ ಹೊಸದಾಗಿ 2,541 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 4,30,60,086ಕ್ಕೆ ಏರಿದೆ. ಸಕ್ರಿಯ ಪ್ರಕರಣಗಳು 16,522ಕ್ಕೆ ಏರಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಇದೇ ಅವಧಿಯಲ್ಲಿ 30 ಸಾವುಗಳು ಸಂಭವಿಸಿವೆ. ಈವರೆಗೆ ಮೃತಪಟ್ಟವರ ಸಂಖ್ಯೆ 5,22,223ಕ್ಕೆ ಏರಿದೆ. ಒಟ್ಟಾರೆ ಸೋಂಕು ಪ್ರಕರಣಗಳಲ್ಲಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.04ರಷ್ಟಿದೆ. ರಾಷ್ಟ್ರೀಯ ಚೇತರಿಕೆ ದರವು ಶೇ 98.75ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ 0.84 ರಷ್ಟಿದೆ.

ಕಡ್ಡಾಯ ಲಸಿಕೆ ವಿರೋಧ: ಅರ್ಜಿ ವಜಾ

ನವದೆಹಲಿ: ಶಾಲೆ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯು ತರಗತಿಗಳಿಗೆ ಹಾಜರಾಗಲು ಕೋವಿಡ್–19 ಲಸಿಕೆ ಹಾಕಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿ ಕರ್ನಾಟಕ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ವಿರೋಧಿಸಲಾಗಿದ್ದ ಮೇಲ್ಮನವಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರ ಚೂಡ್ , ಸೂರ್ಯಕಾಂತ್ ಅವರಿದ್ದ ಪೀಠವು, ‘ಇಂಥ ಪ್ರಕರಣಗ ಳಲ್ಲಿ ಮಧ್ಯ ಪ್ರವೇಶಿಸಲಾಗದು’ ಎಂದು ತಿಳಿಸಿ ಅರ್ಜಿ ವಜಾಗೊಳಿಸಿದೆ.

ಫ್ರಾನ್ಸ್ :ಮ್ಯಾಕ್ರಾನ್ ಪುನರಾಯ್ಕೆ

ಪ್ಯಾರಿಸ್ (ರಾಯಿಟರ್ಸ್): ಫ್ರಾನ್ಸ್‌ನ ಅಧ್ಯಕ್ಷರಾಗಿ ಇಮ್ಯಾನುಯೆಲ್ ಮ್ಯಾಕ್ರಾನ್ ಪುನರಾಯ್ಕೆಯಾಗಿದ್ದಾರೆ. ಅವರು ತಮ್ಮ ಪ್ರತಿಸ್ಪರ್ಧಿ ಮರೀನ್ ಲಿ ಪೆನ್ ಅವರನ್ನು ಪರಾಭವಗೊಳಿಸಿದರು.



ಭಾನುವಾರ ನಡೆದ ಚುನಾವಣೆಯಲ್ಲಿ ಮ್ಯಾಕ್ರಾನ್ ಅವರು ಶೇ 58.55 ರಷ್ಟು ಹಾಗೂ ಲಿ ಪೆನ್ ಅವರು ಶೇ 41.45ರಷ್ಟು ಮತ ಪಡೆದರು. ಶೇ 28.1ರಷ್ಟು ಮತ ಚಲಾವಣೆಯಾಗಿಲ್ಲ. 2017ರ ಚುನಾವಣೆಯಲ್ಲಿ ಚಲಾವಣೆಯಾಗದ ಮತಗಳ ಪ್ರಮಾಣ ಶೇ 25.4ರಷ್ಟಿತ್ತು.

44 ವರ್ಷದ ಮ್ಯಾಕ್ರಾನ್ ಅವರು ನಿರೀಕ್ಷೆಯಂತೆ ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ. 2017ರ ಚುನಾವಣೆಯಲ್ಲಿ ಅವರು ಶೇ 66.1ರಷ್ಟು ಮತ ಪಡೆದಿದ್ದರೆ, ಲೆ ಪೆನ್ ಅವರು ಶೇ 33.9ರಷ್ಟು ಮತ ಪಡೆದಿದ್ದರು.

ಮೋದಿ ಅಭಿನಂದನೆ: ಪುನರಾಯ್ಕೆಯಾದ ಮ್ಯಾಕ್ರಾನ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದಿಸಿದ್ದಾರೆ. ಭಾರತ–ಫ್ರಾನ್ಸ್ ಬಾಂಧವ್ಯ ವೃದ್ಧಿ ದೃಷ್ಟಿಯಿಂದ ಒಟ್ಟಾಗಿ ಕಾರ್ಯನಿರ್ವಹಿಸುವ ಭರವಸೆ ನೀಡಿದ್ದಾರೆ.

ಶ್ರೀಲಂಕಾ: ಅವಿಶ್ವಾಸ ನಿರ್ಣಯ?

ಕೊಲಂಬೊ (ಪಿಟಿಐ): ಶ್ರೀಲಂಕಾ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ. ಅವಿಶ್ವಾಸ ನಿರ್ಣಯ ಗೆಲ್ಲಲು ಬೇಕಿರುವ 113 ಸದಸ್ಯರ ಬಲವನ್ನು ವಿರೋಧಪಕ್ಷಗಳು ಹೊಂದಿವೆ ಎಂದು ಭಿನ್ನಮತೀಯ ಸಂಸದರೊಬ್ಬರು ತಿಳಿಸಿದ್ದಾರೆ.

ಸರ್ಕಾರದ ವಿರುದ್ಧ ಬೇಸರಗೊಂಡಿರುವ ಸಂಸದರಿಗೆ ವಿರೋಧ ಪಕ್ಷಗಳಾದ ಸಮಗಿ ಜನ ಬಾಲವೇಗಯ (ಎಸ್‌ಜೆಪಿ), ಮಾರ್ಕ್‌ಸಿಸ್ಟ್ ಜನತಾ ವಿಕ್‌ಮುತಿ ಪೆರಮುನ (ಜೆವಿಪಿ), ತಮಿಳ್ ರಾಷ್ಟ್ರೀಯ ಮೈತ್ರಿ (ಟಿಎನ್‌ಎ) ಬೆಂಬಲವಿದೆ ಎಂದು ಸಂಸದ ಉದಯ ಗಮ್ಮನ್‌ಪಿಲಾ ಹೇಳಿದ್ದಾರೆ.

ಹಣಕಾಸು ಸಚಿವ, ಅಧ್ಯಕ್ಷರ ತಮ್ಮ ಬಸಿಲ್ ರಾಜಪಕ್ಸ ವಿರುದ್ಧ ಟೀಕಾಪ್ರಹಾರ ನಡೆಸಿದ್ದಕ್ಕಾಗಿ ಉದಯ ಗಮ್ಮನ್‌ಪಿಲಾ ಮತ್ತು ವಿಮಲ್ ವೀರವಾನ್ಸಾ ಅವರನ್ನು ಸಂಪುಟದಿಂದ ವಜಾ ಮಾಡಲಾಗಿತ್ತು. ಗಮ್ಮಿನ್‌ಪಿಲಾ ಅವರು ಇಂಧನ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಈ ಇಬ್ಬರು ಪ್ರಧಾನಿ ಮಹಿಂದಾ ರಾಜಪಕ್ಸ ಅವರ ರಾಜೀನಾಮೆಗೂ ಆಗ್ರಹಪಡಿಸುತ್ತಿದ್ದಾರೆ.

ಸರ್ಕಾರ ದೇಶದಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ವಿಫಲವಾಗಿದೆ ಎಂಬ ಹಿನ್ನೆಲೆಯಲ್ಲಿ ಅಧ್ಯಕ್ಷ ಗೋಟಬಯ ತೀವ್ರ ಟೀಕೆಗೆ ಗುರಿಯಾಗಿದ್ದಾರೆ. 225 ಸದಸ್ಯ ಬಲದ ಸಂಸತ್ತಿನಲ್ಲಿ ಅವಿಶ್ವಾಸ ನಿರ್ಣಯ ಗೆಲ್ಲಲು 113 ಸದಸ್ಯರ ಬೆಂಬಲ ಬೇಕಿದೆ.


ಮಧ್ಯಂತರ ಸರ್ಕಾರ ರಚನೆಗೆ ಸಿದ್ಧ?

ಕೊಲಂಬೊ (ಪಿಟಿಐ): ದೇಶದಲ್ಲಿನ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಕ್ರಮವಾಗಿ ಶ್ರೀಲಂಕಾ ಅಧ್ಯಕ್ಷ ಗೋಟಬಯ ರಾಜಪಕ್ಸ ಅವರು ಮಧ್ಯಂತರ ಸರ್ಕಾರ ರಚಿಸಲು ಸಿದ್ಧರಿದ್ದಾರೆ ಎಂದು ಹಿರಿಯ, ಪ್ರಮುಖ ಬೌದ್ಧ ಬಿಕ್ಕುವೊಬ್ಬರು ಸೋಮವಾರ ತಿಳಿಸಿದ್ದಾರೆ.

ಏ.4ರಂದು ಬಿಕ್ಕುಗಳಿಗೆ ಬರೆದಿರುವ ಪತ್ರದಲ್ಲಿ ರಾಜಪಕ್ಷ ಈ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದು ಬೌದ್ಧ ಬಿಕ್ಕುಗಳ ಮುಖ್ಯ ರಿಜಿಸ್ಟ್ರಾರ್ ಮದಗೋಡ ಧಮ್ಮಾನಂದ ಹೇಳಿದರು. ಸಂಪುಟ ವಿಸರ್ಜಿಸಿ ಮಧ್ಯಂತರ ಸರ್ಕಾರ ರಚಿಸಬೇಕು ಎಂದು ಬಿಕ್ಕುಗಳು ಸಲಹೆ ಮಾಡಿದ್ದರು.

ನವಾಜ್‌ಗೆ ತುರ್ತು ಪಾಸ್‌ಪೋರ್ಟ್

ಇಸ್ಲಾಮಾಬಾದ್(ಪಿಟಿಐ): ಬ್ರಿಟನ್‌ನಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರಿಗೆ ತಾಯ್ನಾಡು ಪಾಕಿಸ್ತಾನಕ್ಕೆ ಬರಲು ಹೊಸ ಸರ್ಕಾರ ಪಾಸ್‌ಪೋರ್ಟ್ ನೀಡಿದೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ಹಾಲಿ ಪ್ರಧಾನಿ ಶಾಹಬಾಝ್ ಷರೀಫ್ ಅವರು ನವಾಜ್ ಷರೀಫ್ ಅವರ ತಮ್ಮ.



ನವಾಜ್ ಷರೀಫ್

ನೂತನ ಪ್ರಧಾನಿ ಶಾಹಬಾಝ್ ಷರೀಫ್ ಅವರ ಸರ್ಕಾರವು, ನವಾಜ್ ಅವರಿಗೆ ಪಾಸ್‌ಪೋರ್ಟ್ ನೀಡಿದೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯುನ್ ಪತ್ರಿಕೆ ವರದಿ ಮಾಡಿದೆ. ಅಲ್ಲದೆ ಅವರಿಗೆ ಸಾಮಾನ್ಯ ಪಾಸ್‌ಪೋರ್ಟ್ ನೀಡಲಾಗಿದೆ ಎಂದು ಜಿಯೊ ನ್ಯೂಸ್ ತಿಳಿಸಿದೆ.

72 ವರ್ಷದ ಮಾಜಿ ಪ್ರಧಾನಿ ನವಾಜ್ ಷರೀಫ್ ವಿರುದ್ಧದ ಹಲವು ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸರ್ಕಾರವು ತನಿಖೆ ಕೈಗೊಂಡಿತ್ತು. 2019ರಲ್ಲಿ ಚಿಕಿತ್ಸೆಗಾಗಿ 4 ವಾರಗಳ ಕಾಲ ವಿದೇಶಕ್ಕೆ ಹೋಗಲು ಲಾಹೋರ್ ಹೈಕೋರ್ಟ್ ಅವರಿಗೆ ಅನುಮತಿ ನೀಡಿತ್ತು. ಇದಾದ ಬಳಿಕ ಅವರು ಲಂಡನ್‌ಗೆ ಹೋಗಿದ್ದರು.

ಚುಟುಕು ಸುದ್ದಿ

ವಿಶ್ವದ ಹಿರಿಯ ಮಹಿಳೆ ನಿಧನ

ಟೋಕಿಯೊ (ಪಿಟಿಐ): ವಿಶ್ವದ ಅತ್ಯಂತ ಹಿರಿಯ ವ್ಯಕ್ತಿ, ಜಪಾನ್‌ನ ಫುಕುವೊಕಾದ ನಿವಾಸಿ ಕೇನ್ ತನಕಾ ಏಪ್ರಿಲ್ 19ರಂದು ನಿಧನರಾದರು. ಅವರಿಗೆ 119 ವರ್ಷವಾಗಿತ್ತು.

ತನಕಾ ಅವರು ರುಸ್ಸೊ–ಜಪಾನ್ ಯುದ್ಧ ನಡೆದಿದ್ದ 1904ಕ್ಕೆ ಒಂದು ವರ್ಷ ಮೊದಲು (ಜನವರಿ 2, 1903) ಜನಿಸಿದ್ದರು. ತಮ್ಮ ಜೀವಿತಾವಧಿಯಲ್ಲಿ ಮೇಜಿ, ತೈಶೋ, ಶೋವಾ, ಹೀಸೈ ಮತ್ತು ರೀವಾ ಅವರ ಆಡಳಿತಾವಧಿಯನ್ನು ಕಂಡಿದ್ದಾರೆ. ಕೇನ್ ತನಕಾಗೆ 116 ವರ್ಷವಾಗಿದ್ದಾಗ, ವಿಶ್ವದ ಅತ್ಯಂತ ಹಿರಿಯ ಮಹಿಳೆ ಎಂದು ಗಿನ್ನೆಸ್ ದಾಖಲೆ ಪುಸ್ತಕಕ್ಕೆ ಅವರ ಹೆಸರು ಸೇರ್ಪಡೆಯಾಗಿತ್ತು.

ಅಮೆರಿಕ: ಕೇರಳದ ವಿದ್ಯಾರ್ಥಿ ಸಾವು

ನ್ಯೂಯಾರ್ಕ್(ಪಿಟಿಐ): ಕೆರೆಯಲ್ಲಿ ಬಿದ್ದಿದ್ದ ಫುಟ್‌ಬಾಲ್ ಅನ್ನು ಎತ್ತಿಕೊಳ್ಳಲು ನೀರಿಗೆ ಇಳಿದಿದ್ದ ಕೇರಳ ಮೂಲದ ಪ್ರೌಢಶಾಲಾ ವಿದ್ಯಾರ್ಥಿ ಕ್ಲಿಂಟನ್ ಜಿ.ಅಜಿತ್ ಮೃತಪಟ್ಟಿರುವ ಘಟನೆ ಅಮೆರಿಕದ ನ್ಯೂಜೆರ್ಸಿಯಲ್ಲಿ ನಡೆದಿದೆ.

ಮಿಲ್ಫೋರ್ಡ್‌ನ ಕೆರೆ ಸಮೀಪದಲ್ಲಿ ಆಟವಾಡುತ್ತಿದ್ದಾಗ ಫುಟ್‌ಬಾಲ್ ನೀರಿಗೆ ಬಿದ್ದಿತು. ಇದನ್ನು ತೆಗೆದುಕೊಳ್ಳಲು ಕೆರೆಗೆ ಇಳಿದ 18 ವರ್ಷದ ವಿದ್ಯಾರ್ಥಿ ಸಾವನ್ನಪ್ಪಿದ್ದಾರೆ.

ನೇಪಾಳ: ನಾಲ್ವರು ಭಾರತೀಯರ ಸಾವು

ಕಠ್ಮಂಡು (ಪಿಟಿಐ): ನೇಪಾಳದ ಧಾಡಿಂಗ್ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಸಂಭವಿಸಿದ ಕಾರು ಮತ್ತು ಬಸ್ ನಡುವಿನ ಮುಖಾಮುಖಿ ಢಿಕ್ಕಿಯಲ್ಲಿ ನಾಲ್ವರು ಭಾರತೀಯ ಪ್ರವಾಸಿಗರು ಸೇರಿ ಐವರು ಮೃತಪಟ್ಟಿದ್ದಾರೆ.

ಕಾಶ್ಮೀರಕ್ಕೆ ಮೋದಿ ಭೇಟಿ: ಪಾಕ್ ಆಕ್ಷೇಪ

ಇಸ್ಲಾಮಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಜಮ್ಮು–ಕಾಶ್ಮೀರಕ್ಕೆ ಭೇಟಿ ನೀಡಿ ಚೆನಾಬ್ ನದಿ ನೀರನ್ನು ಬಳಸಿಕೊಂಡು ಆರಂಭಿಸುವ ರಾಟಲ್ ಮತ್ತು ಕ್ವಾರ್ ಜಲವಿದ್ಯುತ್ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿರುವುದಕ್ಕೆ ಪಾಕಿಸ್ತಾನ ವಿರೋಧ ವ್ಯಕ್ತಪಡಿಸಿದೆ.

ಇದು ಸಿಂಧೂ ನದಿ ನೀರಿನ ಹಂಚಿಕೆ ಒಪ್ಪಂದದ ನೇರ ಉಲ್ಲಂಘನೆ ಎಂದು ಪಾಕಿಸ್ತಾನ ಆರೋಪಿಸಿದೆ. ಕಾಶ್ಮೀರ ಸಮಸ್ಯೆಯನ್ನು ಮರೆಮಾಚಲು ಭಾರತ ಕೈಗೊಂಡಿರುವ ಇಂತಹ ಹತಾಶ ಪ್ರಯತ್ನಗಳಿಗೆ ಅಂತರರಾಷ್ಟ್ರೀಯ ಸಮುದಾಯ ಸಾಕ್ಷಿಯಾಗಿದೆ’ ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿ ಹೇಳಿಕೆಯೊಂದರಲ್ಲಿ ಟೀಕಿಸಿದೆ.



ಎರಡನೇ ವಿಕೆಟ್‌ಗೆ 110 ರನ್‌ಗಳ ಜೊತೆಯಾಟವಾಡಿದ ಶಿಖರ್ ಧವನ್–ಭಾನುಕ ರಾಜಪಕ್ಸ

ಮಯಂಕ್ ಪಡೆಗೆ ಮಣಿದ ಚೆನ್ನೈ

ಮುಂಬೈ (ಪಿಟಿಐ): ಮಧ್ಯಮ ಕ್ರಮಾಂಕದ ಅಂಬಟಿ ರಾಯುಡು ಭರ್ಜರಿ ಬ್ಯಾಟಿಂಗ್ ಮೂಲಕ ಭರವಸೆ ಮೂಡಿಸಿದರೂ 'ಫಿನಿಶರ್' ಖ್ಯಾತಿಯ ಮಹೇಂದ್ರ ಸಿಂಗ್ ಧೋನಿ ಎಡವಿದರು. ಹೀಗಾಗಿ ಪಂಜಾಬ್ ಕಿಂಗ್ಸ್ ತಂಡಕ್ಕೆ ಚೆನ್ನೈ ಸೂಪರ್ ಕಿಂಗ್ಸ್ ಮಣಿಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ 11 ರನ್‌ಗಳಿಂದ ಜಯ ಗಳಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಿಂದ ಆರನೇ ಸ್ಥಾನಕ್ಕೆ ಜಿಗಿಯಿತು. 8 ಪಂದ್ಯಗಳಲ್ಲಿ ಆರನೇ ಸೋಲು ಕಂಡ ರವೀಂದ್ರ ಜಡೇಜ ನೇತೃತ್ವದ ಚೆನ್ನೈ ಏಳನೇ ಸ್ಥಾನದಲ್ಲೇ ಉಳಿಯಿತು.

188 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈನ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ಅವರನ್ನು ಹೊರತುಪಡಿಸಿದರೆ ಅಗ್ರ ಕ್ರಮಾಂಕದ ಮೂವರು ಒಂದಂಕಿ ಮೊತ್ತ ಗಳಿಸಿ ವಾಪಸಾದರು. ತಂಡ 40 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದಾಗ ಕ್ರೀಸ್‌ಗೆ ಬಂದ ಅಂಬಟಿ ರಾಯುಡು ಭರ್ಜರಿ ಆರು ಸಿಕ್ಸರ್ ಮತ್ತು ಏಳು ಬೌಂಡರಿಗಳೊಂದಿಗೆ ಮಿಂಚಿ ಭರವಸೆ ಮೂಡಿಸಿದರು.

ಋತುರಾಜ್ ಔಟಾದ ನಂತರ ರವೀಂದ್ರ ಜಡೇಜ ಕೂಡ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಆದರೆ ಕೊನೆಯ ಓವರ್‌ಗಳಲ್ಲಿ ಒತ್ತಡ ಹೇರುವಲ್ಲಿ ಪಂಜಾಬ್ ಬೌಲರ್‌ಗಳು ಯಶಸ್ವಿಯಾದರು. ರಿಷಿ ಧವನ್ ಹಾಕಿದ ಕೊನೆಯ ಓವರ್‌ನಲ್ಲಿ ಚೆನ್ನೈ ಗೆಲುವಿಗೆ 27 ರನ್‌ಗಳು ಬೇಕಾಗಿದ್ದವು. ಕ್ರೀಸ್‌ನಲ್ಲಿ ಧೋನಿ ಇದ್ದ ಕಾರಣ ನಿರೀಕ್ಷೆ ಗರಿಗೆದರಿತ್ತು. ಮೊದಲ ಎಸೆತದಲ್ಲಿ ಧೋನಿ ಬ್ಯಾಟಿನಿಂದ ಸಿಕ್ಸರ್ ಸಿಡಿದಾಗ ಚೆನ್ನೈ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ನಂತರ ರಿಷಿ ಮೇಲುಗೈ ಸಾಧಿಸಿದರು. ಮೂರನೇ ಎಸೆತದಲ್ಲಿ ಧೋನಿ ವಿಕೆಟ್ ಉರುಳಿಸಿ ಅವರು ತಂಡದ ಜಯ ಖಚಿತಪಡಿಸಿದರು. ಐದನೇ ಎಸೆತದಲ್ಲಿ ಸಿಕ್ಸರ್ ಸಿಡಿಸಿ ರವೀಂದ್ರ ಜಡೇಜ ಸೋಲಿನ ಅಂತರ ಕಡಿಮೆ ಮಾಡಿದರು.



ಶಿಖರ್ ಧವನ್ ಅವರ ಆಟದ ಭಂಗಿ –ಪಿಟಿಐ ಚಿತ್ರ

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು–ರಾಜಸ್ಥಾನ ರಾಯಲ್ಸ್

ಸ್ಥಳ: ಎಂಸಿಎ ಕ್ರೀಡಾಂಗಣ, ಪುಣೆ

ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಶಿಖರ್ ಧವನ್ ಅರ್ಧಶತಕ: ಟಾಸ್ ಗೆದ್ದ ಚೆನ್ನೈ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಿಖರ್ ಧವನ್ (88; 59 ಎಸೆತ, 9 ಬೌಂಡರಿ, 2 ಸಿಕ್ಸರ್) ಮತ್ತು ಭಾನುಕ ರಾಜಪಕ್ಸ (42; 32 ಎ, 2 ಬೌಂ, 2 ಸಿ) ಅವರ ಅಮೋಘ ಜೊತೆಯಾಟದ ನೆರವಿನಿಂದ ಪಂಜಾಬ್ ಕಿಂಗ್ಸ್ 4 ವಿಕೆಟ್ ಕಳೆದುಕೊಂಡು 187 ರನ್ ಗಳಿಸಿತು. ಶಿಖರ್ ಜೊತೆ ಇನಿಂಗ್ಸ್ ಆರಂಭಿಸಿದ ನಾಯಕ ಮಯಂಕ್ ಅಗರವಾಲ್ 37 ರನ್ ಜೋಡಿಸಿದರು. ಆದರೆ ಶ್ರೀಲಂಕಾದ ಬೌಲರ್ ಮಹೀಶ್ ತೀಕ್ಷಣ ಆರನೇ ಓವರ್‌ನಲ್ಲಿ ಪೆಟ್ಟು ನೀಡಿದರು. ಕೇರಂ ಬಾಲ್ ಎಸೆತವನ್ನು ಫ್ರಂಟ್ ಫೂಟ್‌ನಲ್ಲಿ ಕಟ್ ಮಾಡಲು ಪ್ರಯತ್ನಿಸಿದ ಮಯಂಕ್ ಎಡವಿದರು. ಚೆಂಡು ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ಶಿವಂ ದುಬೆ ಅವರ ಕೈ ಸೇರಿತು.

ನಂತರ ಶಿಖರ್ ಮತ್ತು ರಾಜಪಕ್ಸ ಅವರ ಆಟ ರಂಗೇರಿತು. ಇಬ್ಬರೂ 110 ರನ್‌ಗಳ ಜೊತೆಯಾಟ ಆಡಿದರು. 18ನೇ ಓವರ್ ವರೆಗೆ ಅವರ ಆಟ ಮುಂದುವರಿಯಿತು. ಅರ್ಧಶತಕದತ್ತ ಹೆಜ್ಜೆ ಹಾಕಿದ್ದ ರಾಜಪಕ್ಸ ಅವರನ್ನು ಡ್ವೇನ್ ಬ್ರಾವೊ ವಾಪಸ್ ಕಳುಹಿಸಿದರು. ಅಷ್ಟರಲ್ಲಿ ಅರ್ಧಶತಕ ದಾಖಲಿಸಿದ್ದ ಶಿಖರ್ ಧವನ್ ಮತ್ತೆಯೂ ಬ್ಯಾಟಿಂಗ್ ವೈಭವ ಮುಂದುವರಿಸಿದರು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 4ಕ್ಕೆ 187 (20 ಓವರ್)

ಮಯಂಕ್ ಸಿ ದುಬೆ ಬಿ ತೀಕ್ಷಣ 18 (21 ಎ, 4x2), ಶಿಖರ್ ಔಟಾಗದೆ 88 (59ಎ, 4X9, 6X2), ಭಾನುಕ ಸಿ ದುಬೆ ಬಿ ಬ್ರಾವೊ 42 (32ಎ, 4x2, 6x2), ಲಿವಿಂಗ್‌ಸ್ಟೋನ್ ಸಿ ಮುಕೇಶ್ ಬಿ ಬ್ರಾವೊ 19 (7 ಎ ,4x1, 6x2), ಬೆಸ್ಟೊ ರನೌಟ್ (ಸ್ಯಾಂಟನರ್/ಧೋನಿ) 6 (3ಎ, 4X1)

ಇತರೆ (ಲೆಗ್‌ಬೈ 1, ನೋಬಾಲ್ 2, ವೈಡ್ 11) 14

ವಿಕೆಟ್ ಪತನ: 1-37 (ಮಯಂಕ್ ಅಗರವಾಲ್, 5.5), 2-147 (ಭಾನುಕ ರಾಜಪಕ್ಸ, 17.2), 3-174 (ಲಿಯಾಮ್ ಲಿವಿಂಗ್‌ಸ್ಟೋನ್, 19.1), 4-187 (ಜಾನಿ ಬೆಸ್ಟೊ, 19.6)

ಬೌಲಿಂಗ್: ಮುಕೇಶ್ ಚೌಧರಿ 4-0-36-0, ಮಹೀಶ್ ತೀಕ್ಷಣ 4-0-32-1, ಮಿಚೆಲ್ ಸ್ಯಾಂಟನರ್ 2-0-8-0, ರವೀಂದ್ರ ಜಡೇಜ 2-0-18-0, ಡ್ವೇನ್ ಪ್ರಿಟೋರಿಯಸ್ 4-0-50-0, ಡ್ವೇನ್ ಬ್ರಾವೊ 4-0-42-2

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 176 (20 ಓವರ್)

ಋತುರಾಜ್ ಸಿ ಮಯಂಕ್ ಬಿ ರಬಾಡ 30 (27ಎ, 4X4), ರಾಬಿನ್ ಸಿ ರಿಷಿ ಬಿ ಸಂದೀಪ್ 1 (7ಎ), ಸ್ಯಾಂಟನರ್ ಬಿ ಅರ್ಷದೀಪ್ 9 (15ಎ, 4X1), ಶಿವಂ ಬಿ ರಿಷಿ 8 (7ಎ, 4X1), ರಾಯುಡು ಬಿ ರಬಾಡ 78 (39ಎ, 4X7, 6X6), ಜಡೇಜ ಔಟಾಗದೆ 21 (16ಎ, 4X1, 6X1), ಧೋನಿ ಸಿ ಬೆಸ್ಟೊ ರಿಷಿ 12 (8ಎ, 4X1, 6X1), ಪ್ರಿಟೋರಿಯಸ್ ಔಟಾಗದೆ 1 (1ಎ)

ಇತರೆ (ಲೆಗ್‌ಬೈ 9, ವೈಡ್ 7) 16

ವಿಕೆಟ್ ಪತನ: 1-10 (ರಾಬಿನ್ ಉತ್ತಪ್ಪ, 1.5), 2-30 (ಮಿಚೆಲ್ ಸ್ಯಾಂಟನರ್, 5.3), 3-40 (ಶಿವಂ ದುಬೆ, 6.6), 4-89 (ಋತುರಾಜ್ ಗಾಯಕವಾಡ್, 12.3), 5-153 (ಅಂಬಟಿ ರಾಯುಡು, 17.5), 6-168 (ಮಹೇಂದ್ರ ಸಿಂಗ್ ಧೋನಿ, 19.3)

ಬೌಲಿಂಗ್: : ಕಗಿಸೊ ರಬಾಡ 4-0-23-2, ಸಂದೀಪ್ ಶರ್ಮಾ 4-0-40-1, ರಿಷಿ ಧವನ್ 4-0-39-2, ಅರ್ಷದೀಪ್ ಸಿಂಗ್ 4-0-23-1, ರಾಹುಲ್ ಚಾಹರ್ 3-0-30-0, ಲಿಯಾಮ್ ಲಿವಿಂಗ್‌ಸ್ಟೋನ್ 1-0-12-0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 11 ರನ್‌ಗಳ ಗೆಲುವು

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	7	6	1	0	0	12	0.396
ಹೈದರಾಬಾದ್	7	5	2	0	0	10	0.691
ರಾಜಸ್ಥಾನ	7	5	2	0	0	10	0.432
ಲಖನೌ	8	5	3	0	0	10	0.334
ಬೆಂಗಳೂರು	8	5	3	0	0	10	-0.472
ಪಂಜಾಬ್	8	4	4	0	0	8	-0.419
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	8	3	5	0	0	6	0.080
ಚೆನ್ನೈ	8	2	6	0	0	4	-0.538
ಮುಂಬೈ	8	0	8	0	0	0	-1.000

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ನಟರಾಜನ್	ಹೈದರಾಬಾದ್	15
ಡ್ವೇನ್ ಬ್ರಾವೊ	ಚೆನ್ನೈ	14

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	491
ರಾಹುಲ್	ಲಖನೌ	368
ಶಿಖರ್ ಧವನ್	ಪಂಜಾಬ್	302

ಬ್ಯಾಡ್ಮಿಂಟನ್: ಪ್ರಶಸ್ತಿ ಮೇಲೆ ಸಿಂಧು ಕಣ್ಣು

ಮನಿಲಾ, ಫಿಲಿಪ್ಪೀನ್ಸ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಮತ್ತು ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾಗುವ ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಏಷ್ಯಾ ಚಾಂಪಿಯನ್‌ಷಿಪ್ ನಡೆದಿರಲಿಲ್ಲ. ಎಚ್.ಎಸ್. ಪ್ರಣಯ್ ಗಾಯದ ಕಾರಣ ಈ ಬಾರಿ ಕಣಕ್ಕಿಳಿಯುತ್ತಿಲ್ಲ. ಮಹಿಳಾ ಡಬಲ್ಸ್ ವಿಭಾಗದಲ್ಲಿ ಆಡಬೇಕಿದ್ದ ಗಾಯತ್ರಿ ಗೋಪಿಚಂದ್ ಮತ್ತು ತ್ರೀಶಾ ಜೋಲಿ ಕೂಡ ಇದೇ ಕಾರಣದಿಂದ ಆಡುತ್ತಿಲ್ಲ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಲಕ್ಷ್ಯ ಅವರಿಗೆ ಚೀನಾದ ಲೀ ಸಿ ಫೆಂಗ್ ಸವಾಲು ಎದುರಾಗಿದೆ. ಸಿಂಧು, ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ಪಾಯ್ ಯು ಪೊ ಅವರನ್ನು ಎದುರಿಸುವರು.

ಕಿದಂಬಿ ಶ್ರೀಕಾಂತ್, ಬಿ.ಸಾಯಿ ಪ್ರಣೀತ್, ಸೈನಾ ನೆಹ್ವಾಲ್, ಆಕರ್ಷಿ ಕಶ್ಯಪ್, ಮಾಳವಿಕಾ ಬಂಸೋಡ್ ಕೂಡ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಚಿನ್ನ ಗೆದ್ದ ತರುಣ್

ನವದೆಹಲಿ (ಪಿಟಿಐ): ಭಾರತದ ತರುಣ್ ದಿಲ್ಲೋನ್ ಅವರು ಬ್ರೆಜಿಲ್ ಇಂಟರ್‌ನ್ಯಾಷನಲ್ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಬ್ರೆಜಿಲ್‌ನ ಸಾವೊ ಪಾಲೊದಲ್ಲಿ ನಡೆದ ಟೂರ್ನಿಯಲ್ಲಿ ಭಾರತದ ಆಟಗಾರರು, ಆಟಗಾರ್ತಿಯರು ಒಟ್ಟು 28 ಪದಕಗಳನ್ನು ಬಾಚಿಕೊಂಡಿದ್ದಾರೆ.

ಫುಟ್‌ಬಾಲ್: ರಿಯಲ್ ಮ್ಯಾಂಚೆಸ್ಟರ್ ಸೆಣಸು

ಮ್ಯಾಂಚೆಸ್ಟರ್: ಇಂಗ್ಲೆಂಡ್ ಮತ್ತು ಸ್ಪೇನ್‌ನ ಪ್ರಮುಖ ತಂಡಗಳು ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೆಣಸಲಿವೆ. ಎರಡು ಲೆಗ್‌ಗಳಲ್ಲಿ ಪಂದ್ಯಗಳು ನಡೆಯಲಿದ್ದು ಮೊದಲ ಲೆಗ್‌ನ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್ ಸಿಟಿ ಮತ್ತು ರಿಯಲ್ ಮ್ಯಾಡ್ರಿಡ್, ಎರಡನೇ ಪಂದ್ಯದಲ್ಲಿ ಲಿವರ್‌ಪೂಲ್ ಮತ್ತು ವಿಲಾರಿಯಲ್ ತಂಡಗಳು ಸೆಣಸಲಿವೆ.

ಎರಡನೇ ಲೆಗ್‌ನ ಮೊದಲ ಪಂದ್ಯದಲ್ಲಿ ವಿಲಾರಿಯಲ್ ತನ್ನ ತವರಿನಲ್ಲಿ ಲಿವರ್‌ಪೂಲ್ ತಂಡವನ್ನು ಎದುರಿಸಲಿದೆ. ರಿಯಲ್ ಮ್ಯಾಡ್ರಿಡ್ ತವರಿನಲ್ಲಿ ಮ್ಯಾಂಚೆಸ್ಟರ್ ಸಿಟಿ ತಂಡವನ್ನು ಎದುರಿಸಲಿದೆ.

ನಾಲ್ಕು ಆವೃತ್ತಿಗಳ ನಂತರ ಮೊದಲ ಬಾರಿ ಫೈನಲ್ ಪ್ರವೇಶಿಸುವ ನಿರೀಕ್ಷೆಯಲ್ಲಿ ರಿಯಲ್ ಮ್ಯಾಡ್ರಿಡ್ ಕಣಕ್ಕೆ ಇಳಿಯಲಿದೆ. ಮ್ಯಾಂಚೆಸ್ಟರ್ ಸಿಟಿ ಸತತ ಎರಡನೇ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸುವ ಭರವಸೆಯಲ್ಲಿದೆ.

ದಾಖಲೆಯ 13 ಬಾರಿ ಪ್ರಶಸ್ತಿ ಗೆದ್ದಿರುವ ರಿಯಲ್ ಮ್ಯಾಡ್ರಿಡ್ 16ರ ಘಟ್ಟದ ಪಂದ್ಯದಲ್ಲಿ ಪ್ಯಾರಿಸ್ ಸೇಂಟ್ ಜರ್ಮನ್ ತಂಡವನ್ನು ಮಣಿಸಿತ್ತು.



ಕ್ರಿಕೆಟ್: ಕರ್ನಾಟಕ ತಂಡಕ್ಕೆ ಸೋಲು

ಬೆಂಗಳೂರು: ಸೋನಿ ಯಾದವ್ (7ಕ್ಕೆ 3) ಹಾಗೂ ರಿತಿ ತೋಮರ್ (8ಕ್ಕೆ 3) ಅವರ ಬೌಲಿಂಗ್ ದಾಳಿಗೆ ಕುಸಿದ ಕರ್ನಾಟಕ ತಂಡವು ಬಿಸಿಸಿಐ ಮಹಿಳಾ ಟಿ20 ಟೂರ್ನಿಯಲ್ಲಿ ಸೋಲನುಭವಿಸಿತು. ರಾಜ್‌ಕೋಟ್‌ನ ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ದೆಹಲಿ ತಂಡವು ಆರು ವಿಕೆಟ್‌ಗಳಿಂದ ಕರ್ನಾಟಕ ಎದುರು ಗೆದ್ದಿತು.

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಜೈನ್ ವಿವಿಯ ಶ್ರೀಹರಿ, ಶಿವ, ಶೃಂಗಿ ಕೂಟ ದಾಖಲೆ

ಮನೆಯಲ್ಲಿ ಸಂಕಟ; ಕೊಳದಲ್ಲಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯ ಕಾಡಿದ್ದರಿಂದ ತಂದೆ ಶ್ರೀಧರ್ ಉದ್ಯೋಗಕ್ಕೆ ರಾಜೀನಾಮೆ ನೀಡ ಬೇಕಾಯಿತು. ಮನೆಯಲ್ಲಿ ಮೌನ ಆವರಿಸಿತು. ಆದರೂ ಶಿವ, ಛಲ ಬಿಡಲಿಲ್ಲ. ಕೈಚೆಲ್ಲಿ ಕುಳಿತುಕೊಳ್ಳಲಿಲ್ಲ. ಸಂಕಷ್ಟದ ಪರಿಸ್ಥಿತಿಯಲ್ಲೂ ಈಜುಕೊಳದಲ್ಲಿ ಸಂಭ್ರಮಿಸಿ ಚಿನ್ನದ ಮೀನಾಗಿ ಹೊರಹೊಮ್ಮಿದರು.

ನಗರದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಆತಿಥೇಯ ಜೈನ್ ವಿವಿಗೆ ಮೊದಲ ಚಿನ್ನ ಗೆದ್ದುಕೊಟ್ಟ ಬೆಂಗಳೂರಿನ ಶಿವ, ಎರಡು ಕೂಟ ದಾಖಲೆಗಳನ್ನು ಬರೆದರು. ಬೆಳಿಗ್ಗೆ 200 ಮೀಟರ್ಸ್ ವೈಯಕ್ತಿಕ ಮೆಡ್ಲೆಯಲ್ಲೂ ಸಂಜೆ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲೂ ದಾಖಲೆ ಮಾಡಿದರು.

ಪುರುಷರ 50 ಮೀ ಫ್ರೀಸ್ಟೈಲ್‌ನಲ್ಲಿ ಶ್ರೀಹರಿ ನಟರಾಜ್ 23.23 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ದಾಖಲೆ ಮಾಡಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯೂ ಆಗಿದೆ. ಮಹಿಳಾ ವಿಭಾಗದ 100 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಶೃಂಗಿ ಬಾಂದೇಕರ್ 1 ನಿಮಿಷ 7.50 ಸೆಕೆಂಡುಗಳ ಸಾಧನೆಯೊಂದಿಗೆ ದಾಖಲೆ ಬರೆದರು.



ಶಿವ ಶ್ರೀಧರ್ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಗುರಿಯತ್ತ ಮುನ್ನುಗ್ಗಿದ ಕ್ಷಣ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಫಲಿತಾಂಶಗಳು: ಈಜು: ಪುರುಷರ 50 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಜೈನ್ ವಿವಿ)–1. ಕಾಲ: 23.23 ಸೆ (ಕೂಟ ದಾಖಲೆ; ಹಳೆಯದು: 23.78, ಮಿಹಿರ್ ಆಮ್ರೆ); ವಿಕಾಸ್ ಪ್ರಭಾಕರ್ (ಎಸ್‌ಆರ್‌ಎಂ ವಿವಿ)–2, ಹೀರ್ ಶಾ (ಮುಂಬೈ ವಿವಿ); 100 ಮೀ ಬ್ಯಾಕ್‌ಸ್ಟ್ರೋಕ್: ಶಿವ ಶ್ರೀಧರ್ (ಜೈನ್ ವಿವಿ)–1. ಕಾಲ: 57.38 ಸೆ (ಕೂಟ ದಾಖಲೆ; ಹಳೆಯದು: 58.69, ಸಿದ್ಧಾರ್ಥ್ ಸೇಜ್ವಾಲ್); ಸಿದ್ಧಾರ್ಥ್ ಸೇಜ್ವಾಲ್ (ಪಂಜಾಬ್ ವಿವಿ)–2, ಬೆನೆಡಿಕ್ಟನ್ ರುಹಿತ್ (ಅಣ್ಣಾ ವಿವಿ); 200 ಮೀ ಬ್ಯಾಕ್‌ಸ್ಟ್ರೋಕ್: ಧನುಷ್ ಶೇಖರ್ (ಅಣ್ಣಾ ವಿವಿ)–1. ಕಾಲ: 2:20.17 (ಕೂಟ ದಾಖಲೆ: ಹಳೆಯದು: 2:23.41, ಎಸ್.ಪಿ.ಲಿಖಿತ್); ಹೇಮರಾಜ್ ಪಟೇಲ್ (ಸಿಲ್ವರ್ ಓಕ್ ವಿವಿ)–2, ಕೃತ್ಯುಷ್ ಸಿಂಗ್ (ಅಡಮಾಸ್ ವಿವಿ)–3; 200 ಮೀ ವೈಯಕ್ತಿಕ ಮೆಡ್ಲೆ: ಶಿವ ಶ್ರೀಧರ್ (ಜೈನ್ ವಿವಿ)–1. ಕಾಲ: 2:05.43 (ಕೂಟ ದಾಖಲೆ. ಹಳೆಯ ದಾಖಲೆ: 2:13.66, ತಿರುಮಾರನ್ ಸೇತುಮಾಣಿಕ್ಯಂ), ಬೆನೆಡಿಕ್ಟನ್ ರುಹಿತ್ (ಅಣ್ಣಾ ವಿವಿ)–2, ಸಿದ್ಧಾರ್ಥ್ ಸೇಜ್ವಾಲ್ (ಪಂಜಾಬ್ ವಿವಿ)–3; ಪುರುಷರ 400 ಮೀ ಫ್ರೀಸ್ಟೈಲ್: ಶುಭಂ ಧೈಗುಡೆ (ಸಾವಿತ್ರಿಬಾಯಿ ಫುಲೆ ವಿವಿ, ಪುಣೆ)–1. ಕಾಲ: 4:17.67, ಅಭಿಲಾಷ್ ಚಲ್ಲಗನಿ (ಜವಾಹರಲಾಲ್ ನಹರು ತಾಂತ್ರಿಕ ವಿವಿ)–2, ಮ್ಯಾಥ್ಯೂ ಕೋಶಿ (ಎಂ.ಎಸ್. ರಾಮಯ್ಯ ವಿವಿ)–3.

ಮಹಿಳೆಯರ 50 ಮೀ ಫ್ರೀಸ್ಟೈಲ್: ರುತುಜಾ ಖಾಡೆ (ಶಿವಾಜಿ ವಿವಿ)–1. ಕಾಲ: 27.38 (ಕೂಟ ದಾಖಲೆ; ಹಳೆಯದು: 28.00, ಸಾಧ್ವಿ ದುರಿ), ಸಾಧ್ವಿ ದುರಿ (ಸಾವಿತ್ರಿಬಾಯಿ ಫುಲೆ ವಿವಿ)–2, ಖುಷ್ನಜ್ ಸೋನಿ (ಕ್ರೈಸ್ಟ್ ವಿವಿ)–3; 100 ಮೀ ಬ್ಯಾಕ್‌ಸ್ಟ್ರೋಕ್: ಶೃಂಗಿ ಬಾಂದೇಕರ್ (ಜೈನ್ ವಿವಿ)–1. ಕಾಲ: 1:07.50 (ಕೂಟ ದಾಖಲೆ. ಹಳೆಯದು: 1:10.42, ದಾಮಿನಿ ಗೌಡ), ಪ್ರತ್ಯೂಷಾ ರೇ (ಉತ್ಕಲ್ ವಿವಿ)–2, ದಾಮಿನಿ ಗೌಡ (ರಾಜೀವ್‌ಗಾಂಧಿ ವಿವಿ)–3; 200 ಮೀ ಬ್ರೆಸ್ಟ್‌ಸ್ಟ್ರೋಕ್: ಜ್ಯೋತಿ ಪಾಟೀಲ್ –1. ಕಾಲ: 2:46.54, ಆರತಿ ಪಾಟೀಲ್ (ಮುಂಬೈ ವಿವಿ)–2, ಕಲ್ಯಾಣಿ ಸಕ್ಸೇನ (ವೀರ್ ನರ್ಮದಾ ವಿವಿ)–3; 400 ಮೀ ಫ್ರೀಸ್ಟೈಲ್: ವಿ.ವರ್ಷಾ (ಮದ್ರಾಸ್ ವಿವಿ)–1. ಕಾಲ: 4:59.63, ವಿ.ಪ್ರೀತಾ (ಬೆಂಗಳೂರು ವಿವಿ)–2, ಆರ್. ನಿರ್ಮಲಾ (ಕೇರಳ ವಿವಿ)–3. 4x200 ಮೀ ಫ್ರೀಸ್ಟೈಲ್: (ಮದ್ರಾಸ್ ವಿವಿ)–1. ಕಾಲ: 9:53.66, ಜಾಧವ್‌ಪುರ್ ವಿವಿ–2, ಜೈನ್ ವಿವಿ–3.

ವೇಟ್‌ಲಿಫ್ಟಿಂಗ್: ಮಹಿಳೆಯರ 59 ಕೆಜಿ: ಸ್ನೇಹಾ (ಮಹರ್ಷಿ ದಯಾನಂದ್ ವಿವಿ)–1. ಭಾರ: 169 ಕೆಜಿ (73 ಕೆಜಿ ಸ್ನ್ಯಾಚ್,96 ಕೆಜಿ ಕ್ಲೀನ್–ಜರ್ಕ್), ಮೋತಿ ಜೈನ್ (ಕೆಐಐಟಿ)–2, ಸೊನಾಲಿ ಯದು (ಹೇಮಚಂದ್ ಯಾದವ್ ವಿವಿ)–3; 64 ಕೆಜಿ: ಕೋಮಲ್ ಖಾನ್ (ಚರಣ್ ಸಿಂಗ್ ವಿವಿ)–1. ಭಾರ: 185 ಕೆಜಿ (83+102ಕೆಜಿ), ದಿತಿಮೊನಿ ಸೋನೊವಾಲ್–2, ಅನ್ನು (ಇಬ್ಬರೂ (ಚಂಡೀಗಢ ವಿವಿ)–3. ಪುರುಷರ 73 ಕೆಜಿ: ಜುತುರಿ ಕೋಟೇಶ್ವರ ರಾವ್ (ಕೃಷ್ಣ ವಿವಿ)–1. ಭಾರ: 278 ಕೆಜಿ (124+154 ಕೆಜಿ), ಕಿರಣ್ ರವೀಂದ್ರ (ಕವಯಿತ್ರಿ ಬಹಿನಾ ಬಾಯಿ ಚೌಧರಿ ವಿವಿ)–2, ವಲ್ಲೂರಿ ನರಸಿಂಹ ನಾಯ್ಡು (ಆಂಧ್ರ ವಿವಿ)–3.

ಅರುಣ್ ಲಾಲ್‌ಗೆ 66ರಲ್ಲಿ ಎರಡನೇ ವಿವಾಹ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅರುಣ್‌ಲಾಲ್ ಎರಡನೇ ವಿವಾಹಕ್ಕೆ ಸಜ್ಜಾಗಿದ್ದು 'ಹಲ್ದಿ' ಕಾರ್ಯಕ್ರಮದ ಚಿತ್ರಗಳು ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿವೆ. ಮೇ ಎರಡರಂದು ಮದುವೆಗೆ ಮುಹೂರ್ತ ನಿಶ್ಚಯವಾಗಿದೆ. ಬಹುಕಾಲದ ಗೆಳತಿ, 38 ವರ್ಷದ ಬುಲ್‌ಬುಲ್ ಸಹಾ ಅವರಿಗೆ ತಾಳಿ ಕಟ್ಟಲಿರುವ ಅರುಣ್ ಅವರ ವಯಸ್ಸು ಈಗ 66.

ಕ್ರಿಕೆಟ್‌ನಿಂದ ನಿವೃತ್ತರಾದ ನಂತರ ಕ್ರಿಕೆಟ್‌ನ ವೀಕ್ಷಕ ವಿವರಣೆಯಲ್ಲಿ ತೊಡಗಿದ್ದ ಅರುಣ್ ಲಾಲ್ 2016ರಲ್ಲಿ ಕ್ಯಾನ್ಸರ್‌ಗೆ ಒಳಗಾಗಿದ್ದರು. ಗುಣಮುಖರಾದ ನಂತರ ಬಂಗಾಳ ಕ್ರಿಕೆಟ್ ತಂಡದ ಕೋಚ್ ಆಗಿ ನೇಮಕಗೊಂಡಿದ್ದರು.

ಮೊದಲ ಪತ್ನಿಯ ಸಮ್ಮತಿಯೊಂದಿಗೆ ಮದುವೆಗೆ ಸಿದ್ಧರಾಗಿದ್ದಾರೆ ಎಂದು ವೆಬ್‌ಸೈಟ್‌ಗಳು ವರದಿ ಮಾಡಿವೆ.



ಅರುಣ್ ಲಾಲ್ ಮತ್ತು ಬುಲ್‌ಬುಲ್ ಸಹಾ –ಟ್ವಿಟರ್ ಚಿತ್ರ

ಫಾರ್ಮುಲಾ 3: ಕುಶ್‌ಗೆ ಐದನೇ ಸ್ಥಾನ

ಇಮೊಲಾ, ಇಟಲಿ (ಪಿಟಿಐ): ಭಾರತದ ಕುಶ್ ಮೈನಿ ಇಲ್ಲಿ ನಡೆದ ಫೀಚರ್ ರೇಸ್‌ನಲ್ಲಿ ಐದನೇ ಸ್ಥಾನ ಗಳಿಸಿದರು. ಇದರೊಂದಿಗೆ ಫಾರ್ಮುಲಾ 3 ಚಾಂಪಿಯನ್‌ಷಿಪ್‌ನಲ್ಲಿ ಈ ವರ್ಷದ ಮೊದಲ ಪಾಯಿಂಟ್ ಕಲೆಹಾಕಿದರು.

ಎಮಿಲಿಯಾ ರೊಮಾಗ್ನಾ ಗ್ರ್ಯಾನ್‌ಪ್ರಿ ಅಂಗವಾಗಿ ನಡೆಯುತ್ತಿರುವ ಐತಿಹಾಸಿಕ ಇಮೊಲಾ ಸರ್ಕ್ಯೂಟ್‌ನಲ್ಲಿ ಬೆಂಗಳೂರಿನ ಚಾಲಕ ಮಿಂಚಿದರು. ಶನಿವಾರ ನಡೆದ ಸ್ಪ್ರಿಂಟ್ ರೇಸ್‌ನಲ್ಲಿ ಮೈನಿ 20ನೇ ಸ್ಥಾನ ಲಭಿಸಿತ್ತು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕೋವಿಡ್ ನಾಲ್ಕನೇ ಅಲೆ ಸಾಧ್ಯತೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಿರುವ ಕ್ರಮ ಸರಿಯೇ?

QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಸೆಮಿಗೆ ಕರ್ನಾಟಕ

ಮಲಪ್ಪುರಂ (ಪಿಟಿಐ): ಗುಜರಾತ್ ತಂಡಕ್ಕೆ ಆಘಾತ ನೀಡಿದ ಕರ್ನಾಟಕ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡಕ್ಕ 4–0ಯಿಂದ ಜಯ ಒಲಿಯಿತು. ತಂಡದ ಪರ ಸುಧೀರ್ ಕೋಟಿಕೇಲ (12 ಮತ್ತು 29ನೇ ನಿಮಿಷ), ಕಮಲೇಶ್ ಪಿ. (28ನೇ ನಿ.) ಮತ್ತು ಮಗೇಶ್ ಸಿಲ್ವಾ (60ನೇ ನಿ.) ಗೋಲು ದಾಖಲಿಸಿದರು. ಸೆಮಿಗೆ ತಲುಪಲು ರಾಜ್ಯ ತಂಡಕ್ಕೆ ಈ ಪಂದ್ಯದಲ್ಲಿ 3–0ಯಿಂದ ಜಯ ಅಗತ್ಯವಿತ್ತು.

ಗುರುವಾರ ನಡೆಯುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ತಂಡವು ಆತಿಥೇಯ ಕೇರಳವನ್ನು ಎದುರಿಸಲಿದೆ.

ರಾಷ್ಟ್ರೀಯ ಟಿಟಿ: ಶರತ್‌ಗೆ ಕಿರೀಟ

ಶಿಲ್ಲಾಂಗ್ (ಪಿಟಿಐ): ಅಚಂತ ಶರತ್ ಕಮಲ್ ಅವರು ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದರೊಂದಿಗೆ ಅವರು 10ನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಸೋಮವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 39 ವರ್ಷದ ಶರತ್ 7-11, 12-10, 9-11, 7-11, 12-10, 11-9, 11-6ರಿಂದ ಜಿ.ಸತ್ಯನ್ ಅವರನ್ನು ಸೋಲಿಸಿದರು.

ಮಹಿಳಾ ಸಿಂಗಲ್ಸ್ ಪ್ರಶಸ್ತಿಯು ಶ್ರೀಜಾ ಅಕುಲ್ ಪಾಲಾಯಿತು. ಫೈನಲ್ ಪಂದ್ಯದಲ್ಲಿ ಶ್ರೀಜಾ 11-8, 11-13, 12-10, 11-8, 11-6ರಿಂದ ಮೌಮಾ ದಾಸ್ ಅವರನ್ನು ಮಣಿಸಿದರು.